VEC, Library
001934

ಶ್ರೀ ಚೆನ್ನಕೇಶವ

# ಅನ್ತಃಪುರಗೀತೆ

ಡಿ. ವಿ. ಜಿ.

ಾವ್ಯಾಲಯ ಮೈಸೂರು

VEC, Library
001934

603K

ಕಾವ್ಯ

VECKAN900

VIJAYA EVENING COLLEGE,
LIBRARY
BANGALORE-4.
ACCN. NO. 1934
SECTION. 
COST Rs 8/=
Date 19.2.1970 Librarian.

1934

# ಅನ್ತಃಪುರಗೀತೆ

ಶ್ರೀ ಕೇಶವದೇವಾಲಯದ ಮುಖದ್ವಾರ

ಕನ್ನಡ ಕಾವ್ಯಮಾಲೆ

ಶ್ರೀ ಚೆನ್ನಕೇಶವ

# ಅನ್ತಃಪುರಗೀತೆ

ಡಿ. ವಿ. ಜಿ.

ರಸೋ ವೈ ಸಃ |
ರಸಗ್ಂ ಹ್ಯೇವಾಯಂ ಲಬ್ಧ್ವಾಽಽನಂದೀ ಭವತಿ ||
—ತೈತ್ತಿರೀಯೋಪನಿಷತ್ತು, ೨-೭

ಕಾವ್ಯಾಲಯ : ಪ್ರಕಾಶಕರು
ಮೈಸೂರು

ಮೊದಲನೆಯ ಮುದ್ರಣ: ೧೯೫೦
ಎರಡನೆಯ ಮುದ್ರಣ: ೧೯೬೭

© *D. V. Gundappa, Bangalore*
*All Rights Reserved*

ಈ ಗ್ರಂಥದ ಸರ್ವಸ್ವಾಮ್ಯ ಶ್ರೀ ಡಿ. ವಿ. ಗುಂಡಪ್ಪನವರದು

ಮೈಸೂರು ಪ್ರೆಸ್ಸಿನಲ್ಲಿ ಮುದ್ರಿತವಾಗಿ
ಕಾರ್ಯಾಲಯದ ಶ್ರೀ ಕೂಡಲಿ ಚಿದಂಬರಂ
ಅವರಿಂದ ಪ್ರಕಟಿತವಾದದ್ದು

# ಮುನ್ನುಡಿ—೧

"ಬೇಲೂರಿನ ಶಿಲಾ ಬಾಲಿಕೆಯರು" ಎಂಬ ಪದ್ಯಾವಳಿ ನನ್ನ "ನಿವೇದನ" ಪುಸ್ತಕದಲ್ಲಿ ಪ್ರಕಟವಾಗಿ (೧೯೨೪) ಇಂದಿಗೆ ಸುಮಾರು ೨೬ ವರ್ಷಗಳಾಗಿವೆ. ಅಲ್ಲಿಂದೀಚೆಗೆ ಆಗಾಗ ಬರೆದುವಾಗಿ ೧೫–೨೦ ವರ್ಷಗಳ ಹಿಂದಿನಿಂದ ಹಳೆಯ ಕಾಗದದ ಕಟ್ಟುಗಳಲ್ಲಿ ನಿದ್ರಿಸುತ್ತಿದ್ದ ಈ "ಅನ್ತಃಪುರ ಗೀತೆಯು" ಪ್ರಬಂಧಗಳು ಈಗ ಹೀಗೆ ಹೊರಕ್ಕೆ ಬಂದಿರಲು ಶ್ರೀಮಾನ್ ಚಿದಂಬರಂ ಅವರ ಉತ್ಸಾಹ ಮುಖ್ಯಕಾರಣ. ಒಂದು ದಿನ ಯಾವುದೋ ಮಾತುಕಥೆಯ ಪ್ರವಾಹದ ಮಧ್ಯೆ ಅವರಾಡಿದ ಸ್ನೇಹವಚನದಿಂದ ನನ್ನ ಮನಸ್ಸು ಬಿಗಿತಪ್ಪಿದಾಗ ಈ ನನ್ನ ಗುಟ್ಟಿನ ಕೆಲಸವನ್ನು ಕುರಿತು ಬಾಯಿಬಿಟ್ಟೆ. ಅದನ್ನವರು ಪಟ್ಟಾಗಿ ಹಿಡಿದು ಪ್ರಕಟನೆಯ ಭಾರವನ್ನೆಲ್ಲ ತಾವು ವಹಿಸಿಕೊಳ್ಳುವುದಾಗಿ ಹೇಳಿ ಪ್ರೋತ್ಸಾಹಿಸಿದರು. ನಾನು ಒಪ್ಪಿಬಿಟ್ಟೆ.

ಶ್ರೀ ಚಿದಂಬರಂ ಹೇಳಿದ್ದನ್ನು ನಡಸಿದ್ದಾರೆ; ಪರಿಷ್ಕಾರಕಾರ್ಯದಲ್ಲಿ ಸಹಕರಿಸಿದ್ದಾರೆ; ಅಚ್ಚಿನ ಕರಡುಗಳನ್ನು ತಿದ್ದಿದ್ದಾರೆ; ಅಕಾರಾದಿ ಪಟ್ಟಿಕೆಗಳನ್ನು ರಚಿಸಿದ್ದಾರೆ; ಪುಸ್ತಕವನ್ನು ಈ ರೂಪಕ್ಕೆ ತರಲು ಅನೇಕ ಬಗೆಗಳಲ್ಲಿ ಶ್ರಮಿಸಿದ್ದಾರೆ.

ಈ ಗೀತೆಗಳಿಗೆ ಜೀವಾಧಾರ ಪ್ರಾಯಗಳಾದ ಚಿತ್ರಪಟಗಳಿಗಾಗಿ ಅನೇಕ ಮಂದಿ ಮಿತ್ರರಿಗೆ ಋಣಿಯಾಗಿದ್ದೇನೆ. ಅವರಲ್ಲಿ ಮೊದಲನೆಯವರು ಮೈಸೂರು ಸಂಸ್ಥಾನದ ನಿವೃತ್ತ ಮಂತ್ರಿಗಳು ಶ್ರೀಮಾನ್ ಎಂ. ಎ. ಶ್ರೀನಿವಾಸನ್ ಅವರು. ಕೊಂಚಕಾಲದ ಉಪಯೋಗಕ್ಕಾಗಿ ಅವರು ಬಹು ಕೃಪೆಯಿಂದ ಸೊಗಸಾದ ಛಾಯಾಪಟಗಳನ್ನು ತರಿಸಿಕೊಟ್ಟರು.

ಈಗ ಇಲ್ಲಿ ಪ್ರಕಟವಾಗಿರುವ ಸುಮಾರು ೫೧ ತುಂಬುಪುಟದ ಛಾಯಾಚಿತ್ರಗಳಿಗಾಗಿ ಮೈಸೂರು ಸರಕಾರಕ್ಕೂ ಅದರ ಪ್ರಾಚೀನಾನ್ವೇಷಣ (ಆರ್ಕಿಯೊಲಾಜಿಕಲ್) ಶಾಖೆಗೂ ಆ ಶಾಖೆಯ ಅಧಿಕಾರಿಗಳಿಗೂ ನಾನು ಅತ್ಯಂತ ಕೃತಜ್ಞತೆಯಿಂದ ವಂದನೆಗಳನ್ನರ್ಪಿಸುತ್ತೇನೆ. ಅವರು ಚಿತ್ರಗಳನ್ನೂ 'ಶಾಂತಲಾ - ವಿಷ್ಣುವರ್ಧನ' ಪಡಿಯಚ್ಚನ್ನೂ ಒದಗಿಸಿ ಅನುಮತಿಕೊಟ್ಟು ಉಪಕರಿಸಿದ್ದಾರೆ.

ಬೇಲೂರಿನ ಶ್ರೀ ಚೆನ್ನಕೇಶವ ದೇವಾಲಯದ ವರ್ಣನೆಯನ್ನೂ ಅದರ ಕಟ್ಟಡದ ಚರಿತ್ರೆಯನ್ನೂ ತಿಳಿದುಕೊಳ್ಳಬಯಸುವವರು ಈ ಕೆಳಗೆ ಹೇಳಿರುವ ಗ್ರಂಥಗಳನ್ನು ನೋಡಬಹುದು ; ಅವು ಇಂಗ್ಲಿಷಿನಲ್ಲಿವೆ :–

*The Kesava Temple at Belur*—By R. Narasimhachar (No. II, Mysore Archaeological Series, 1919);

*Report of the Mysore Archaeological Department*, 1931;

*A Guide to Belur*—(*Mysore Govt. Publication*) 1943.

*　　*　　*　　*

ಎಷ್ಟು ಓದಿದರೂ ನೋಡಿದ್ದಕ್ಕೆ ಸಮನಾಗದು. ಹೋಗಿ ನೋಡಬೇಕು ; —ತೆರೆದ ಕಣ್ಣಿಂದ ನೋಡಬೇಕು.

*　　*　　*　　*

ಈ ಪುಸ್ತಕದಲ್ಲಿಯ ಹಾಡುಗಳಿಗಾಗಿ ಸೂಚಿಸಿರುವ ರಾಗಗಳನ್ನು ಸರಿ ನೋಡಿ ತಾಳ ನಿಷ್ಕರ್ಷೆಮಾಡಿಕೊಟ್ಟಿರುವವರು ವೈಣಿಕ ವಿದ್ವಾನ್ ಶ್ರೀ ಎಲ್. ರಾಜಾರಾವ್, ಬಿ. ಎಸ್ ಸಿ., ಅವರು. ಅವರ ಕೃಪೆ ಸಹಕಾರಗಳಿಗಾಗಿ ಅವರನ್ನು ಮನಃಪೂರ್ವಕವಾಗಿ ವಂದಿಸುತ್ತೇನೆ.

ಹೆಚ್ಚಾಗಿ ಸಂಗೀತ ಪರಿಶ್ರಮವಿಲ್ಲದವರು ಕೂಡ ಈ ಹಾಡುಗಳನ್ನು ಹಾಡಲನುಕೂಲಿಸಬೇಕೆಂದು ಅವುಗಳಿಗೆ ಬಳಕೆಯ ರಾಗಗಳನ್ನು ಪಯೋಗಿಸಿ ಸುಲಭವಾದ ಧಾಟಿಗಳನ್ನು ಇರಿಸಿದೆ. ಇಲ್ಲಿ ಸೂಚಿಸದೆ ಇರುವ ರಾಗಗಳನ್ನೂ ಹಾಡಬಲ್ಲವರು ಅವರವರ ಅಭಿರುಚಿಗೆ ತಕ್ಕಂತೆ ಈ ಕೃತಿಗಳಿಗೆ ರಾಗ ಜೋಡಿಸಿ ಹಾಡಿಕೊಳ್ಳಬಹುದಾಗಿದೆ.

ಬೇಲೂರಿನ ಶ್ರೀ ಚೆನ್ನಕೇಶವ ಸನ್ನಿಧಿಯ ಆಗಮಿಕರತ್ನ ಶ್ರೀ ಮುತ್ತು ಭಟ್ಟರವರು ಶಿಲ್ಪಕೃತಿಗಳ ಸ್ವಾರಸ್ಯ ವಿವರಣೆಯಿಂದ ಸಹಾಯ ಕೊಟ್ಟಿದ್ದಾರೆ ಮತ್ತು ಇತರ ರೀತಿಗಳಲ್ಲಿ ಉಪಕಾರಮಾಡಿದ್ದಾರೆ. ಶ್ರೀ ನಿಟ್ಟೂರು ಶ್ರೀನಿವಾಸರಾಯರವರು ಒಂದು ಸಲ ಯಾತ್ರಾನುಕೂಲತೆಯನ್ನೊದಗಿಸಿಯೂ ಶ್ರೀ ಪಾಣ್ಯಂ ಶ್ರೀನಿವಾಸರಾಯರವರು (Photo) ಛಾಯಾಗ್ರಹಣಕ್ಕಾಗಿ ಪರಿಶ್ರಮಿಸಿಯೂ ಉಪಕರಿಸಿದ್ದಾರೆ.

ಹೀಗೆ ಬಹುಮಂದಿ ಮಿತ್ರರ ಉಪಕಾರದಿಂದ ಸಿದ್ಧವಾಗಿರುವುದು ಈ ಕೃತಿ. ಇದಕ್ಕೆ ಇನ್ನು ಬೇಕಾಗಿರುವುದು ಮಹಾಜನರ ಕೃಪಾವಲೋಕನ.

ಬಸವನಗುಡಿ, ಬೆಂಗಳೂರು,　　　　ಡಿ. ವಿ. ಜಿ.

ಜನವರಿ ೧೯೫೦.

# ಮುನ್ನುಡಿ—೨

ಅನ್ತಃಪುರಗೀತೆ ಮೊದಲು ಪ್ರಕಟವಾದಂದಿನಿಂದ ಹದಿನಾರು ವರ್ಷ ಕಳೆದ ಮೇಲೆ ಈಗ ಎರಡನೆಯಸಾರಿ ಪ್ರಕಟವಾಗುತ್ತಿದೆ. ಈಗಲಾದರೂ ಈ ಯೋಗ ಬಂತಲ್ಲಾ ಎಂದು ನನಗೆ ಸಂತೋಷ. ಆಗ ಈ ಹೊಸಜಾತಿಯ ಕೃತಿಯನ್ನು ಮಹಾಜನ ಹೇಗೆ ಕಂಡಾರೋ ಎಂಬ ಶಂಕೆ ಮನಸ್ಸಿನಲ್ಲಿತ್ತು. ಈಗ ಅಷ್ಟು ಅಧೈರ್ಯಕ್ಕೆ ಕಾರಣವಿಲ್ಲ—ಎನ್ನಿಸುವಷ್ಟುಮಟ್ಟಿಗೆ ಗೇಯಸಾಹಿತ್ಯ-ರಸಿಕರಿಂದ ಪ್ರೋತ್ಸಾಹ ಬಂದಿದೆ. ಅನೇಕಮಂದಿ ಸಂಗೀತ ವಿದ್ವಾಂಸರೂ ಸಂಗೀತ ವಿದುಷಿಯರೂ ಈ ಗೀತೆಗಳನ್ನು ಆಕಾಶವಾಣಿಯ (ರೇಡಿಯೊ) ಗಾನಪ್ರಸಾರ ಸೇವೆಯಲ್ಲಿ ಹಾಡಿದ್ದಾರೆ; ವಿವಾಹಾದ್ಯುತ್ಸವ ಗೋಷ್ಠಿಗಳಲ್ಲಿಯೂ ಬೇರೆ ಸಭೆಗಳಲ್ಲಿಯೂ ಹಾಡಿದ್ದಾರೆ. ಕೆಲವರು ನಾಟ್ಯಾಭಿನಯ ನಿಪುಣರು "ಭಸ್ಮಮೋಹಿನಿ" (ಪುಟ ೮೯) ಮೊದಲಾದ ಕೃತಿಗಳನ್ನು ರಂಗವೇದಿಕೆಯ ಮೇಲೆ ಪ್ರದರ್ಶನಮಾಡಿದ್ದಾರೆ. ಕೇಳಿದವರೂ ನೋಡಿದವರೂ ಮೆಚ್ಚಿಕೊಂಡರೆಂದು ಹಾಡಿದವರೂ ಆಡಿದವರೂ ನನಗೆ ಭರವಸೆ ಕೊಟ್ಟಿದ್ದಾರೆ. ಈ ಬಹು ಬಗೆಯ ಅಭಿಮಾನಾದರಣೆಗಳಿಗಾಗಿ ನಮ್ಮ ನಾಡಿನ ರಸಿಕ ಮಹಾಜನರು ಲೇಖಕ ಪ್ರಕಾಶಕರೀರ್ವರ ಮನಃಪೂರ್ವಕವಾದ ನವಿನಯ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಈ ಮುದ್ರಣದಲ್ಲಿ ಗ್ರಂಥದ ಬಹುಭಾಗ ಬಹುಮಟ್ಟಿಗೆ ಹಿಂದೆ ಇದ್ದಂತೆಯೇ ಇದೆ. ಅಕ್ಷರಗಳ ತಿದ್ದುಪಾಟು ಒಂದೆರಡು ಕಡೆ ಮಾತ್ರ ಆಗಿದೆ. ಪ್ರಕರಣ ವ್ಯವಸ್ಥೆಯಲ್ಲಿ ಕೊಂಚ ಬದಲಾವಣೆಯಾಗಿ, ಗೀತೆಗಳ ಸಂಖ್ಯಾನುಕ್ರಮ ಸ್ವಲ್ಪ ಮಾರ್ಪಟ್ಟಿದೆ.

ಎರಡು ಗೀತೆಗಳೂ (ಪುಟಗಳು ೧೪೩, ೧೪೫) ಎರಡು ಪದ್ಯಗಳೂ (ಪುಟಗಳು ೧೪೪, ೧೪೭) ಮೂರು ಚಿತ್ರಪಟಗಳೂ ಹೊಸದಾಗಿ ಸೇರಿವೆ.

ಹಾಗೆಯೇ "ಬೇಲೂರು ಗುಡಿ", "ಸೌಂದರ್ಯೋಪಾಸನೆ", "ಹಾಡುಗರಲ್ಲಿ ಬಿನ್ನಹ"—ಎಂಬ ಮೂರು ಪ್ರಬಂಧಗಳು ಈಗ ಹೊಸದಾಗಿ ಸೇರಿವೆ.

ನಮ್ಮ ವಿದ್ವಲ್ಲೋಕದಲ್ಲಿ ಲೇಖನ ವಿಮರ್ಶನ ಕುಶಲರೆಂದು ಹೆಸರಾಗಿರುವ ತರುಣ ಮಿತ್ರರು ಡಾ|| ಜಿ. ವರದರಾಜರಾಯರವರು, ಎಂ.ಎ., (ಡಿ.ಲಿಟ್)

ನಮ್ಮ ಪ್ರಾರ್ಥನೆಯನ್ನಂಗೀಕರಿಸಿ, **ಶಬ್ದಾರ್ಥಕೋಶ**ವನ್ನು ರಚಿಸಿ ಕೊಟ್ಟಿದ್ದಾರೆ. ಇದು ವಾಚಕರಿಗೆ ಸಹಾಯವೆಂದು ನಂಬಿದ್ದೇನೆ. ಈ ದೊಡ್ಡ ಉಪಕಾರಕ್ಕಾಗಿ ನಾನೂ ಗ್ರಂಥಪ್ರಕಾಶಕರೂ ಡಾ|| ವರದರಾಜರಾಯರಿಗೆ ನಮ್ಮ ಮನಃಪೂರ್ವಕವಾದ ವಂದನೆಗಳನ್ನರ್ಪಿಸುತ್ತೇವೆ.

ಪುಸ್ತಕದ ಆಕರ್ಷಣೆಗಳನ್ನು ಹೀಗೆ ಹೆಚ್ಚಿಸಿದೆ ಎಂದರೆ ಪ್ರಕಟನೆಯ ವೆಚ್ಚ ಈಗ ಹೆಚ್ಚಾಗಿದೆ ಎಂದರ್ಥವಷ್ಟೆ? ಕಾಗದದ ಬೆಲೆಯೂ ಅಚ್ಚಿನ ವೆಚ್ಚವೂ ಜನದ ಆರ್ಥಿಕ ಸ್ಥಿತಿಯೂ ಪ್ರತಿಕೂಲವಾಗಿರುವ ಈ ಕಾಲದಲ್ಲಿ ಶ್ರೀ ಚಿದಂಬರಂ ಅವರ ಸಾಹಸೋತ್ಸಾಹ ಕುಂದದೆ ನಿಂತಿರುವುದು ನನ್ನ ಭಾಗ್ಯ. ಮಹಾಜನರು ಇದನ್ನು ಪರಾಮರ್ಶಿಸಿ ಗ್ರಂಥವನ್ನು ಆದರಿಸಬೇಕೆಂದು ಬೇಡುತ್ತೇನೆ.

ಇತಿ ಶಿವಂ.

ಪರಾಭವ ಸಂ|| ಭಾದ್ರಪದ
ಸೆಪ್ಟಂಬರ್ ೧೯೬೬

**ಡಿ. ವಿ. ಜಿ.**

# ವಿಷಯ ಸೂಚಿಕೆ

(ಚಿತ್ರ ಪದ್ಯ ಗೀತ ಸಂಖ್ಯೆಗಳು ಪುಟಗಳವು)


| | | | ಚಿತ್ರ | ಪದ್ಯ | ಗೀತ |
|---|---|---|---|---|---|
| ಶ್ರೀ ಕೇಶವದೇವಾಲಯದ ಮುಖದ್ವಾರ (ಮುಖಚಿತ್ರ) | | | ೨ | ... | ... |
| ಮುನ್ನುಡಿ—೧ | ... | ೫ | ... | ... | ... |
| ಮುನ್ನುಡಿ—೨ | ... | ೭ | ... | ... | ... |
| ಬೇಲೂರು ಗುಡಿ | ... | ... | ೧೨ | ... | ... |
| ಬೇಲೂರು ಗುಡಿ | ... | ೧೩ | ... | ... | ... |
| ಸೌಂದರ್ಯೋಪಾಸನೆ | ... | ೨೧ | ... | ... | ... |
| ಹಾಡುಗರಲ್ಲಿ ಬಿನ್ನಹ | ... | ೨೪ | ... | ... | .. |
| ವಿಷ್ಣುವರ್ಧನರಾಯ | ... | ... | ೨೬ | ... | |
| ನಾಂದಿ | ... | ... | ... | ೨೭ | ... |
| ಶ್ರೀ ಚೆನ್ನಕೇಶವಸ್ವಾಮಿ | ... | ... | ೩೦ | ... | ... |
| ಸೌಂದರ್ಯತತ್ತ್ವಂ | ... | ... | ... | ೩೧ | ... |
| ಕಪ್ಪೆ ಚೆನ್ನಿಗರಾಯಸ್ವಾಮಿ | ... | ... | ೩೬ | ... | ... |
| ೧. ಶ್ರೀ ಚೆನ್ನಕೇಶವ | ... | ... | ... | ... | ೩೭ |
| ೨. ತತ್ತ್ವಸೌಂದರ್ಯ | ... | ... | ... | ... | ೩೮ |
| ೩. ಧನ್ಯ ಮೂರ್ಧನ್ಯ | ... | ... | ... | ... | ೩೯ |
| ೪. ಮುಕುರಮುಗ್ಧೆ | ... | ... | ೪೦ | ೪೦ | ೪೧ |
| ೫. ಶುಕಭಾಷಿಣಿ | ... | ... | ೪೨ | ೪೨ | ೪೩ |
| ೬. ವಾಸಂತೀ | ... | ... | ೪೪ | ೪೪ | ೪೫ |
| ೭. ಕೀರವಾಣಿ | ... | ... | ೪೬ | ೪೬ | ೪೭ |
| ೮. ಕಪಿಕುಪಿತೆ | ... | ... | ೪೮ | ೪೮ | ೪೯ |
| ೯. ಲೀಲಾಕಿರಾತಿ | ... | ... | ೫೦ | ೫೦ | ೫೧ |
| ೧೦. ಮಂಜುಕಬರೀ | ... | ... | ೫೨ | ೫೨ | ೫೩ |
| ೧೧. ಮುರಜಾವನೋದೆ | ... | ... | ೫೪ | ೫೪ | ೫೫ |
| ೧೨. ಕಪಟ ಭೈರವಿ | ... | ... | ೫೬ | ೫೬ | ೫೭ |
| ೧೩. ತಾಂಡವೇಶ್ವರಿ | ... | ... | ೫೮ | ೫೮ | ೫೯ |

| | ಚಿತ್ರ | ಪದ್ಯ | ಗೀತ |
|---|---|---|---|
| ೧೪. ಮುರಳೀಧರೆ ... ... | ೬೦ | ೬೦ | ೬೧ |
| ೧೫. ಗಾನಜೀವನೆ ... ... | ೬೨ | ೬೨ | ೬೩ |
| ೧೬. ಜಗನ್ಮೋಹಿನಿ ... ... | ೬೪ | ೬೪ | ೬೫ |
| ೧೭. ವೀಣಾಪಾಣಿ ... ... | ೬೬ | ೬೬ | ೬೭ |
| ೧೮. ಕುಟಿಲಕುಂತಲೆ ... ... | ೬೮ | ೬೮ | ೬೯ |
| ೧೯. ರಸಿಕ ಶಬರಿ ... ... | ೭೦ | ೭೦ | ೭೧ |
| ೨೦. ವೀರಯೋಷಿತೆ ... ... | ೭೨ | ೭೨ | ೭೩ |
| ೨೧. ಪುಂ ವಿಡಂಬಿನಿ ... ... | ೭೪ | ೭೪ | ೭೫ |
| ೨೨. ನಾಟ್ಯ ನಿಪುಣೆ ... ... | ೭೬ | ೭೬ | ೭೭ |
| ೨೩. ರಾಗಯೋಗಿ ... ... | ೭೮ | ೭೮ | ೭೯ |
| ೨೪. ಸ್ವರ್ಗಹಸ್ತೆ ... ... | ೮೦ | ೮೦ | ೮೧ |
| ೨೫. ಕೃತಕ ಶೂಲಿ ... ... | ೮೨ | ೮೨ | ೮೩ |
| ೨೬. ಜಯ ನಿಷಾದಿ ... ... | ೮೪ | ೮೪ | ೮೫ |
| ೨೭. ನಾಟ್ಯಸುಂದರಿ ... ... | ೮೬ | ೮೬ | ೮೭ |
| ೨೮. ಭಸ್ಮ ಮೋಹಿನಿ ... ... | ೮೮ | ೮೮ | ೮೯ |
| ೨೯. ನೀಲಾಂಬರೆ ... ... | ೯೬ | ೯೬ | ೯೭ |
| ೩೦. ಹಾವಸುಂದರಿ ... ... | ೯೮ | ೯೮ | ೯೯ |
| ೩೧. ಶಕುನ ಶಾರದೆ ... ... | ೧೦೦ | ೧೦೦ | ೧೦೧ |
| ೩೨. ವೀಟೀಧರೆ ... ... | ೧೦೨ | ೧೦೨ | ೧೦೩ |
| ೩೩. ನಾಗವೈಣಿಕೆ ... ... | ೧೦೪ | ೧೦೪ | ೧೦೫ |
| ೩೪. ಭೂಷಣಪ್ರಿಯೆ ... ... | ೧೦೬ | ೧೦೬ | ೧೦೭ |
| ೩೫. ಕೇಳೀನಿರತೆ ... ... | ೧೦೮ | ೧೦೮ | ೧೦೯ |
| ೩೬. ಕೊರವಂಜಿ ... ... | ೧೧೦ | ೧೧೦ | ೧೧೧ |
| ೩೭. ಕೇಶರುಷ್ಟೆ ... ... | ೧೧೨ | ೧೧೨ | ೧೧೩ |
| ೩೮. ಪಾದಾಂಗುಳೀಯೆ ... ... | ೧೧೪ | ೧೧೪ | ೧೧೫ |
| ೩೯. ವಿಕಟ ನರ್ತಿನಿ ... ... | ೧೧೬ | ೧೧೬ | ೧೧೭ |
| ೪೦. ಗಾಂಧರ್ವ ದೇವಿ ... ... | ೧೧೮ | ೧೧೮ | ೧೧೯ |
| ೪೧. ಲಾಸೋತ್ಸವೆ ... ... | ೧೨೦ | ೧೨೦ | ೧೨೧ |
| ೪೨. ಶುಕಸಖಿ ... ... | ೧೨೨ | ೧೨೨ | ೧೨೩ |

| | | | ಚಿತ್ರ | ಪದ್ಯ | ಗೀತ |
|---|---|---|---|---|---|
| ೪೩. ಉಲ್ಲಾಸಿನಿ | ... | ... | ೧೨೪ | ೧೨೪ | ೧೨೫ |
| ೪೪. ಭಾವದೇವಿ | ... | ... | ೧೨೬ | ೧೨೬ | ೧೨೭ |
| ೪೫. ವೇಣೀಸಂಹಾರಿ | ... | ... | ೧೨೮ | ೧೨೮ | ೧೨೯ |
| ೪೬. ನೃತ್ಯ ಸರಸ್ವತಿ | ... | ... | ೧೩೦ | ೧೩೦ | ೧೩೧ |
| ೪೭. ನೃತ್ತೋನ್ಮತ್ತೆ | ... | ... | ೧೩೨ | ೧೩೨ | ೧೩೩ |
| ೪೮. ವಿರಹಾರ್ತೆ | ... | ... | ... | ... | ೧೩೪ |
| ೪೯. ಚಾರುಹಾಸಿನಿ | ... | ... | ... | ... | ೧೩೫ |
| ೫೦. ಪ್ರಣಯ ವಂಚಿತೆ | ... | ... | ... | ... | ೧೩೬ |
| ೫೧. ಕಲಹಾಂತರಿತೆ | ... | ... | ... | ... | ೧೩೭ |
| ೫೨. ವಿಲಾಸಿಕೆ | ... | ... | ... | ... | ೧೩೮ |
| ೫೩. ನೃತ್ತ ಹಾಸಿನಿ | ... | ... | ... | ... | ೧೩೯ |
| ೫೪. ಚಕ್ರವಾಕಿ | ... | ... | ... | ... | ೧೪೦ |
| ೫೫. ಪ್ರಣಯ ಕುಪಿತೆ | ... | ... | ... | ... | ೧೪೧ |
| ೫೬. ಲತಾಂಗಿ | ... | ... | ... | ... | ೧೪೨ |
| ೫೭. ಸುಮಬಾಣ | ... | ... | ... | ... | ೧೪೩ |
| ೫೮. ರತಿ ಮನ್ಮಥ | ... | ... | ೧೪೪ | ೧೪೪ | ೧೪೫ |
| ೫೯. ಜಯ ವಿಶ್ವಮೋಹನ | ... | ... | ... | ... | ೧೪೬ |
| ಮನ್ಮಥ | ... | ... | ೧೪೭ | ೧೪೭ | ... |
| ೬೦. ಮಂಗಳಂ | ... | ... | ... | ... | ೧೪೮ |
| ಸೌಂದರ್ಯ ವಿಜಯಂ | ... | ... | ... | ೧೪೯ | ... |
| ಶಾಂತಲಾದೇವಿ ಮತ್ತು ವಿಷ್ಣುವರ್ಧನರಾಜ | | ... | ೧೫೦ | ... | ... |
| ಶಬ್ದಾರ್ಥಕೋಶ | | ... | ೧೫೩ | ... | ... |
| ಪದ್ಯಗೀತಗಳ ಮೊದಲ ಚರಣಗಳ ಅಕಾರಾದಿ | | ೧೭೩ | ... | ... | ... |
| ರಾಗಗಳ ಅಕಾರಾದಿ | | ೧೭೬ | ... | ... | ... |



# ಬೇಲೂರು ಗುಡಿ

## ಚರಿತ್ರಾಂಶ

ಇಂಡಿಯ ದೇಶದಲ್ಲಿ ವಿಗ್ರಹಶಿಲ್ಪಕ್ಕೆ ಹೆಸರಾಗಿರುವ ದೇವಾಲಯಗಳಲ್ಲಿ ಬೇಲೂರಿನದು ಮೊದಲಪಂಕ್ತಿಯದು,— ಮೊದಲನೆಯದು ಎಂದೂ ಹೇಳಬಹುದು. ಬೇಲೂರು ನಮ್ಮ ದೇಶದ ಪೂರ್ವಚರಿತ್ರೆಯಲ್ಲಿ ಅತ್ಯಂತ ಸ್ಮರಣೀಯವಾದ ಪಟ್ಟಣಗಳ ಪೈಕಿ ಒಂದು. ಅದು ಕೆಲವು ಶತಮಾನಕಾಲ ಹೊಯ್ಸಳರ ರಾಜಧಾನಿಯಾಗಿತ್ತು. ಆಗ ಅದು ಜನಸಮೃದ್ಧವಾಗಿ, ವೈಭವದಿಂದ ಬಾಳಿ, ತನ್ನ ಧಾರ್ಮಿಕತೆ ರಸಿಕತೆಗಳ ಶಾಶ್ವತ ಸಮನ್ವಯದಿಂದ ಇಂದಿಗೂ ಯಶಸ್ವಿಯಾಗಿ ನಿಂತಿದೆ. ಆ ಪಟ್ಟಣಕ್ಕೆ ಸೇರಿದ ವಿಶಾಲ ರಾಜ್ಯದಲ್ಲಿ ಜೈನರು, ಶೈವರು, ವೈಷ್ಣವರು ಮೊದಲಾದ ಅನೇಕ ಮತಗಳವರು ಪ್ರಜೆಯಾಗಿ, ಸಾರ್ವಜನಿಕ ವಿಷಯಗಳಲ್ಲಿ ಅಭೇದಬುದ್ಧಿಯಿಂದ ಒಂದೇ ಜನದಂತೆ ನಡೆದುಕೊಂಡು ಬಾಳುತ್ತಿದ್ದರೆಂದು ತೋರುತ್ತದೆ.

ಹೊಯ್ಸಳ ರಾಜರುಗಳಲ್ಲಿ ಅತ್ಯಂತ ಪ್ರಸಿದ್ಧನಾದವನು ವಿಷ್ಣುವರ್ಧನ. ಆತ ಬಹು ಪರಾಕ್ರಮಶಾಲಿ; ತನ್ನ ರಾಜ್ಯವನ್ನು ಎಲ್ಲ ದಿಕ್ಕುಗಳಲ್ಲಿಯೂ ವಿಸ್ತರಿಸಿದ್ದವನು. ರಣರಂಗದಲ್ಲಿ ಆತನು ಹೇಗೆ ಜಯಶಾಲಿಯಾದವನೋ ರಾಜ್ಯಪಾಲನೆಯಲ್ಲಿಯೂ ಹಾಗೆ ಕೃತಸಂಕಲ್ಪನಾದವನು. ತಾನು ಸರಸ ಕಲಾಪ್ರಿಯನಾಗಿ, ತನ್ನ ಜನ ನಗುಮುಖದಿಂದ ನಲಿಯುವುದನ್ನು ನೋಡಬೇಕೆಂದು ಪರಿಶ್ರಮಿಸುತ್ತಿದ್ದವನು. ಎಲ್ಲಕ್ಕಿಂತ ಮಿಗಿಲಾಗಿ, ಆತನು ಧರ್ಮಶ್ರದ್ಧೆಯುಳ್ಳವನು, ಮತ್ತು ಆ ಧರ್ಮಕ್ಕೆ ಉದಾರತೆಯನ್ನು ಮುಖ್ಯ ಲಕ್ಷಣವಾಗಿರಿಸಿಕೊಂಡಿದ್ದವನು. ಜೈನ ಶೈವ ವೈಷ್ಣವ—ಈ ಮೂರು ಮತಗಳಲ್ಲಿಯೂ ಆತನಿಗೆ ಸಹಾನುಭೂತಿ ಸಮನಾಗಿತ್ತೆಂದು ತೋರುತ್ತದೆ. ಆತನ ರಾಣಿವಾಸದಲ್ಲಿಯೂ, ಮಂತ್ರಿ ಸೇನಾಪತಿ ವರ್ಗಗಳಲ್ಲಿಯೂ ಮೂರು ಮತಗಳಿಂದಲೂ ಬಂದವರಿದ್ದರು; ಅವರು ಮೂರು ಮತಗಳ ದೇವಾಲಯಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದರು.

ಈಗ ಇಂಡಿಯ ರಾಜ್ಯವು 'ಸೆಕ್ಯುಲರ್' ಅಥವಾ ಶುದ್ಧ ಲೌಕಿಕವೆಂದು ನಿಶ್ಚಯವಾಗಿದೆಯಲ್ಲವೆ? ಶುದ್ಧ ಲೌಕಿಕತೆಯೆಂದರೆ ಮತವಿರೋಧವೆಂದಲ್ಲ; ಮತವಿಷಯದಲ್ಲಿ ಉದಾಸೀನವೆಂದೂ ಅಲ್ಲ. ಮತ ಪಕ್ಷಪಾತವಿಲ್ಲವೆಂಬುದಷ್ಟೇ

ಆ ಮಾತಿನ ಅರ್ಥ ; ಪ್ರಜೆಯಲ್ಲಿ ಯಾವ ಯಾವ ಮತಗಳುಂಟೋ ಅವೆಲ್ಲವೂ ರಾಜ್ಯದ ಮತಗಳೇ ; ಅವೆಲ್ಲವೂ ರಾಜನವೇ. ರಾಜ್ಯವು, ಅಥವಾ ರಾಜನು, ಯಾವುದೋ ಒಂದು ಮತ ಮಾತ್ರ ತನ್ನದು, ಮಿಕ್ಕದ್ದು ತದ್ವಿರುದ್ಧವಾದದ್ದು ಎಂದು ಭಾವನೆಯಿಟ್ಟುಕೊಳ್ಳತಕ್ಕದ್ದಲ್ಲ. ಪ್ರಜೆಯ ಎಲ್ಲ ಮತಗಳನ್ನೂ ಏಕರೀತಿ ಪರಿಪೋಷಿಸತಕ್ಕದ್ದು ರಾಜ್ಯದ ಧರ್ಮ. ಈ ತತ್ತ್ವಕ್ಕೆ ದೃಷ್ಟಾಂತ ವಿಷ್ಣು ವರ್ಧನರಾಯನ ನಾನಾ ಧರ್ಮಪುರಸ್ಕಾರ. ಆತನ ಪ್ರಜಾವಾತ್ಸಲ್ಯದ ಒಂದು ಫಲಿತಾಂಶವೇ ಆತನ ನಾನಾ ಧರ್ಮವಾತ್ಸಲ್ಯ.

ವಿಷ್ಣುವರ್ಧನನು ಕಟ್ಟಿಸಿದ ದೇವಾಲಯಗಳಲ್ಲಿ ಐದು ನಾರಾಯಣ ದೇವಾಂಕಿತವೆಂದು ಲೋಕದ ಹೇಳಿಕೆ. (೧) ತಿರುನಾರಾಯಣ ಅಥವಾ ಚೆಲುವನಾರಾಯಣ, (೨) ಲಕ್ಷ್ಮೀನಾರಾಯಣ, (೩) ವೀರನಾರಾಯಣ, (೪) ಕೀರ್ತಿನಾರಾಯಣ, (೫) ವಿಜಯನಾರಾಯಣ—ಇವು ಪಂಚ ನಾರಾಯಣ ಮೂರ್ತಿಗಳು. ಇವುಗಳಲ್ಲಿ ಐದನೆಯದು ಬೇಲೂರಿನ ದೇವರ ಹೆಸರು. ಅದೇ ದೇವರಿಗೆ ಸೌಮ್ಯನಾರಾಯಣನೆಂದೂ ಚೆನ್ನಕೇಶವನೆಂದೂ ಹೆಸರುಗಳು ರೂಢಿಯಾಗಿವೆ. ಉಳಿದ ನಾಲ್ಕು ನಾರಾಯಣ ದೇವಾಲಯಗಳು ಮೇಲುಕೋಟೆ, ತೊಣ್ಣೂರು (ತೊಂಡನೂರು), ತಲಕಾಡು, ಗುಂಡ್ಲುಪೇಟೆ (ಅಥವಾ ಗದಗು) ಈ ಸ್ಥಳಗಳವೆಂದು ಜನದ ನಂಬಿಕೆ.

ಬೇಲೂರಿನಲ್ಲಿ ಶ್ರೀ ವಿಜಯನಾರಾಯಣಸ್ವಾಮಿಯ ಪ್ರತಿಷ್ಠೆಯಾದದ್ದು ಕ್ರಿಸ್ತವರ್ಷ ೧೧೧೭ರಲ್ಲಿ. ಅದು ವಿಷ್ಣುವರ್ಧನ ರಾಜನು ಜೈನಮತದಿಂದ ಶ್ರೀವೈಷ್ಣವ ಮತಕ್ಕೆ ಬಂದದ್ದರ ಜ್ಞಾಪಕಾರ್ಥವಾದದ್ದೆಂದು ಕೆಲವರು ಹೇಳುತ್ತಾರೆ. ಅದು ಆತನ ದಿಗ್ವಿಜಯದ ಮಂಗಳಾಶಾಸನ ಚಿಹ್ನೆಯೆಂದು ಕೆಲವರು ಹೇಳುತ್ತಾರೆ. ಆ ದೇವಾಲಯದ ನಿರ್ಮಾಣ ಕೈಂಕರ್ಯಗಳ ವ್ಯವಸ್ಥೆಯಲ್ಲಿ ಶ್ರೀಮದ್ರಾಮಾನುಜಾಚಾರ್ಯರ ಪ್ರಭಾವವಿದ್ದಿರಬೇಕೆನ್ನಲು ಸಂದೇಹವಿಲ್ಲ.

## ಗುಡಿಯ ಸ್ವರೂಪ

ಬೇಲೂರಿನ ದೇವಾಲಯದ ಪ್ರಾಕಾರದಲ್ಲಿಯೇ ವೀರನಾರಾಯಣ ಲಕ್ಷ್ಮೀ ನಾರಾಯಣ ದೇವರುಗಳ ಗುಡಿಗಳಿವೆ. ಬಹುಶಃ ಅವುಗಳ ಅಕ್ಕಪಕ್ಕ ಗಳಲ್ಲಿಯೇ ಚೆಲ್ವನಾರಾಯಣ ಕೀರ್ತಿನಾರಾಯಣ ದೇವರುಗಳ ಗುಡಿಗಳೂ ಇದ್ದು, ಪಂಚನಾರಾಯಣ ಪ್ರತಿಷ್ಠೆಯು ಬೇಲೂರಿನಲ್ಲಿಯೇ ಆಗಿದ್ದಿರ ಬಹುದೋ ಏನೋ ಎಂಬ ಊಹೆಗೂ ಅವಕಾಶ ಕಾಣುತ್ತದೆ.

ಬೇಲೂರಿನ ದೇವಾಲಯದ ಪ್ರಾಕಾರದ ಒಳವಿಸ್ತೀರ್ಣ ಪೂರ್ವ-ಪಶ್ಚಿಮ ಸುಮಾರು ೪೦೦ ಅಡಿ, ಉತ್ತರ—ದಕ್ಷಿಣ ಸುಮಾರು ೪೫೦ ಅಡಿ. ಗುಡಿ ಪೂರ್ವಾಭಿಮುಖವಾಗಿದೆ.

ಈಗ್ಗೆ ೪೦ ವರ್ಷಗಳ ಹಿಂದಿನ ವರೆಗೂ ದೇವಾಲಯದ ಅನೇಕ ಭಾಗಗಳು ಶಿಥಿಲವಾಗಿ, ಕತ್ತಲೆಯಾಗಿ, ನೋಡಹೋದವರಿಗೆ ಮೊದಮೊದಲು ಅಷ್ಟೇನೂ ಸುಲಭವಲ್ಲದೆ ಇತ್ತು. ಅಲ್ಲಿಂದೀಚೆಗೆ ಮೈಸೂರು ಸರಕಾರದವರು ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರ ಆಜ್ಞಾನುಸಾರವಾಗಿ ಈ ದೇವಾಲಯದ ವಿಷಯದಲ್ಲಿ ವಿಶೇಷವಾದ ಕುತೂಹಲವನ್ನು ತೋರಿ, ಧಾರಾಳವಾದ ದ್ರವ್ಯವ್ಯಯದಿಂದ ದೇವಸ್ಥಾನದ ಪರಿಸರ ಭೂಮಿಯನ್ನೆಲ್ಲ ಸಮಪಡಿಸಿ, ಅಲ್ಲಲ್ಲಿ ಕಣ್ಣಿಗೂ ಕಾಲಿಗೂ ಅಡ್ಡವಾಗಿ ಬಿದ್ದಿದ್ದ ಕಲ್ಲುಕಂಬ ಮುರುಕು ಚಪ್ಪಡಿಗಳನ್ನು ಒಂದು ಕಡೆಗೆ ಸಾಗಿಸಿ, ಪ್ರಾಕಾರದಲ್ಲೆಲ್ಲ ನೆಲಕ್ಕೆ ನಯವಾದ ಚಪ್ಪಡಿ ಹಾಸಿಸಿ, ನಡಿಗೆಗೂ ನೋಟಕ್ಕೂ ಅಂದಗೊಳಿಸಿದ್ದಾರೆ. ಪ್ರಾಕಾರದ ಮಹಾದ್ವಾರದ ಮೇಲಣ ಗೋಪುರ ದೇವಸ್ಥಾನದ ಕೀರ್ತಿಗೆ ತಕ್ಕಂತೆ ಕಣ್ಣನ್ನು ತೃಪ್ತಿಗೊಳಿಸುತ್ತದೆ. ಆವರಣದ ಒಳಗಡೆ ಈಶಾನ್ಯ ದಿಕ್ಕಿನಲ್ಲಿ ಸೊಗಸಾಗಿ ಮೆಟ್ಟಲು ಕಟ್ಟಿದ ಪುಷ್ಕರಿಣಿಯೂ ಮಿಕ್ಕ ಮೂಲೆಗಳಲ್ಲಿ ಯಜ್ಞಶಾಲೆ ವಾಹನಶಾಲೆ ಮೊದಲಾದ ಮಂಟಪಗಳೂ ಇವೆ. ಚೆನ್ನಕೇಶವ ದೇವಾಲಯದ ಉತ್ತರ ಪಾರ್ಶ್ವದಲ್ಲಿ ಸೌಮ್ಯನಾಯಕಿ ಅಮ್ಮನವರ ಗುಡಿಯೂ ಮಹಾಲಕ್ಷ್ಮಿಯ ಗುಡಿಯೂ ಇವೆ. ದಕ್ಷಿಣ ಭಾಗದಲ್ಲಿ ಕಪ್ಪೆ ಚೆನ್ನಿಗರಾಯಸ್ವಾಮಿ ಗುಡಿ ಇದೆ. ಹೀಗೆ ಭಕ್ತರ ಭಾವೋನ್ನತಿಗೆ ಅನುಕೂಲವಾದ ಸನ್ನಿವೇಶದ ನಡುವೆ ಇರತಕ್ಕದ್ದು ಈ ಹೊತ್ತು ನಾವು ಮನಸಾ ನೋಡಬೇಕೆಂದಿರುವ ಪ್ರಖ್ಯಾತ ದೇವಾಲಯ.

## ಶಿಲ್ಪವೈಖರಿ

ಈ ದೇವಸ್ಥಾನದ ಮುಖ್ಯ ವೈಶಿಷ್ಟ್ಯ ಅದರ ವಿಗ್ರಹಶಿಲ್ಪವೆಂದು ಮೊದಲೇ ಸೂಚಿಸಿದ್ದಾಗಿದೆ. ಶಿಲ್ಪವಲ್ಲಿ ವಾಸ್ತುಶಿಲ್ಪ, ವಿಗ್ರಹಶಿಲ್ಪ, ಯಂತ್ರಶಿಲ್ಪ ಮೊದಲಾದ ಅನೇಕ ವಿಭಾಗಗಳುಂಟಷ್ಟೆ? ಅವುಗಳಲ್ಲಿ ವಾಸಗೃಹದ ನಿರ್ಮಾಣಕ್ಕೆ ಸಂಬಂಧಪಟ್ಟದ್ದು ವಾಸ್ತುಶಿಲ್ಪ (ಆರ್ಕಿಟೆಕ್ಚರ್), ಇದರಲ್ಲಿ ಕಲಾಂಶಕ್ಕಿಂತ ಉಪಯೋಗಾಂಶ ಹೆಚ್ಚಿನದು. ಕಲೆಯೆಂದರೆ ಸೌಂದರ್ಯ ಕಲ್ಪನೆ. ಇದನ್ನು ಇಂಗ್ಲಿಷಿನಲ್ಲಿ 'ಆರ್ಟ್' ಎಂದು ಕರೆಯುತ್ತಾರೆ ಅದರ ಮುಖ್ಯ ಪರಿಣಾಮ ನಮ್ಮ ಮನೋಜೀವನದಲ್ಲಿ. ಉಪಯೋಗಾಂಶವೆಂಬು

ದಾದರೋ ಇಂಗ್ಲಿಷಿನ "ಯುಟಿಲಿಟಿ"—ಅದು ನಮ್ಮ ಬಹಿರಂಗ ಜೀವನದ ಪ್ರತ್ಯಕ್ಷ ಪ್ರಯೋಜನಕ್ಕೆ ಸಂಬಂಧಪಟ್ಟದ್ದು. ಇಂಥಾದ್ದು ವಾಸ್ತುಶಿಲ್ಪ. ಅದು ಒಂದು ಪರಿಕರ್ಮ ಅಥವಾ 'ಇಂಡಸ್ಟ್ರಿ'. ವಿಗ್ರಹಶಿಲ್ಪವಾದರೋ 'ಆರ್ಟ್' ಅಥವಾ ಕಲೆ. ವಾಸ್ತುಶಿಲ್ಪದ ದೃಷ್ಟಿಯಿಂದಲೂ ಬೇಲೂರಿನ ದೇವಾಲಯವು ಉಪೇಕ್ಷೆಗರ್ಹವಾದದ್ದೇನೂ ಅಲ್ಲ. ಆದರೂ ಅದರ ಶ್ರೇಷ್ಠತೆಯಿರುವುದು ಅದರ ಕಲಾಭಾಗದಲ್ಲಿ — ವಿಗ್ರಹಶಿಲ್ಪದ ಸೌಂದರ್ಯದಲ್ಲಿ.

ಗುಡಿಯ ಕಟ್ಟಡ ಸುಮಾರು ೧೮೦ ಅಡಿ ಉದ್ದವೂ ೧೬೦ ಅಡಿ ಅಗಲವೂ ಮೂರು ಅಡಿ ಎತ್ತರವೂ ಇರುವ ಹಸ್ತಿಭಾರ ಪೀಠದ ಮೇಲೆ ನಿಂತಿದೆ. ಅದರ ಒಟ್ಟಿನ ಆಯಕಟ್ಟು, ಅದರ ಮಂಟಪಗಳ ವಿಸ್ತಾರ, ಕಂಬಗಳ ಸಾಲು, ಮಾಳಿಗೆಯ ಎತ್ತರ, ಜಗಲಿಗಳ ಅಚ್ಚುಕಟ್ಟು—ಈ ನಾನಾ ಹೊರಗಣ ರೂಪರಚನೆಗಳು ಉಚಿತ ಪ್ರಮಾಣಗಳಿಂದ ಕೂಡಿ, ಅಲ್ಲಿಗೆ ಬರುವ ಭಕ್ತ ಸ್ತೋಮದ ಸುಖ ವಸತಿಗೂ ಅಂಗಾಂಗ ಸಂಚಲನೆಗೂ ರಮ್ಯವಾಗಿವೆ.

ಈ ಕಟ್ಟಡದ ಸೊಬಗು ಇಷ್ಟಿದ್ದರೂ ಅದರ ವಿಶೇಷವಾದ ಆಕರ್ಷಣೆ ಅದರ ಪ್ರತಿಮೆಗಳದು. ನಮ್ಮ ದೇಶದಲ್ಲಿ ವಾಸ್ತುಶಿಲ್ಪದ ಮಹಿಮೆಯಿಂದ ಪ್ರಸಿದ್ಧವಾದ ದೇವಾಲಯಗಳು ಹತ್ತಾರಿವೆ. ರಾಮೇಶ್ವರ, ಶ್ರೀರಂಗ, ಮಧುರೆ, ಹಂಪೆ—ಇಂಥ ಕ್ಷೇತ್ರಗಳ ದೇವಾಲಯಗಳು ಕಟ್ಟಡದ ವಿಸ್ತಾರದಲ್ಲಿಯೂ ಉನ್ನತಿಯಲ್ಲಿಯೂ ಗಾತ್ರದಲ್ಲಿಯೂ ಅದ್ಭುತಗಳಾಗಿವೆ. ಕಟ್ಟಡದ ನಮೂನೆಯನ್ನೂ ಅಡಕವನ್ನೂ ನೋಡುವುದಾದರೆ ಸೋಮನಾಥಪುರದ ದೇವಾಲಯದಂಥವು ಬೇಲೂರಿನದಕ್ಕೆ ಕಡಮೆಯೇನೂ ಅಲ್ಲ. ವಾಸ್ತುಶಿಲ್ಪದ ಚಮತ್ಕಾರ ಕೆಲವು ಕಡೆ ಇನ್ನೂ ಹೆಚ್ಚಾಗಿದೆ. ರಾಮೇಶ್ವರದಲ್ಲಿಯೂ ಹಂಪೆಯಲ್ಲಿಯೂ ನಿತ್ಯವೂ ಪ್ರಭಾತ ಸಮಯದಲ್ಲಿ ಸೂರ್ಯರಶ್ಮಿಯು ನಾಲ್ಕಾರು ಹೆಬ್ಬಾಗಿಲುಗಳನ್ನು ಹಾಯ್ದು ಬಂದು, ಮೂಲಸ್ವಾಮಿಯ ಪಾದವನ್ನು ಮುಟ್ಟುತ್ತವೆ ಎಂದು ಹೇಳುತ್ತಾರೆ. ಇನ್ನು ಕೆಲವು ದೇವಾಲಯಗಳಲ್ಲಿ ಅಸ್ತಮಾನದ ಸೂರ್ಯ ಕಿರಣಗಳು ದೈವಮೂರ್ತಿಯನ್ನು ಮುಟ್ಟುತ್ತವೆ ಎಂದು ಜನದ ಹೇಳಿಕೆ. ಶೃಂಗೇರಿಯ ವಿದ್ಯಾಶಂಕರ ದೇವಾಲಯದಲ್ಲಿ ಪ್ರತಿ ಸಂಕ್ರಮಣದ ದಿವಸವೂ ಸೂರ್ಯ ಪ್ರಭೆ ಕ್ರಮವಾಗಿ ಆಯಾ ರಾಶಿಯನ್ನು ಸೂಚಿಸುವ ಮೇಷ ವೃಷಭಾದಿ ರೂಪಗಳನ್ನು ಧರಿಸಿದ ಕಂಬಗಳ ಮೇಲೆ ಬೀಳುವಂತೆ ಕಟ್ಟಡವನ್ನು ಸುಗೊಳಿಸಿದೆ. ಬೇಲೂರಿನ ಪ್ರಸಿದ್ಧಿ ಈ ಬಗೆಯ ವಾಸ್ತುಶಿಲ್ಪದ ಚಮತ್ಕೃತಿಯ ಕಾರಣದಿಂದ ಬಂದದ್ದಲ್ಲ. ಅದು ಅಲ್ಲಿಯ ವಿಗ್ರಹಶಿಲ್ಪದ ಹೃದಯೋದ್ದೀಪನ ಶಕ್ತಿಯಿಂದ ಬಂದದ್ದು. ಅದು ಕಲ್ಲಿನಲ್ಲಾದ ಕಾವ್ಯ. ಈ ಕಾರಣದಿಂದ ಅದರ ಕೀರ್ತಿ.

ಆ ಚಿತ್ರಸೌಂದರ್ಯವನ್ನು ಬರಿಯ ಮಾತುಗಳ ಮೂಲಕ ಕಾಣಿಸ ಲಾದೀತೆಂದಾಗಲಿ ಕಂಡುಕೊಳ್ಳಬಹುದೆಂದಾಗಲಿ ಯಾರಾದರೂ ಭಾವಿಸಿದ್ದರೆ ಅವರು ಭ್ರಾಂತರು. ಪ್ರತ್ಯಕ್ಷದರ್ಶನದಿಂದ ಸಾಧ್ಯವಾದ ಅನುಭವವು ವಾಙ್ಮಯ ವರ್ಣನೆಗೆ ಸಾಧ್ಯವಾಗುವ ಹಾಗಿದ್ದರೆ, ಆ ದೃಶ್ಯದಲ್ಲಿ ಅತಿಶಯದ ಸಂಗತಿಯೇನೂ ಇರದೆಂದೇ ಅರ್ಥ. ಯಥಾವತ್ತಾದ (ಫೋಟೋಗ್ರಾಫ್) ಛಾಯಾಬಿಂಬದಿಂದ ಸಹ ದೊರೆಯತಕ್ಕದ್ದಲ್ಲ ಆ ಸೌಂದರ್ಯಾನುಭವ. ಹೀಗಿದ್ದರೂ ಈ ಉಪನ್ಯಾಸದ ಉದ್ದೇಶ ನೆರವೇರಬೇಕಾದರೆ ವರ್ಣನೆಯ ಪ್ರಯತ್ನ ನನ್ನಿಂದ ಒಂದಷ್ಟು ಆಗಬೇಕಾಗಿದೆ. ಮಾದರಿಗಾಗಿ, ಗುಡಿಯ ಒಂದು ಪಕ್ಕದ ಗೋಡೆಯನ್ನು ನೋಡೋಣ. ಅದರಲ್ಲಿ ಶಿಲ್ಪಚಿತ್ರವಿಲ್ಲದ ಜಾಗ ಒಂದಂಗುಲವೂ ಇಲ್ಲ. ಬುಡದಿಂದ ತುದಿಯವರೆಗೂ ಕೆತ್ತನೆ ಕೊರೆತ ಗಳು ಎಡೆಬಿಡದೆ ತುಂಬಿಕೊಂಡಿವೆ.

## ಮೂರಂತಸ್ತು

ಈ ಶಿಲ್ಪಕೃತಿಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು: (೧) ಚಿತ್ರಾಲಂಕಾರ ಭಾಗ, (೨) ದೈವಪ್ರತಿಮಾ ಭಾಗ, (೩) ಹೃದಯ ವಿಲಾಸ ಭಾಗ. ಈ ಮೂರು ಭಾಗಗಳು ಮೂರು ಅಂತಸ್ತಾಗಿವೆ. ತಳಗಡೆ ಯದು ಮುಖ್ಯವಾಗಿ ಚಿತ್ರಾಲಂಕಾರ: ಬಗೆಬಗೆಯ ಲತೆಗಳು, ಎಲೆ ಹುವ್ವುಗಳು; ಹಂಸೆ ಹಕ್ಕಿಗಳು; ಹಾವು ಹುಲ್ಲೆಗಳು; ಆನೆ ಕುದುರೆಗಳ ಸಾಲು; ಕಾಲಾಳು ಬಲ; ಯಕ್ಷಯಕ್ಷಿಣಿಯರು; ಮನುಷ್ಯನ ಕಣ್ಣಿಗೆ ದೊರೆತಿರುವ ಮತ್ತು ಊಹೆಗೆ ತೋರಬಹುದಾದ ಎಲ್ಲ ಜೀವರಾಶಿಗಳೂ ಅಲ್ಲಿರುವಂತಿದೆ. ಅವುಗಳ ರೂಪರೇಖೆಗಳು, ಉಬ್ಬು ತಗ್ಗುಗಳು, ನವಿರು ನಲಿವು ಗಳು, ಚಕ್ರಾಕಾರ ಪದ್ಮಾಕಾರ ತ್ರಿಕೋಣ ಚತುಷ್ಕೋಣ ಅಷ್ಟಕೋಣಾ ಕಾರಮಂಡಲಗಳು—ಎಲ್ಲವೂ ಸಾಲುಸಾಲಾಗಿ ಸಾಗುತ್ತಿರುವಂತೆ ಭಾಸ ವಾಗುತ್ತದೆ. ನಮ್ಮ ಜಗತ್ತಿನ ಒಂದು ಸಕ್ರಮ ಪ್ರತಿಬಿಂಬವೇ ಈ ಗೋಡೆ. ನಾನಾ ಪ್ರಾಣಿಗಳೂ ಅವುಗಳ ಚೇಷ್ಟಿತಗಳೂ ಈ ಗೋಡೆಯಲ್ಲಿ ಸುವ್ಯವಸ್ಥಿತ ವಾಗಿ, ಸ್ವಸ್ವಧರ್ಮತತ್ಪರವಾಗಿರುವಂತೆ ಕಾಣಬರುತ್ತದೆ. ಅದು ನಮ್ಮಲ್ಲಿ ಪ್ರಪಂಚಸ್ವರೂಪಭಾವನೆಯನ್ನುಂಟುಮಾಡುವುದಕ್ಕಾಗಿ,—ನಾವು ಸೃಷ್ಟಿ ಯಿಂದ ಬೇರೆಯಲ್ಲವೆಂಬುದನ್ನು ಜ್ಞಾಪಕಕೊಡುವುದಕ್ಕಾಗಿ,—ಎಂಥೆಂಥ ಪ್ರಭಾವಗಳು ನಮ್ಮ ಜೀವನದಲ್ಲಿ ಸೇರಿರುತ್ತವೆಂಬುದನ್ನು ಗೋಚರಪಡಿಸು ವುದಕ್ಕಾಗಿ.

ಅಲ್ಲಿಂದ ಮೇಲಿನದು ದೇವತಾಶ್ರೇಣಿ. ಇದು ಭಕ್ತರಾದವರಲ್ಲಿ ಧ್ಯಾನ ಪ್ರಚೋದಕವಾಗತಕ್ಕದ್ದು. ಭಗವಂತನ ನಾನಾ ರೂಪಲೀಲೆಗಳು,—ತ್ರಿಮೂರ್ತಿಗಳು, ದಶಾವತಾರಗಳು, ದಕ್ಷಯಜ್ಞ, ತ್ರಿಪುರಸಂಹಾರ, ರಾಮಾಯಣದ ಸನ್ನಿವೇಶಗಳು, ಭಾರತದ ಉಪಾಖ್ಯಾನಗಳು, ಮಹರ್ಷಿಗಳ ತಪಸ್ಸು, ಅವರಿಗಾದ ಇಷ್ಟಸಿದ್ಧಿ—ಇಂಥ ದಿವ್ಯಾದ್ಭುತ ದೃಶ್ಯಗಳು ಈ ಮಧ್ಯ ಭಾಗದವು. ಈ ದಿವ್ಯಮೂರ್ತಿಗಳನ್ನು,—ಅವುಗಳ ಕರಚರಣ ವಿನ್ಯಾಸಗಳನ್ನು, ಅವುಗಳ ಆಯುಧಾಭರಣಗಳನ್ನು, ಅವುಗಳ ಶರೀರಭಂಗಿಯನ್ನು, ಮುಖ ಮುದ್ರೆಯನ್ನು,—ದಿಟ್ಟಿಸಿ ನೋಡಿದರೆ ಶಿಲ್ಪಿಯ ಕೈಯಲ್ಲಿ ಶಿಲೆ ಮಯಣವಾಯಿತೆಂದೆನ್ನಿಸುತ್ತದೆ. ಅಷ್ಟು ಅವಯವ ವಿವರ ವಿಸ್ತರದಿಂದ, ಅಷ್ಟು ಅಂಗ ಪ್ರತ್ಯಂಗ ಸಾಮರಸ್ಯದಿಂದ, ಅಂಥ ಆಗ್ರಹಾನುಗ್ರಹ ವ್ಯಂಜಕವಾಗಿ ನಿಂತಿವೆ— ಆ ಮೂರ್ತಿಗಳು.

## ರಸಿಕಪ್ರಪಂಚ

ಅಲ್ಲಿಂದ ಮೇಲಕ್ಕೆ ಕಣ್ಣೆತ್ತಿ ನೋಡಿದರೆ ಕಾಣುವುದು ಭಾವಾನಂದ ಲೋಕ. ಅದು ಗಾಂಧರ್ವಲೋಕ. ಅಪ್ಸರೆಯರಂಥ ಮದನಿಕೆಯರು ಅಲ್ಲಿ ಹಾವಭಾವ ವಿಲಾಸಗಳನ್ನು ತೋರುತ್ತಿದ್ದಾರೆ. ಒಬ್ಬಾಕೆ ಕನ್ನಡಿಯಲ್ಲಿ ನೋಡಿಕೊಳ್ಳುತ್ತ ತನ್ನ ಮೈಬೆಡಗಿಗೆ ತಾನೇ ಮನಸೋತಿದ್ದಾಳೆ. ಇನ್ನೊಬ್ಬಳು ಸುಗಂಧ ತೈಲಗಳಿಂದ ತಲೆಗೂದಲನ್ನು ಸಿಂಗರಿಸಿಕೊಳ್ಳುತ್ತಿದ್ದಾಳೆ. ಮತ್ತೊಬ್ಬಳು ಆಭರಣ ಧರಿಸಿಕೊಳ್ಳುವ ಸಂಭ್ರಮದಲ್ಲಿದ್ದಾಳೆ. ಒಬ್ಬಳು ಓಕುಳಿಯಾಟದಲ್ಲಿದ್ದಾಳೆ. ಒಬ್ಬಳು ಬೇಟೆಯ ರಭಸದಲ್ಲಿದ್ದಾಳೆ. ಕೆಲವರು ಗಾನಪರವಶರಾಗಿದ್ದಾರೆ. ಕೆಲವರು ನರ್ತನೋನ್ಮತ್ತರಾಗಿದ್ದಾರೆ. ಒಬ್ಬಳು ಸೀರೆಯಲ್ಲಿ ಚೇಳು ಕಾಣಿಸಿದ ನೆವದಿಂದ, ಇನ್ನೊಬ್ಬಳು ಕೋತಿಯ ಕಾಟದ ನೆವದಿಂದ, ಭಯ-ಕೋಪಗಳ ಆವೇಶವನ್ನು ತಾಳಿ ಮೆಯ್ಯೊಬಗನ್ನು ವಿಕಾಸಗೊಳಿಸುತ್ತಿದ್ದಾರೆ. ಎಲ್ಲರೂ ಪರಮಸುಂದರಿಯರು, ಮತ್ತು ಎಲ್ಲರೂ ತಮ್ಮತಮ್ಮ ಸೌಂದರ್ಯದ ಮಹತ್ತ್ವವನ್ನು ತಿಳಿದುಕೊಂಡವರು. ಒಬ್ಬೊಬ್ಬಾಕೆ ಒಂದೊಂದು ಬಗೆಯ ಶೃಂಗಾರದ ಸೌಭಾಗ್ಯವನ್ನು ಸೂಸುತ್ತಿದ್ದಾಳೆ. ಜಗತ್ತಿರಬಹುದು, ದೈವವಿರಬಹುದು; ಆದರೆ ಜಗತ್ತೂ ದೈವವೂ ಸಾಧನಮಾತ್ರಗಳು; ಅವುಗಳಿಂದ ಆಗಬೇಕಾದ ಸಿದ್ಧಿಯು ರಸಸಮೃದ್ಧಿ,—ಭಾವಾನಂದ. ಇದು ಅವರ ನಿತ್ಯ ಘೋಷಣೆ.

ಆನಂದದ ಅಸಂಖ್ಯೇಯ ರೂಪಗಳಲ್ಲಿ ಸರ್ವವಿದಿತವಾದದ್ದು, ಸರ್ವ ಸುಲಭವಾದದ್ದು, ಸರ್ವಪ್ರಿಯವಾದದ್ದು ಶೃಂಗಾರ,—ಅಥವಾ ಸ್ತ್ರೀಪುರುಷರ

ಪರಸ್ಪರಾಕರ್ಷಣೆ. ಅದೇ ಸೃಷ್ಟಿಯ ಮೂಲಶಕ್ತಿ. ಉಪನಿಷತ್ತುಗಳು ಅದರ ಮಹಿಮೆಯನ್ನು ಸ್ಮರಿಸುತ್ತವೆ; ದೇವಕಥೆ ಋಷಿಕಥೆಗಳು ಅದಕ್ಕೆ ದೃಷ್ಟಾಂತವಾಗಿವೆ. ಪರಮೇಶ್ವರನ ಅನಂತಾನಂತ ವಿಲಾಸಗಳಲ್ಲಿ ಅದು ಒಂದು ನಿತ್ಯಪ್ರಕಾರದ್ದು. ಅದೂ ಒಂದು ಜಗದ್ಧರ್ಮ. ತರುಲತೆಗಳಲ್ಲಿ ಹೂವು; ಸ್ತ್ರೀಪುರುಷರಲ್ಲಿ ಶೃಂಗಾರ. ಹುವ್ವನ್ನು ಉಪಯೋಗಿಸುವವನಿಗೆ ನವುರು ನಾಜೂಕುಗಳು ಯುಕ್ತ; ಶೃಂಗಾರದ ಉಪಯೋಗದಲ್ಲಿ ನಯಸೌಜನ್ಯಗಳು ಅವಶ್ಯ. ಸ್ವಾಮಿಗರ್ಪಿಸಿದ ಹುವ್ವು ಪುಣ್ಯ; ಸ್ವಾಮಿಯ ಪ್ರಸಾದವೆಂದು ಅನುಭವಿಸಿದ ಶೃಂಗಾರವು ಧರ್ಮ. ಈಶ್ವರಸ್ಮೃತಿಯಿಂದ ಎಲ್ಲ ಮಾನುಷ ವ್ಯಾಪಾರಗಳೂ ಪವಿತ್ರವಾಗುತ್ತವೆ. ಶೃಂಗಾರೋಪಾಸನೆಯೂ ಹಾಗೆಯೇ. ಅದು ವಿಶ್ವಧರ್ಮದ ಒಂದಂಶ. ಈ ಸಂದೇಶವನ್ನು ಪ್ರಚುರಿಸಿ, ರಸಿಕಾನಂದದ ರೀತಿಯನ್ನು ನಿದರ್ಶನಗೊಳಿಸುವುದು ಈ ಅಪ್ಸರಲೋಕದ ಮರ್ಮವೆಂದು ಕಾಣುತ್ತದೆ. ಈ ಭಾವಸೌಂದರ್ಯಪ್ರದರ್ಶನವೇ ಬೇಲೂರಿನ ವಿಗ್ರಹಶಿಲ್ಪದ ಮುಕುಟಮಣಿ.

ವಿಗ್ರಹಶಿಲ್ಪದಲ್ಲಿ ನಾವು ಹಸ್ತಕೌಶಲವನ್ನು ಮಾತ್ರ,—ಎಂದರೆ ಕೊರೆಯುವ ಉಪಕರಣ ಪ್ರವೀಣತೆಯನ್ನು ಮಾತ್ರ,—ನೋಡುವುದಾದರೆ ಸೋಮನಾಥಪುರವು ಬೇಲೂರಿಗಿಂತ ಕಡಮೆಯದೇನೂ ಅಲ್ಲ. ಶೃಂಗಾರಭಾಗವನ್ನು ಹಾಗಿಟ್ಟು, ಪ್ರತಿಮೆಯ ಓಜೋವೀರ್ಯಗಳನ್ನು ಮಾತ್ರ ಗಣಿಸುವುದಾದರೆ ಬಾದಾಮಿಯ ವಿಗ್ರಹಶಿಲ್ಪ ಅದರ ಜಾತಿಯಲ್ಲಿ ಅಸಮಾನವಾದದ್ದೆಂದು ಹೇಳಬಹುದು. ಬೇಲೂರಿನ ವಿಗ್ರಹಶಿಲ್ಪದಲ್ಲಿ ವೀರ್ಯಗಾಂಭೀರ್ಯಾದಿ ಇತರ ಗುಣಗಳು ಉಚಿತ ಸಂದರ್ಭಗಳಲ್ಲಿ, ಉಚಿತ ಪ್ರಮಾಣಗಳಲ್ಲಿ, ಕಾಣಬರುತ್ತಿದ್ದರೂ, ಅಲ್ಲಿಯ ಪ್ರಧಾನಗುಣಗಳು ಶೃಂಗಾರ, ಲಾವಣ್ಯ, ಮಾಧುರ್ಯ,—ಇವು. ಅಲ್ಲಿಯ ಪ್ರಧಾನದೇವತೆ ಚೆನ್ನಕೇಶವ, ಸೌಮ್ಯ ನಾರಾಯಣ. ಅಲ್ಲಿಯ ಪ್ರಧಾನ ಗುಣ ಚೆನ್ನು, ಸೌಮ್ಯ, ಪ್ರಸನ್ನತೆ, ಜೀವನದ ಸರಸತೆ. ಕಾಳಿದಾಸನು ಮಾತಿನಿಂದ ಮಾಡಿಟ್ಟದ್ದನ್ನು ಜಕಣಾಚಾರಿ ಕಲ್ಲಿನಿಂದ ಹೊರಡಿಸಿದ್ದಾನೆ. ಕರ್ಣಾಟಕದ ಶಾಶ್ವತ ಸಂಸ್ಕೃತಿ ಭಂಡಾರದಲ್ಲಿ ಬೇಲೂರಿನ ವಿಗ್ರಹಶಿಲ್ಪವು ಒಂದು ಶಿರೋರತ್ನವೆಂದು ಹೇಳುವುದು ಉತ್ಪ್ರೇಕ್ಷೆಯ ಮಾತಾಗದು.

## ಸಂಸ್ಕೃತಿ ಕೇಂದ್ರ

ಒಂದು ದೇಶದ ಕಲಾಕೃತಿಗಳನ್ನು ಅದರ ಸ್ವೀಯ-ಚರಿತ್ರೆ ಎಂದು ಹೇಳುವುದುಂಟು. ಒಂದು ಜನದ ಕಾವ್ಯ, ಸಂಗೀತ, ಶಿಲ್ಪ, ಚಿತ್ರಣ,—ಇವು

ಗಳಲ್ಲಿ ಆ ಜನದ ಸ್ವಭಾವವು ವ್ಯಕ್ತಪಟ್ಟಿರುತ್ತದೆ. ಅವರ ಮನಸ್ಸಿನ ಅಂತರಾಳದಲ್ಲಿ ಅಡಗಿಕೊಂಡಿರುವ ಗುಣಶಕ್ತಿಗಳು ಎಂಥವು, ಅವರ ಮೂಲಧ್ಯೇಯಗಳೂ ಸಂಕಲ್ಪಗಳೂ ಎಂಥವು ಎಂಬುದಕ್ಕೆ ಕಲಾಕೃತಿಗಳು ಸಾಕ್ಷೀಭೂತವಾಗಿರುತ್ತವೆ. ನಮ್ಮ ದೇಶದಲ್ಲಿ, ಸಾಹಿತ್ಯವನ್ನು ಬಿಟ್ಟರೆ, ಜನದ ಅಂತರಂಗಚರಿತ್ರೆ ಮೂರ್ತೀಭವಿಸಿ ನಿಂತಿರುವುದು ನಮ್ಮ ದೇವಾಲಯಗಳ ಶಿಲ್ಪದಲ್ಲಿ,—ಅದರಲ್ಲಿಯೂ ದಕ್ಷಿಣದೇಶದ ದೇವಾಲಯಗಳಲ್ಲಿ. ಪ್ರಾಚೀನ ರಾಜ್ಯಗಳೆಷ್ಟೋ ನಷ್ಟವಾಗಿವೆ. ರಾಜಗೃಹಗಳು ನಿರ್ಮೂಲವಾಗಿವೆ. ಧನಿಕರ ಪ್ರಾಸಾದಗಳು ಮಣ್ಣುಪಾಲಾಗಿವೆ. ಕೋಟೆಕೊತ್ತಲಗಳು ನಿರ್ನಾಮವಾಗಿವೆ. ಗುಡಿಗಳು ಮಾತ್ರ—ಅನ್ಯಮತಸ್ಥರ ಹಾವಳಿ ಮುಟ್ಟಿದಷ್ಟು ಹೋಗಲಾಗಿ—ಯಥಾಸ್ಥಿತಿಯಲ್ಲಿ ಉಳಿದುಕೊಂಡಿವೆ. ನಮ್ಮ ಪೂರ್ವಿಕರು ಮನುಷ್ಯಕೃತಿಗಳಲ್ಲಿ ಶಾಶ್ವತವಾಗಿರಬಹುದಾದದ್ದೂ ಹಾಗೆ ಇರಲರ್ಹವಾದದ್ದೂ ದೇವಮಂದಿರವೊಂದೇ ಎಂದು ಭಾವಿಸಿಕೊಂಡಿದ್ದಂತೆ ಕಾಣುತ್ತದೆ.

ಗುಡಿಯೇ ಊರಿನ ಜೀವನ ಕೇಂದ್ರ. ಜನ ತಮ್ಮ ಆಹಾರ ನಿದ್ರೆ ಉದ್ಯೋಗಗಳ ವೇಳೆ ಬಿಟ್ಟು, ಮಿಕ್ಕೆಲ್ಲ ಹೊತ್ತನ್ನೂ ಗುಡಿಯ ಆವರಣದೊಳಗೇ ಕಳೆಯುತ್ತಿದ್ದರು. ಅದೇ ಅವರ ಪಾಠಶಾಲೆ, ಅವರ ಚಾವಡಿ, ಅವರ ನ್ಯಾಯಸ್ಥಾನ. ಅಲ್ಲಿಯೇ ಪುರಾಣಶ್ರವಣ, ಸಂಗೀತ, ನರ್ತನ. ಅಲ್ಲಿಯೇ ಬಂಧುಮಿತ್ರರ ದರ್ಶನ, ಊರಿನ ಯೋಗಕ್ಷೇಮವಿಚಾರ, ವಿನೋದಕಾಲಕ್ಷೇಪ. ಹೀಗೆ ನಮ್ಮ ಪೂರ್ವಿಕರಿಗೆ ಊರಿನಲ್ಲಿ ಮನೆಗಿಂತ ಮುಖ್ಯವಾದದ್ದು ದೇವಸ್ಥಾನ. ಸುಖದಲ್ಲಿ ಸುಕೃತಕ್ಕೂ ದುಃಖದಲ್ಲಿ ಧೈರ್ಯಕ್ಕೂ ಆಕರಭೂಮಿಯಾಗಿದ್ದದ್ದು ದೇವಸನ್ನಿಧಿ.

ಆದದ್ದರಿಂದ ಅವರ ಕಲಾಪ್ರೀತಿಯ ತರುಲತೆಗಳೆಲ್ಲ ಗುಡಿಗಳ ಚಿತ್ರಾಲಂಕಾರಪ್ರತಿಮೆಗಳಲ್ಲಿ ಕುಸುಮಿಸಿ ವಿಕಾಸಗೊಂಡಿವೆ. ಅಂಥ ಕುಸುಮಗಳಿಂದ ಚಿರ ಸೌರಭ ಭರಿತವಾದದ್ದು ಬೇಲೂರಿನ ಶ್ರೀ ಚೆನ್ನಕೇಶವ ಸನ್ನಿಧಿ.

ಕಲೆಯಿಂದ ಶಿಲೆಯಮೃತ |
ಲಲಿತಕಲೆ ಹೃತ್ ಸುಕೃತ |
ಬೇಲೂರ ನೋಡು ||
ಅಳಿವ ಲೋಕದ ನಡುವೆ |
ಉಳಿವ ರಸಘುಟಿಕೆ |
ಬಾಳ್ಜೇನ ಗೂಡು ||

# ಸೌಂದರ್ಯೋಪಾಸನೆ

೧. ಜಗತ್ತಿನ ಮೂಲವಸ್ತುವನ್ನು ಶಾಸ್ತ್ರವು "ಬ್ರಹ್ಮ" ಎಂದು ಕರೆದಿದೆ. ಆ ವಸ್ತುವನ್ನು ನಾವು ಜಗತ್ಸಂಬಂಧದಲ್ಲಿ "ಈಶ್ವರ" ಎಂದು ಕರೆಯುತ್ತೇವೆ.

೨. ಬ್ರಹ್ಮದ ಸ್ವಭಾವವು "ಚಿದಾನಂದ." ಅದು ಅನಂತವಾದ ಚೈತನ್ಯ ಮತ್ತು ಅನಂತವಾದ ಆನಂದ.

೩. ಆ ಚೈತನ್ಯದ ಕಾರ್ಯವು ಪ್ರಕೃತಿ. ಪ್ರಕೃತಿಯ ಕಾರ್ಯ ಜಗತ್ತು.

೪. ಆ ಆನಂದವು ಜಗತ್ತಿನ ದ್ವಾರಾ ಹರಿದು ನಮಗೆ ಕಾಣಿಸಿಕೊಂಡಾಗ ಅದು ಸೌಂದರ್ಯ.

೫. ಸೌಂದರ್ಯವು ಸ್ತ್ರೀಪುರುಷರ ಅನ್ಯೋನ್ಯಾಕರ್ಷಣೆಯಾದಾಗ ಶೃಂಗಾರವೆನಿಸಿಕೊಳ್ಳುತ್ತದೆ.

೬. ಸೌಂದರ್ಯವು,—ಅದರ ಒಂದು ರೂಪವಾದ ಶೃಂಗಾರವು ಸಹ,— ನಮಗೆ ಎರಡು ಸಂಬಂಧಗಳನ್ನು ದೊರಕಿಸುತ್ತದೆ;

(i) ತನ್ನ ಮೂಲವಾದ ಈಶ್ವರನೊಡನೆ, (ii) ತನಗೆ ಆಶ್ರಯವಾದ ಜಗತ್ತಿನೊಡನೆ.

೭. ಈಶ್ವರನೆಡೆಗೆ ನಮ್ಮನ್ನು ತಿರುಗಿಸುವ ಶೃಂಗಾರವು ಸಾತ್ತ್ವಿಕ ಶೃಂಗಾರ, ಅದು ರಸಿಕತೆ. ಜಗತ್ತಿನಕಡೆಗೆ ನಮ್ಮನ್ನು ತಿರುಗಿಸಿ ಅದರಲ್ಲಿ ಮುಳುಗಿಸುವ ಶೃಂಗಾರವು ರಾಜಸ-ತಾಮಸ ಶೃಂಗಾರ. ಅದು ಮೃಗಾತುರ.

೮. ಸೌಂದರ್ಯ—ಶೃಂಗಾರದ ಮಾರ್ಗವು ಕವಲೊಡೆಯುವ ಕಡೆ ನಿಂತಿದ್ದಾನೆ ಮನುಷ್ಯ. ಆ ಎರಡು ದಾರಿಗಳಲ್ಲಿ ಅವನು ಯಾವುದನ್ನು ಹಿಡಿಯುತ್ತಾನೋ ಅದರಂತೆ ಅವನ ಭವಿಷ್ಯ. ಸಾತ್ತ್ವಿಕದ್ದನ್ನೆ? ತಾಮಸದ್ದನ್ನೆ ? ಅವನ ವಿವೇಕಶಕ್ತಿ ಎಚ್ಚರಗೊಂಡಿರಬೇಕಾದದ್ದು ಇಲ್ಲಿ.

೯. ತಾಮಸ ಶೃಂಗಾರವು ಮೃಗದ ಹಸಿವು. ಅದು ದೇಹೇಂದ್ರಿಯಗಳ ಆತುರದಲ್ಲಿ ಪ್ರಾರಂಭವಾಗಿ, ದೇಹದ ವ್ಯಾಪಾರದಲ್ಲಿಯೇ ಮುಗಿಯುತ್ತದೆ. ಅದರಿಂದ ದೇಹದ ಒಳಗಿರುವ ಜೀವಕ್ಕೆ ಉಪಕಾರವಾಗದು. ಅದಕ್ಕೆ ಪ್ರತಿಯಾಗಿ ವ್ಯಾಮೋಹ, ನಿರಂತರ ಕ್ಷುತ್ತು, ಉದ್ವೇಗ, ಮತ್ಸರ, ರೋಷ, ಪ್ರಮಾದ, ಪಾಪ, ಸಂಸಾರ ತಾಪ—ಇವು ಜೀವಕ್ಕೆ ಮೃಗಭೋಜನದ ಫಲಿತಾಂಶ.

೧೦. ಸಾತ್ತ್ವಿಕ ಶೃಂಗಾರವು ದೇಹದಲ್ಲಿ ಪ್ರಾರಂಭಿಸಿದ್ದಾದರೂ ಅದರ ಪರಿಣಾಮವು ಜೀವಸಂಸ್ಕಾರದಲ್ಲಿ. ಅದು ದೇಹರಂಗದಿಂದ ಅಂತರಂಗಕ್ಕಿಳಿದು ಮನಸ್ಸನ್ನು ಶೋಧಿಸಿ, ಅಲ್ಲಿಂದ ಜೀವದೊಳಗೆ ವ್ಯಾಪಿಸಿ, ಅದನ್ನು ಶ್ರೇಯ ಸ್ಸಾಧನೆಗೆ ಅರ್ಹವನ್ನಾಗಿ ಮಾಡುತ್ತದೆ. ಹೀಗೆ ರಸಿಕ ಶೃಂಗಾರವು ಮುಖ್ಯವಾಗಿ ಮನಃ ಪ್ರಧಾನವಾದದ್ದಾಗಿ, ಜೀವಕ್ಕೆ ಒಂದು ಹಿತಶಿಕ್ಷಣ ವಾಗುತ್ತದೆ.

೧೧. ಸಾತ್ತ್ವಿಕ ಶೃಂಗಾರದಿಂದ ಜೀವಕ್ಕಾಗುವ ಪ್ರಯೋಜನಗಳನ್ನು ಸಂಗ್ರಹವಾಗಿ ಗುರುತುಮಾಡಿಕೊಳ್ಳೋಣ;

೧. **ಜೀವನೇಚ್ಛೆ**—ಬದುಕುವ ಮನಸ್ಸು. ನಮಗೆ ಜಗತ್ತಿನ ವಿಷಯದಲ್ಲಿ ಕುತೂಹಲವೂ ಜೀವನ ವಿಷಯದಲ್ಲಿ ಉತ್ಸಾಹವೂ ಇರುವುದು ಸೌಂದರ್ಯಾನು ಭವದ ಆಶೆಯಿಂದ.

೨. **ಮನಃಪ್ರಸನ್ನತೆ**—ರೋಗಿಗೆ ಜ್ವರಬಾಧೆಗಳು ಇಳಿದಮೇಲೆ ಎಂಥ ನೆಮ್ಮದಿ ಅನುಭವವಾಗುತ್ತದೆಯೋ ಅಂಥಾ ಚಿತ್ತ ಸಮಾಧಾನ ಬರುತ್ತದೆ ಕಷ್ಟದ ನಡುವೆ ನಮಗೆ ಸೌಂದರ್ಯದ ಸಂತೋಷದಿಂದ.

೩. **ಹೃದಯ ವೈಶಾಲ್ಯ**—ಪ್ರೇಮಸೂತ್ರವು ಹೃದಯವನ್ನು ಎಳೆದೆಳೆದು ವಿಸ್ತಾರ ಮಾಡುತ್ತದೆ. "ನಾನು" "ನಾನು" ಎಂದುಕೊಳ್ಳುತ್ತಿದ್ದವನು "ನನ್ನವಳು" "ನನ್ನವರು" ಎಂದು ಚಿಂತಿಸುವಂತಾಗುತ್ತದೆ. ಅಹಂತೆಯು ಹರಡಿ, ಮಮತೆಯಾಗಿ ಮಾರ್ಪಡುತ್ತದೆ. ಸ್ವಾರ್ಥವು ಸಡಲಿ ತೆಳುವಾಗಲು ಇದು ಪ್ರಾರಂಭ.

೪. **ಲೋಕಸ್ನೇಹ**—ಪತ್ನೀ ಪುತ್ರರಿಗೋಸ್ಕರ ಬಂಧು ಬಳಗ ಬೇಕಾಗು ತ್ತದೆ. ಕುಟುಂಬ ಸೌಖ್ಯಕ್ಕಾಗಿ ಲೋಕದ ಸಹಾಯ ಅವಶ್ಯವಾಗುತ್ತದೆ. ಹೀಗೆ ಜೀವನಕ್ಷೇತ್ರ ವಿಸ್ತರಿಸುತ್ತದೆ. ಸ್ವಾರ್ಥಪ್ರಯತ್ನವು ಪರಾರ್ಥ ಪರಿಶ್ರಮದಲ್ಲಿ ಪರ್ಯವಸಾನವಾಗುತ್ತದೆ. ಅಹಂಭಾವ ಸವೆಯುತ್ತದೆ.

೫. **ಸ್ವಾತ್ಮಶೋಧನೆ**—ಪ್ರಣಯ ಸಂಬಂಧಗಳೂ ಕುಟುಂಬ ಸಂಬಂಧ ಗಳೂ ಜೀವವನ್ನು ನಾನಾ ಪರೀಕ್ಷೆಗಳಿಗೆ ಸಿಕ್ಕಿಸುತ್ತವೆ. ದ್ರವ್ಯಸಂಪಾದನೆ, ಋಣ, ರೋಗ, ವಿಯೋಗ, ಸಂಶಯ, ಆಶಾಭಂಗ—ಇಂಥಾ ಅನುಭವಗಳಲ್ಲಿ ಜೀವವು ಅಲೆದಾಡಿ ಬಳಲಿ ಬೆಂದು ಮೃದುವಾಗುತ್ತದೆ; ಗಟ್ಟಿಯೂ ಆಗುತ್ತದೆ. ಅದರ ಸಹನಶಕ್ತಿಯು ಬಲಪಟ್ಟು, ಅದರ ಸಮಚಿತ್ತತೆಯು ದೃಢವಾಗುತ್ತದೆ.

೬. **ಸದಸದ್ವಿವೇಕ**—ಶೃಂಗಾರವು ಗಂಟು ಹಾಕಿದ ಸಂಸಾರದ ಕಾರಣ ದಿಂದ ಒದಗಿಬಂದ ಲೋಕಾನುಭವಗಳು ಮನುಷ್ಯನ ವಸ್ತು ಮೌಲ್ಯವಿವೇಕ ವನ್ನು ಕೃಷಿಮಾಡಿಸುತ್ತವೆ. ಜಗದ್ವಸ್ತುಗಳಲ್ಲಿ ಯಾವ ಯಾವುದಕ್ಕೆ ಎಷ್ಟೆಷ್ಟು ಬೆಲೆ ಸಲ್ಲುತ್ತದೆ, ಯಾವಯಾವ ಸ್ಥಾನ ಸಲ್ಲುತ್ತದೆ—ಎಂಬುದನ್ನು ಅವನು ವಿಚಾರ ಮಾಡಲರಿಯುತ್ತಾನೆ.

೭. **ಧರ್ಮಪ್ರವೃತ್ತಿ**—ಲೋಕಸಂಪರ್ಕವು ಜೀವಿತಸೌಖ್ಯಕ್ಕೆ ಅವಶ್ಯ ವಾಗಿರುವಂತೆ, ಲೋಕರೂಢಿಯ ವಿಧಿನಿಷೇಧಗಳ ಅಂಗೀಕಾರವೂ ಲೋಕ ಸಹವಾಸಕ್ಕೆ ಅನಿವಾರ್ಯವಾಗುತ್ತವೆ. ಇಂಥಾ ಸ್ವೇಚ್ಛಾದಮನವೇ ಧರ್ಮ. ವಿವಾಹವೆಂಬ ಶೃಂಗಾರ ಸಂಸ್ಕಾರವೂ ಒಂದು ಧರ್ಮಸಂಸ್ಕಾರ. ಹೀಗೆ ಗೃಹಸ್ಥ ಜೀವನವೇ ಒಂದು ಜೀವ ಶಿಕ್ಷಣ.

೮. **ಜೀವಪ್ರಗತಿ**—ಸೌಂದರ್ಯ ಸಂಪಾದಿತಗಳಾದ ವಿವಿಧ ಬಾಂಧವ್ಯ ಗಳ ಅನುಭವಗಳಿಂದ ಜೀವವು ಪರತತ್ತ್ವ ವಿಚಾರಕ್ಕೆ ಪ್ರೇರಿತವಾಗುತ್ತದೆ. ಸ್ವೇಚ್ಛಾ ದಮನಾಭ್ಯಾಸದಿಂದ ಅದು ಶ್ರೇಯಸ್ಸಾಧನೆಗೆ ಸಮರ್ಥವಾಗುತ್ತದೆ. ವ್ಯಕ್ತಿಜೀವದ ಅಹಂತೆ ಹರಡುತ್ತ ಹರಡುತ್ತ, ಕ್ರಮೇಣ ವಿಶ್ವವಿಶಾಲವಾಗಿ, ಸ್ವಾರ್ಥವು ಕೃಶವಾಗುತ್ತದೆ. ಅಂಥವನಿಗೆ ಸುಖ-ದುಃಖ ಸಮಸಹನೆ ಸುಲಭ ವಾಗುತ್ತದೆ. ಸಂಸಾರವು ಬಣಸೌದೆಯ ಹೊರೆಯಾಗದೆ, ಹೂವಿನ ಹಾರ ವಾಗುತ್ತದೆ. ಅಂಥವನ ಕಣ್ಣಿಗೆ ಎಲ್ಲೆಡೆಯೂ ಈಶ್ವರಲೀಲೆಯೊಂದೇ ದೃಶ್ಯ ವಾಗುತ್ತದೆ. ಆದದ್ದರಿಂದಲೇ ಗೀತೆಯ ಮಾತು ಹೀಗಿದೆ;

> ಧರ್ಮಾವಿರುದ್ಧೋ ಭೂತೇಷು
> ಕಾಮೋಽಸ್ಮಿ ಭರತರ್ಷಭ || ೭—೧೧.

> "ಧರ್ಮಕ್ಕೆ ವಿರೋಧವಾಗದೆ ಅನುಕೂಲವಾಗಿರುವ ಕಾಮ ವಿಲಾಸವು ದೈವಪ್ರಸಾದ."

ಅದು ಜೇನುತುಪ್ಪದಂತೆ ಸ್ವಾದುವಾದ ಔಷಧ.

ಹೀಗೆ ವಿವೇಕಶಾಲಿಗೆ ಸೌಂದರ್ಯ ಶೃಂಗಾರಗಳು ಧರ್ಮ ಸಂಸ್ಕಾರ ಗಳಾಗುತ್ತವೆ.

---

# ಹಾಡುಗರಲ್ಲಿ ಬಿನ್ನಹ

ಈ ಪುಸ್ತಕದಲ್ಲಿಯ ಗೀತೆಗಳು ಸಾಮಾನ್ಯವಾಗಿ ಎಲ್ಲರೂ ಹಾಡಿಕೊಳ್ಳಬಹುದಾದವು. ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯದವರೂ ಇವನ್ನು ಅಭ್ಯಾಸಮಾಡಿ ಸಾಧಿಸಿಕೊಳ್ಳಬಹುದು.

ಹಾಡುವಾಗ, ಗೀತೆಯ ಸುಡಿಯನ್ನೆತ್ತುವುದಕ್ಕೆ ಮುಂಚೆ, ಒಂದೆರಡು ಕ್ಷಣ ಅದರ ರಾಗವನ್ನು ಆಲಾಪನೆಮಾಡಿ, ರಾಗದ ಛಾಯೆಯನ್ನು ತೋರಿಸುವುದರಿಂದ ಅನುಕೂಲವುಂಟು. ಈ ಪೀಠಿಕಾಲಾಪನೆಯಲ್ಲಿ ಆ ಗೀತೆಗೆ ಪೀಠಿಕೆಯಾಗಿ (ಅದರ ಚಿತ್ರಪಟದ ತಳದಲ್ಲಿ) ಕೊಟ್ಟಿರುವ ಪದ್ಯವನ್ನು ಹಾಡಿದರೆ ಅದರಿಂದ ಆ ಗೀತೆಗೆ ತಕ್ಕ ವಾತಾವರಣವು ಕಲ್ಪಿತವಾಗಿ, ಗಾಯನವು ಮತ್ತಷ್ಟು ಶ್ರಾವ್ಯವಾದೀತು.

ಈ ಕೃತಿಯ ಸ್ವಭಾವವನ್ನು ಗಮನಿಸೋಣವಾಗಲಿ. ಇದು ಶೃಂಗಾರಿಗಳ ಅಂತರಂಗದ ಚಲನವಲನಗಳನ್ನು ಪ್ರತಿಬಿಂಬಿಸ ಹೊರಟದ್ದು. ಈ ಗೀತೆಗಳಿಗೆ ಮುಖ್ಯವಾಗಿ ಬೇಕಾದ ಗಾಯಕ ಗುಣವು ಲಾಲಿತ್ಯ,—ಪಾಂಡಿತ್ಯವಲ್ಲ. ಶ್ರಾವ್ಯವೂ ಗಮಕಸಂಪನ್ನವೂ (ಪಲುಕುಬಡಿ) ಆದ ಧ್ವನಿ, ಸಾಮಾನ್ಯ ಮಟ್ಟಕ್ಕೆ ಕಡಮೆಯಲ್ಲದ ಸಂಗೀತಾಭ್ಯಾಸ, ಸಾಹಿತ್ಯಾರ್ಥದ ಅನುಭವ—ಇಷ್ಟಿದ್ದರೆ ಈ ಹಾಡಿಕೆ ಚೆನ್ನವೆನಿಸೀತು. ಹೆಚ್ಚಿನ ಶಾಸ್ತ್ರಕಾರ್ಯಕ್ಕೆ ಇಲ್ಲಿ ಅವಕಾಶ ಸಾಲದು.

ಈ ಗೀತೆಗಳಲ್ಲಿ ಮೂರು ಬಗೆಯ ಹೃದಯಭಾವಗಳು ಸಂಮಿಳಿತವಾಗಿವೆ. (೧) ರೂಪಭಾವ. ಇದು ವಿಗ್ರಹದಲ್ಲಿ ಶಿಲ್ಪಿ ಕೊರೆದಿರುವ ಅಂಗಾಂಗ ಸಂಜ್ಞೆಗಳಿಂದ ತೋರತಕ್ಕದ್ದು. (೨) ವಾಕ್ಯಭಾವ. ಇದು ಅಂಗ ಭಂಗಿಗಳ ಇಂಗಿತವನ್ನು ಮಾತುಗಳಿಂದ ಸ್ಪಷ್ಟಪಡಿಸತಕ್ಕದ್ದು. (೩) ಗಾನಭಾವ. ಇದು ಅಕ್ಷರಗಳ ಒಳಗೂ ಹೊರಗೂ ತುಂಬಿಕೊಂಡು ರಂಜನೆಯನ್ನುಂಟುಮಾಡುವ ರಾಗಪ್ರವಾಹ. ಈ ಮೂರುಭಾವಗಳೂ ಹಾಡಿಕೆಯಲ್ಲಿ ಒಂದಕ್ಕೊಂದು ಹೊಂದಿಕೊಂಡಿರಬೇಕಾದುವಷ್ಟೆ?

ಮೊದಲು ಬೇಕಾದದ್ದು ಶಾರೀರಶುದ್ಧಿ. ಎರಡನೆಯದು ಪದವಿವೇಕ. ಅಕ್ಷರಗಳನ್ನು ಬಿಡಿಸುವುದರಲ್ಲಿಯೂ ಜೋಡಿಸುವುದರಲ್ಲಿಯೂ ಔಚಿತ್ಯ. ಇದನ್ನು ಉಪಾಧ್ಯಾಯರಿಂದ ತಿಳಿದುಕೊಳ್ಳಬಹುದು. ಮೂರನೆಯದು ಸ್ಫುಟವಾದ ಉಚ್ಚಾರಣೆ. ಪ್ರತಿಯೊಂದಕ್ಷರಕ್ಕೂ ತಕ್ಕ ಬೆಲೆಯನ್ನು ಸಲ್ಲಿಸಬೇಕು. ನಾಲ್ಕನೆಯದು ಪಾಠಸಾಧನೆ. ಇದು ಸಂತತವಾದ ಸ್ವಪ್ರಯತ್ನ. ಹಾಡುಗನು ಮೊದಲು ಗೀತೆಯ ನುಡಿಗಳನ್ನು ಬಾಯಿಪಾಠ ಮಾಡಿಕೊಂಡು, ಬಳಿಕ

ಅದನ್ನು ತನಗೆ ತಾನೇ ಪದೇಪದೇ ಹಾಡಿಕೊಳ್ಳುತ್ತಿರಬೇಕು. ಬರಹದಿಂದ ಓದಿದ್ದು ಹಾಡಲ್ಲ; ನೆನಪಿನಿಂದ ಹಾಡಿದ್ದೇ ಹಾಡು. ಇಷ್ಟು ಸಿದ್ಧತೆಯಾದ ಮೇಲೆ ಗೀತೆಯ ಒಳಗಣ ಮನೋವಿಲಾಸಗಳ ಸ್ವಾನುಭವವು ಎಲ್ಲದರಲ್ಲಿಯೂ ವ್ಯಕ್ತವಾಗಬೇಕು. ಹಾಗಾದಾಗ ಸಂಗೀತ.

ರಾಗಸಾಮರ್ಥ್ಯ, ಸ್ವಾನುಭವ — ಇವೆರಡೂ ಪರಸ್ಪರ ಪರಿಪೋಷಕಗಳು. ಅರ್ಥದ ಅನುಭವವಾದಂತೆಲ್ಲ ರಾಗದಲ್ಲಿ ಒಲವು ಒಯ್ಯಾರಗಳು ತಾವಾಗಿ ತುಂಬಿ ಬರುತ್ತವೆ. ರಾಗವಿನ್ಯಾಸ ಸೊಗಸಿದಂತೆಲ್ಲ ಮನಸ್ಸಿನ ಅನುಭವಗಳು ಸೂಕ್ಷ್ಮತರವಾಗುತ್ತವೆ.

ಹಾಡುವಾಗ ಗೀತೆಯ ನುಡಿಯನ್ನು ಎತ್ತಿಕೊಳ್ಳುವುದಕ್ಕೆ ಮುಂಚೆ ಒಂದು ನಿಮಿಷಮಾತ್ರ ಪೀಠಿಕೆಯಾಗಿ ರಾಗಾಲಾಪನೆ ಮಾಡಿದರೆ ಅದರಿಂದ ಗೀತಾಗಾನಕ್ಕೆ ಅನುಕೂಲವಾದ ಮನೋವಾತಾವರಣ ಕಲ್ಪನೆಯಾಗುತ್ತದೆ. ಪೀಠಿಕಾಲಾಪನೆ ಮಿತವಾಗಿರಬೇಕು.

ಈ ಪುಸ್ತಕದಲ್ಲಿ ಸೂಚಿಸಿರುವ ರಾಗಗಳು ಪ್ರಯೋಗ ಅನುಭವಗಳಿಂದ ಸರಿಯೆಂದು ಕಂಡುಬಂದಿವೆ. ರಾಗದಲ್ಲಿ ಸ್ವಾರಸ್ಯ ತುಂಬುವುದು ಗಾಯಕನ ಕುಶಲತೆ. ಮನಸ್ಸು ಬಂದರೆ ಆತನು ಸಣ್ಣ ಸಣ್ಣ ರಾಗಗಳಿಂದಲೇ ದೊಡ್ಡಕೆಲಸ ಮಾಡಿಸಲಾಗುತ್ತದೆ. ಮನಸ್ಸು ಬಾರದಿದ್ದರೆ ಎಂಥ ಘನ ರಾಗವನ್ನಾದರೂ ಸಾಕೆನ್ನುವಂತೆ ಮಾಡಲಾಗುತ್ತದೆ. ಮನೋಧರ್ಮ ಮುಖ್ಯ.

ಇಲ್ಲಿಯ ಅರುವತ್ತು ಗೀತೆಗಳಲ್ಲಿ ಐವತ್ತಕ್ಕೆ ಮಧ್ಯಮ ಕಾಲಗತಿ ಒಪ್ಪುತ್ತದೆ. ವಿಲಂಬದ ನಡಿಗೆಗೆ ಮೊದಲಿನ ಎರಡುಮೂರೂ ಕಡೆಯ ಎರಡುಮೂರೂ ಅನುಕೂಲಿಸಬಹುದು. ದ್ರುತಗತಿಗೆ ಇಲ್ಲಲ್ಲಿ ಮೂರುನಾಲ್ಕು ಗೀತೆಗಳು ಮಾತ್ರ ಹೊಂದಬಹುದು.

ಪ್ರೌಢವಾದ ಸ್ವರವಿಜೃಂಭಣೆಗೂ ಲಯ ಚಮತ್ಕಾರಕ್ಕೂ ಈ ಗೀತೆಗಳಲ್ಲಿ ಸ್ಥಲವಿಲ್ಲ. ಇಲ್ಲಿಗೆ ಒಪ್ಪುವುದು ನಯನವುರುಗಳುಳ್ಳ ನೆಮ್ಮದಿಯ ಸಂಗೀತ.

ಹಾಡುವವನು ಭಾವಾನುಭವದ ಸಂತೋಷದಲ್ಲಿ ತನ್ನನ್ನು ತಾನು ಮರೆತುಕೊಂಡು ಹಾಡಬೇಕು. ಮಲ್ಲಿಗೆಯ ಮೊಗ್ಗು ಅರಳುವಾಗ "ವಾಸನೆ ಹಿಡಿಯಲು ಇಲ್ಲಿ ಸಭೆ ಸೇರಿದೆಯೆ?" ಎಂದು ಕೇಳುವುದಿಲ್ಲ; ಆತ್ಮವಿಕಾಸಕ್ಕಾಗಿ ಅರಳುತ್ತದೆ. ಕೋಗಿಲೆ ಹಾಡುವಾಗ "ಸಭಿಕರಿದ್ದಾರೆಯೆ ಆಲಿಸುವುದಕ್ಕೆ?" ಎಂದು ಕೇಳುವುದಿಲ್ಲ; ಆತ್ಮ ಸಂತೃಪ್ತಿಗಾಗಿ ಹಾಡುತ್ತದೆ. ಹಾಗೆ ಗಾಯಕನು ತನ್ನನ್ನೂ ಇತರರನ್ನೂ ದೃಷ್ಟಿಯಲ್ಲಿರಿಸಿಕೊಳ್ಳದೆ, ನೈಜ ಸಂತೋಷವುಕ್ಕಿ ಹರಿದಾಗ ಹಾಡಿದ ಹಾಡೇ ಸಂಗೀತ.

---

ವಿಷ್ಣುವರ್ಧನರಾಯ

## ಶ್ರೀ ಚೆನ್ನಕೇಶವ

# ಅನ್ತಃಪುರಗೀತೆ

### ನಾಂದಿ

ಶ್ರೀಮತ್ತ್ರೈಲೋಕ್ಯ ಪೂಜ್ಯಾಯ |
ಸರ್ವ ಕರ್ಮಸು ಸಾಕ್ಷಿಣೇ ||
ದೇವಾಯ ನಮೋ ನಿತ್ಯಂ |
ಕೇಶವಾಯ ಶಿವಾಯ ಚ || ೧

ಜಯತಿ ಭುವನ ಲೋಕ[illegible] ವಾದಃ |
ಚತುರ ಮಧುರಗೋಷ್ಠೀ [illegible] ವಿನೋದಃ ||
ಸಕಲ ಭುವನ[illegible] ಗಂಭೀರ ಭಾವಃ |
ವಿಮಲ [illegible] ವಿಷ್ಣುದೇವಃ || ೨

ವಿಷ್ಣುರ್ಜಿಷ್ಣುರ್ಮಹೀಪಾಲಃ |
ಪಾಲಿತಾಖಿಲ ಭೂತಲಃ ||
ದೇವದೇವೇಶ ವಿಜಯ |
ನಾರಾಯಣಮಹೀಶರತ್ || ೩

ಶಾನ್ತಿಕೃತ್ಸರ್ವ ಭೂತಾನಾಂ |
ಪ್ರತಿಷ್ಠಾ ವಿಷ್ಣುಕಾಂತಯಾ ||
ಚೆನ್ನಕೇಶವ ದೇವಸ್ಯ |
ಶಾನ್ತಿದೇವ್ಯಾ ಕೃತೋತ್ಸವಾ || ೪

(೧) [illegible] 58, 71 ([illegible] 1117); (೨) [illegible]; (೩) [illegible] (೪) [illegible]

ವಿಷ್ಣು ವರ್ಧನರಾಯ

# ಶ್ರೀ ಚೆನ್ನಕೇಶವ

# ಅನ್ತಃಪುರಗೀತೆ

---

## ನಾಂದಿ

ಶ್ರೀಮತ್ತ್ರೈಲೋಕ್ಯ ಪೂಜ್ಯಾಯ |
ಸರ್ವ ಕರ್ಮಸು ಸಾಕ್ಷಿಣೇ ||
ಫಲದಾಯ ನಮೋ ನಿತ್ಯಂ |
ಕೇಶವಾಯ ಶಿವಾಯ ಚ || ೧

ಜಯತಿ ಧರಣಿ ಲೋಕೋತ್ತಂಸಿತಾತ್ಮೀಯ ಪಾದಃ |
ಚತುರ ವಿಬುಧಗೋಷ್ಠೀ ಪ್ರೌಢವಾಣೀ ವಿನೋದಃ ||
ಸಕಲ ಭರತವಿದ್ಯಾಹೃದ್ಯ ಗಂಭೀರ ಭಾವಃ |
ವಿಪುಲ ವಿಜಯಲಕ್ಷ್ಮೀ ವಲ್ಲಭೋ ವಿಷ್ಣುದೇವಃ || ೨

ವಿಷ್ಣುರ್ಜಿಷ್ಣುರ್ಮಹೀಪಾಲಃ |
ಪಾಲಿತಾಖಿಲ ಭೂತಲಃ ||
ದೇವದೇವೇಶ ವಿಜಯ |
ನಾರಾಯಣಮಚೀಕರತ್ || ೩

ಶಾನ್ತಿಕೃತ್ಸರ್ವ ಭೂತಾನಾಂ |
ಪ್ರತಿಷ್ಠಾ ವಿಷ್ಣುಕಾಂತಯಾ ||
ಚೆನ್ನಕೇಶವ ದೇವಸ್ಯ |
ಶಾನ್ತಿದೇವ್ಯಾ ಕೃತೋತ್ತಮಾ || ೪

---

(೧) ಬೇಲೂರು ಶಾಸನ 58, 71 (ಕ್ರಿ. ಶ. 1117); (೨) ಅದೇ ; (೩) ಶ್ರೀ ಮೂಲಕೇಶವ ವಿಗ್ರಹ ಪೀಠದ ಶಾಸನ, ಬೇಲೂರು 254; (೪) ಶ್ರೀ ಕಪ್ಪೆ ಚೆನ್ನಿಗರಾಯ ವಿಗ್ರಹ ಪೀಠದ ಶಾಸನ, ಬೇಲೂರು 275.

“.... ಪರಬ್ರಹ್ಮಸ್ವರೂಪನುಂ ಅತಿಪ್ರಸನ್ನನುಂ ಚೆನ್ನನುಮೆನಿಪ ಶ್ರೀಮದ್ವಿಜಯ ನಾರಾಯಣದೇವರಂ ಶ್ರೀಮದ್ವಿಷ್ಣುವರ್ಧನ ಪೊಯ್ಸಳ ದೇವರ್ ಸದ್ಭಕ್ತಿಯಿಂ ಸುಪ್ರತಿಷ್ಠಿತಂ ಮಾಡಿ ಶಕವರ್ಷ ಸಾಸಿರದ ಮೂವತ್ತೊಂಭತ್ತನೆಯ ಹೇವಿಳಂಬಿ ಸಂವತ್ಸರದ ಚೈತ್ರ ಶುದ್ಧ ಪಂಚಮೀ ವಡ್ಡವಾರ..” || ೫

ಭಜಾಮ್ಯಹಂ ಶ್ರೀವಸುಧಾಸಮೇತಂ
ಭಸ್ಮಾಸುರಧ್ವಂಸಕಮಿಂದುವಕ್ತ್ರಂ |
ಯೋಷಾಕೃತಿಂ ಬಿಭ್ರದಮುಂಬುಜಾಕ್ಷಂ
ಶ್ರೀಕೇಶವಂ ದಿವ್ಯಮನಂತರೂಪಂ || ೬

ಯಂ ಶೈವಾಸ್ಸಮುಪಾಸತೇ ಶಿವ ಇತಿ
ಬ್ರಹ್ಮೇತಿ ವೇದಾಂತಿನೋ |
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ
ಕರ್ತೇತಿ ನೈಯಾಯಿಕಾಃ ||
ಅರ್ಹಂಶ್ಚೇತಿ ಚ ಜೈನಶಾಸನ ಮತಾಃ
ಕರ್ಮೇತಿ ಮೀಮಾಂಸಕಾಃ |
ಸೋಽಯಂ ವೋ ವಿದಧಾತು ವಾಂಛಿತಫಲಂ
ಶ್ರೀಕೇಶವೇಶಸ್ಸದಾ || ೭

ನಮಃ ಕೇಶವನಾಥಾಯ |
ನಯನಾನಂದಮೂರ್ತಯೇ ||
ವೇಲಾಪುರೀನಿವಾಸಾಯ |
ಸತ್ಯಜ್ಞಾನಾಯ ವಿಷ್ಣವೇ || ೮

---

(೫) ಬೇಲೂರು ಶಾಸನ 58, 71 (ಕ್ರಿ. ಶ. 1117)—*Epigraphia Carnatica*, Vol. V, Pt. II & Vol. XV. (೬) ಪ್ರಾಚೀನ ಶ್ಲೋಕ. (೭) ಬೇಲೂರು ಶಾಸನ 3 (ಕ್ರಿ. ಶ. 1397). (೮) ಪ್ರಾಚೀನ ಶ್ಲೋಕ

# ಪದ್ಯ–ಗೀತಮಾಲಿಕೆ

ಶ್ರೀ ಚೆನ್ನಕೇಶವಸ್ವಾಮಿ

# ಸೌಂದರ್ಯ ತತ್ತ್ವಂ

ಏನೀ ಮನೋನ್ಮಾದನ ಗಾನಸಂಭ್ರಮಂ |
ಏನೀ ಹೃದಾರ್ದ್ರೀಕರಣೋದ್ಯಮಕ್ರಮಂ ||
ವಾಣಿಸ್ವದಾರಾಭಿನಯಾರ್ಥವೇನಿದೇ-|
ನಾನಂದ ಸಂರಂಭಮದೇನು ಕಾರಣಂ || ೧

ಕಾಂತಾ ಸ್ವತಂತ್ರೋಚ್ಛ್ರಯ ರಾಸ ರಾಪವೇಂ |
ಸಂತುಷ್ಟ ಜೀವೋತ್ಸವ ನಾಟ್ಯರಂಗವೇಂ ||
ಇಂತಪ್ಪ ಕೋಲಾಹಲಮಿನ್ನದೆಲ್ಲಿ ನೋ-|
ಡಂತಃಪುರಂ ಕೇಶವರಂಜನಾತುರಂ || ೨

ತಾನೆಲ್ಲ ವಿಶ್ವದ್ಯುತಿಶಕ್ತಿಯಾಗಿಯುಂ |
ತಾನೆಲ್ಲರಕ್ಷಿ ಶ್ರುತಿ ಸೌಖ್ಯವಾಗಿಯುಂ ||
ಮಾನುಷ್ಯದಿಂ ನರ್ತನವಾಗಿಸುತ್ತೆ ತಾ-|
ನಾನಂದಿಪಂ ಕೇಶವನಾದಿಚೇತನಂ || ೩

ಪಾರಾವಾರದಿ ಮಾರುತಾಹತಿಯಿನಾದುಲ್ಲೋಲಕಲ್ಲೋಲಮಂ |
ತೀರಸ್ಥಂ ಕುತುಕಂಬಡುತ್ತೆ ನಿರುಕಿಪ್ಪಂತೀ ಸಭಾಸ್ಥಾನದೊಳ್ ||
ಸ್ಮೇರಾಸ್ಯಂ ಸಿರಿಕೇಶವಂ ನೆಲಸಿ ತಾಂ ನೋಳ್ಪಂ ಜಗದ್ಯೋಗದಿಂ |
ನಾರಸ್ವಾಂತದೊಳೇಳ್ವ ಭಾವರಸವೀಚೀಘೂರ್ಣನೋಲ್ಲಾಸಮಂ || ೪

ಜೀವಾಂತಃಕರಣಾಂಬುರಾಶಿಯು ಜಗತ್ಸಂಸರ್ಗಜಾತಾನಿಲಂ |
ಸಾವೇಗಂ ಗೆಯೆ ನೋಡು ತೀವಿ ಪರ್ಗುಂ ಭಾವೋರ್ಮಿಮಾಲಾಕುಲಂ ||
ದೇವೋಪಾಸನದೀಕ್ಷೆಯೇನಿದು ಮನುಷ್ಯೋತ್ಕರ್ಷಸಂಧಾನವೇಂ |
ಲಾವಣ್ಯಾರ್ಥ ವಿಕಾಸಮೇನಿದು ಧರಾಸ್ವರ್ಗೈಕ್ಯ ಸಂಸಿದ್ಧಿಯೇಂ || ೫

ಸೌಂದರ್ಯಂ ಪರವಸ್ತುಸಾಗರ ಚಿದಾನಂದೋರ್ಮಿಮಾಲಾ ಪೃಷ-|
ದ್ಬಿಂದೂತ್ಸೇಕಮಕಾಂಡಪುಣ್ಯ ಪವನಾಪಾತಂ ನರಂಗುರ್ವಿಯೊಳ್ ||
ಅಂಧೀಕಾರಕಮಾಪ್ಪೃಷನ್ಮಯಪಟಂ ಭೋಗಾಶಯಂಗಾದೊಡಂ |
ಸಂಧ್ಯಾತಾತ್ಮವಿಚಾರಿಗಾ ರಸಘರಂ ತಾಂ ಬ್ರಹ್ಮಸಂಜ್ಞಾಪಕಂ || ೬

ಲಾವಣ್ಯಂ ಸುಳಿದಂದು ಗೀತಹಸಿತಂಗಳ್ ತೀವಿದಂದು ಪ್ರಿಯಾ-|
ಹಾವೋದ್ಭಾವಗಳಾಡಿದಂದು ಸುಮಗಂಧಂ ಬೀಸಿದಂದಾ ಸುಖಂ ||
ಜೀವಾನಂದ ಸಮಸ್ತಮೂಲ ಚಿದನಂತಬ್ರಹ್ಮರಾಸಿಕ್ಯದೊಂ-|
ದಾವಿರ್ಭಾವಮೆನುತ್ತೆ ಸಂತಸಿಸುವಂ ತತ್ತ್ವಜ್ಞನಾತ್ಮೈಕ್ಯದಿಂ || ೭

ಬೇಲೂರ ಶಿಲಾಬಾಲಾಮಣಿಯರ್ |
ಶ್ರೀಲಾಕೃತಿ ಲಾವಣ್ಯೋಜ್ಜ್ವಲೆಯರ್ ||
ಲೋಲಾವಯವೋದಾರಾಂಗನೆಯರ್ |
ಕಾಲಾಪಗೆಯಾ ಕೂಲಂಬೊಲಿಹರ್ || ೮

ಕಲ್ಪನಪ್ರತಿಭಾಸಮುದ್ರದಿ ಜಕ್ಕಣೋಜನಿಬೋಧಿತರ್ |
ಶಿಲ್ಪಮಂದರದಿಂ ಮಥಂಗೆಯೆ ವಿಷ್ಣುವರ್ಧನ ಚೋದಿತರ್ ||
ಕಲ್ಪವಲ್ಲರಿ ಲಕ್ಷ್ಮಿ ವಾರುಣಿ ಸೋಮರಂದದಿ ಪುಟ್ಟಿದರ್ |
ಬಲ್ಪಿನೊಲ್ಪಿನ ಭಾವಭಂಗಿಯ ಬಾಲೆಯರ್ ಸುಖಲೋಲೆಯರ್ || ೯

ಕೇಶವೇಶನ ರಾಣಿಯರ್ ಶುಕವಾಣಿಯರ್ ಫಣಿವೇಣಿಯರ್ |
ಹಾಸಸಂಜ್ಞೆಯ ಸೀರೆಯರ್ ಸುಶರೀರೆಯರ್ ಸ್ಮರವೀರೆಯರ್ ||
ಲಾಸಗಾಯನ ವಾದನಂಗಳ ಜಾಣೆಯರ್ ದೃಗುಬಾಣೆಯರ್ |
ರಾಸಲೀಲೆಯೊಳಾಡುವರ್ ಸಲೆ ಪಾಡುವರ್ ಕುಣಿದಾಡುವರ್ || ೧೦

ಅದಿತಿಯ ಸುತರಿಂಗಮೃತವನಚ್ಯುತ-|
ನೊದವಿಸಿ ಸರರಿಗಮದಸುಣಿಸಲ್ ||
ವಿಧಿಸಿದ ಮೋಹಿನಿಯಂಶಭವೆಯರೀ |
ಮದನಿಕೆಯರ್ ವಿಧುವದನಿಕೆಯರ್ || ೧೧

ಮಧುರಕಲಾಮಂಥಾನಂ ಮಾನುಷ |
ಹೃದಯರಸಾಬ್ಧಿಯಿನೊಗೆಯಿಸಿಹಾ ||
ಸುಧೆಯ ನಿರಂತರ ಶೀಕರ ಕಣವೀ |
ಮದನಿಕೆಯರ್ ಶುಭಸದನಿಕೆಯರ್ || ೧೨

ಹೃದಯದ ಭಾಷಿಕೆ ಸಂಪೂರ್ಣಂಗೊಳೆ |
ಪದಗಾನಾಭಿನಯತ್ರಯಮುಂ ||
ಹದದಿಂದೊಂದಿರವೇಳ್ಕುಮೆನುವರೀ |
ಮದನಿಕೆಯರ್ ರಸಭಣನಿಕೆಯರ್ || ೧೩

ಎದೆಗುದಿ ಲೋಕದ ಮಧ್ಯದೊಳೊಂದೆಡೆ |
ಪದುಳದ ಶಾಂತಿಯ ಪಸರಿಸುವಾ ||
ವಿಧುಮಂಡಲಸಾರದ ಕಲಶಗಳೀ |
ಮದನಿಕೆಯರ್ ಸ್ಮರಗುಣನಿಕೆಯರ್ || ೧೪

ಚದುರೆಯರೊಲವಿನ ಮೋಹದ ಬಲೆಗಳು |
ಸದಮಲವಸ್ತುವಿಲಾಸಗಳು ||
ವಿಧಿತಂತ್ರಗಳೊಳಗುಟ್ಟಸುಲಿವರೀ |
ಮದನಿಕೆಯರ್ ಹಿತಕಥನಿಕೆಯರ್ || ೧೫

ಕದಲದ ನೀರನ ಮೇಗಡೆ ಕಡಲೊಳು |
ಚೆದರಿಹ ತೆರೆಗಳ ಲೀಲೆವೊಲು ||
ಚಿದಬುಧಿಯಲೆ ತಾಮೆಂದುಸಿರುವರೀ |
ಮದನಿಕೆಯರ್ ಮಧುಕರಣಿಕೆಯರ್ || ೧೬

ಪರವಸ್ತು ವಜ್ರದೊಂದು ।
ಸ್ಫುರಣಂ ಸೌಂದರ್ಯಮದರ ಕರಗಳ್ ನಾಂಗಳ್ ॥
ಅರಿತದನು ಸುಖಿಸಿರೆನ್ನುತೆ ।
ಧರೆಗೊರೆಯುವವೋಲು ಮೆರೆವರೀ ಮದನಿಕೆಯರ್ ॥ ೧೭

ರೂಪಂ ಧ್ವನಿ, ದನಿ ರಾಗಾ ।
ಲಾಪಂ, ರಾಗೋಕ್ತಿ ಯಾ ಸುದೃಕ್ ಸಲ್ಲಾಪಂ ॥
ದೀಪಿಪುದು ಮನವನಾ ರಸ- ।
ದಾಪಗೆಯಾತ್ಮೋಪವನವ ಸೊಂಪಾಗಿಸುಗುಂ ॥ ೧೮

ಲಕ್ಷಣ ನಿರ್ದೇಶಗಳಿಂ ।
ಸೂಕ್ಷ್ಮದ ತರ್ಕಾನುಮಾನ ಜಿಜ್ಞಾಸೆಗಳಿಂ ॥
ಪ್ರೇಕ್ಷೆಗೆ ಸಿಲುಕದ ತತ್ತ್ವಂ ।
ಸಾಕ್ಷಾತ್ತಲೆ ಹೃದಯದೊಂದು ಚಣದನುಭವದಿಂ ॥ ೧೯

ಕ್ಷಣಿಕವನಕ್ಷಯ ಪದಕಂ ।
ಕಣದನುಭವಮಂ ಪರಾತ್ಪರಾಮಿತ ನಿಧಿಗಂ ॥
ಅಣು ಜೀವಿತಮಂ ವಿಶ್ವಕ ।
ಮನುಬಂಧಿಪ ಚಿತ್ರಸೂತ್ರಣಂ ಸೌಂದರ್ಯಂ ॥ ೨೦

ಅಂಗಾಂಗ ತಾರಂಗಮೆ ರಂಗನರ್ತನಂ ।
ಸಂಗೀತಕಂ ನಾದತರಂಗನರ್ತನಂ ॥
ಭಂಗಾಯಿತಸ್ವಾಂತಮೆ ಕಾವ್ಯನರ್ತನಂ ।
ಶೃಂಗಾವಟಭ್ರಾಮಮೆ ಜೀವನರ್ತನಂ ೨೧

ತರಂಗಿತಂ ಭೂತಲಮದ್ರಿಗರ್ತದಿಂ ।
ತರಂಗಿತಂ ಸಾಗರಮೂರ್ಮಿಮಾಲೆಯಿಂ ॥
ತರಂಗಿತಂ ಪುಷ್ಕರಮಿಂದುಸೂರ್ಯರಿಂ ।
ತರಂಗನೃತ್ಯಂ ಜಗದೆಲ್ಲ ಚೇತನಂ ॥ ೨೨

ನರಾಂಗನಾಭಾವಸುಖಸ್ವರೂಪೆಯರ್ |
ವಿರಾಡ್ರಸಾವೇಶಿತ ಸತ್ತ್ವಶೀಲೆಯರ್ ||
ಸರಾಗಗೀತಾಂಗಿಕ ಚೇಷ್ಟಿತಂಗಳಿಂ |
ತರಂಗ ಸೌಂದರ್ಯವನಿಲ್ಲಿ ತೋರುವರ್ || ೨೩

ರಾಮಣೀಯಕ ಸತ್ತ್ವಸಾಗರವೀಚಿಯಂದದ ರಾಮೆಯರ್ |
ಭೂಮಿಯೂಷ್ಮಕೆ ತಂಪನೆರೆಯುವ ಮಂದಹಾಸನಿಕಾಮೆಯರ್ ||
ಪ್ರೇಮಸೇಕವ ಸೂಸುವರ್ ಹೃದಯಾಮಯಂಗಳ ನೀಗುವರ್ |
ಕಾಮಕಾರಕಪೂರಕ ಪ್ರಭುಧಾಮಶೃಂಗ ಲಲಾಮೆಯರ್ || ೨೪

ಮೂಕಭಾಷೆಯೊ ನಾಕಭಾಷೆಯೊ ಕಣ್ಗಳಿಂದೆದೆವೊಕ್ಕು ತಾಂ |
ಸೌಕುಮಾರ್ಯದಿನತ್ತಣಿಂ ಪ್ರತಿಭಾಷಿತಂಗಳನೀಳಿಕುಂ ||
ಟೀಕನಕ್ರಮವಾ ಪ್ರಸಂಗಕೆ ಹಾರ್ದಿಕಾನುಭವಂಗಳಿಂ |
ಸ್ವೀಕರಿಕ್ಕದರರ್ಥಮಂ ಸಿರಿಕೇಶವಂ ರಸವೈಭವಂ || ೨೫

ಕಪ್ಪೆ ಚೆನ್ನಿಗರಾಯಸ್ವಾಮಿ

# ೧. ಶ್ರೀ ಚೆನ್ನಕೇಶವ

ರಾಗ—ಆರಭಿ] [ತಾಳ—ಆದಿ

ಶ್ರೀ-ಚೆನ್ನಕೇಶವಾ - ಶೃಂಗಾರ ಭಾವ || ಪ.

ಸೌಮ್ಯನಾಯಕೀ ಸ್ನೇಹಮಹೋತ್ಸವ |
ಸೌಂದರ್ಯಾರ್ಣವ - ಕರುಣಿಸು ದೇವಾ || ಅ. ಪ.

ದೇವಾ - ದೇವಾಸುರನರ ಹೃದ್ಭಾವಾ |
ಭಾವಾತೀತ ಪ್ರಭಾವಾ - ಸುಖರಾವಾ ||
ಜೀವಸಂಘ ಸಂಮೋಹನ ವೈಭವ |
ಲಾವಣ್ಯಾಮೃತ ಘನ ಸ್ವಭಾವಾ || ೧

ಈಶಾ - ವಿಶ್ವಾದ್ಭುತ ಚಿತ್ರ ವಿಲಾಸಾ |
ಲಾಸೋಜ್ಜ್ವಲರೂಪ ವಿಕಾಸಾ - ಚಿದ್ಭಾಸಾ ||
ಪೋಷಿಸಿ ಮಧುರಾವೇಶಂಗಳ ಸಂ-|
ತೋಷಿಪ ರಸಿಕಾಗ್ರೇಸರ ವೇಷಾ || ೨

ಸ್ವಾಮೀ - ಬ್ರಹ್ಮಾಂಡಾವರ್ತನ ನೇಮೀ |
ಸಂಸಾರ ತಾಪ ಶಮ ಭೂಮೀ - ಸುಪ್ರೇಮೀ ||
ರಾಮಣೀಯತಾ-ಸಾಮ್ರಾಜ್ಯಾಧಿಪ |
ಕಾಮರೂಪ ಸರ್ವಾಂತರ್ಯಾಮೀ || ೩

# ೨. ತತ್ತ್ವಸೌಂದರ್ಯ

ರಾಗ—ಶಂಕರಾಭರಣ] [ತಾಳ—ಮಿಶ್ರಚಾಪು

ಭುವನ ಜೀವ ವಿಲಾಸಂ - ಕೇಶವ ವಾಸಂ |
ನವರಸ ಪರಿವೇಶಂ - ಈ ದೇಶಂ || ಪ.

ಭುವನ ವಿಸ್ತರ ನಿತ್ಯ ಸಂಸಾರ ಪಾದಪ |
ದ್ರವ ನಿಷ್ಯಂದನ ಮೂಲ ಕಂದ ವಿಕಾಸಂ || ಅ. ಪ.

ಸೌಮ್ಯನಾಯಕಿ ಮಾಯೆ - ಕಾವ್ಯಭಾವದ ನೂರು-|
ರಮ್ಯಾಂಗನೆಯರಂತೆ - ಸುಳಿದಾಡಿ ಪಾಡೆ ||
ಸೌಮ್ಯಕೇಶವ ಪರ - ಬ್ರಹ್ಮನಾ ಕೇಳಿಯ |
ಸಂಮೋದದಿಂದೆ ಸಂ-ಭ್ರಮಿಪ ನಾಟಕವಿದು || ೧

ಕ್ಷೀರಾಬ್ಧಿಯಂತೆ ಶ್ರೀ - ಸುಧೆ ಶಶಿ ಕೌಸ್ತುಭ |
ಐರಾವತಾದಿಗ-ಳುದಿಸಿ ಬಂದವೊಲು ||
ಕಲ್ಪನಾಂಬುಧಿಯ ಮಂ-ಥನದಿಂದೆ ಬಂದರೀ |
ಶಿಲ್ಪಕನ್ನೆಯರು ಕಂದರ್ಪ ಬಿನ್ನಣಿಯರು || ೨

ತನು ಬೇರೆಯೆಂಬರು - ಮನ ಬೇರೆಯೆಂಬರು |
ತನುಮನಗಳಿನಾತ್ಮ ಬೇರೆಯೆನ್ನುವರು ||
ತನುಮನಸಾತ್ಮಗಳ - ನ್ಯೋನ್ಯಯುಕ್ತಿಯ-|
ನನುಭವಿಸುವ ತಾಣ ಚೆನ್ನಿಗನಾಸ್ಥಾನ || ೩

ರಾಗವೆ ಲೇಸೋ ವಿ-ರಾಗ ತಾಪವೆ ಲೇಸೋ |
ರಾಗ ವಿರಾಗ ಸಂಯೋಗವೆ ಲೇಸೋ ||
ಭೋಗಭಂಗಿಯೊಳಾತ್ಮ-ತ್ಯಾಗವ ಗೈದಿಹ |
ರಾಗಿಣಿಯರ ಜೀವ-ಯಾಗ ಮಂಟಪವಿದು || ೪

ಸತ್ಯಚಿದಾನಂದ-ಸಾಗರವೀಚಿಯ |
ನೃತ್ಯವಿನೋದದ - ಪ್ರತ್ಯಕ್ಷಚಿತ್ರಂ ||
ತತ್ತ್ವಸೌಂದರ್ಯಪ್ರ-ಚಾರಿ ಜಕಣಾಚಾರಿ |
ಭಕ್ತರೊಳ್ ಜ್ಞಾನೋಜ - ವಿಷ್ಣುವರ್ಧನರಾಜ || ೫

## ೩. ಧನ್ಯ ಮೂರ್ಧನ್ಯ

ರಾಗ—ಗೌಳಿಪಂತು] [ತಾಳ—ಮಿಶ್ರಚಾಪು

ಧನ್ಯ ಮೂರ್ಧನ್ಯ - ದೇವ ಶರಣ್ಯ || ಪ.

ಚೆನ್ನಕೇಶವರಾಯ — ರಸಿಕಾಗ್ರಗಣ್ಯ || ಅ. ಪ.

ಕನ್ನೆಯರಿವರೋ—ಲಾವಣ್ಯಮೂರ್ತಿಯೆ ನಿನ್ನ |
ಬೇಡಿ ಕಾದಿಹರೋ |
ಸನ್ನಿಧಿಯಲಿ-ನಲಿದಾಡಿ
ಸೊಬಗ ಸೂಸುವರೋ ||
ಮನ್ನೆಯರೆಡರ ಸೈ-ಸದ ಪುಣ್ಯಪುರುಷನೆ |
ಸನ್ನೆಯನರಿತು ಪ್ರ-ಸನ್ನಿಸೊ ಪರಿಪೂರ್ಣ || ೧

ಹೃದಯಗಹ್ವರದ ಮೂಲೆಗಳ ಮೌನದೊಳಿಲ್ಲೋ |
ನಿದ್ರಿಪ ಭಾವಂಗಳಾ |
ವದನೋಕ್ತಿಗೆಟುಕದ ಮೂಕಮಾನಸ ಮೇಘ-|
ವಲನ ವಿಲಾಸಗಳಾ ||
ಗಾನಾಭಿನಯ ವಾದ್ಯಧ್ಯಾನದೆ ಚಿತ್ರಿಸಿ |
ಮ್ಲಾನ ಜೀವವ ಸಂ - ತ್ರಾಣಿಪರಿವರಯ್ಯ || ೨

ಮುಕುರ ಮುಗ್ಧೆ

ಮಂದಸ್ಮಿತ ಪ್ರಹಿತ ಚಾಂದ್ರಮ ವಕ್ತ್ರರಾಗಂ |
ಸೌಂದರ್ಯ ಕಲ್ಪತರು ವೇಲ್ಲಿತ ಬಂಧುರಾಂಗಂ ||
ಕಂದರ್ಪದರ್ಪ ಪರಿಜೃಂಭಕ ದರ್ಪಣಾಸ್ತ್ರಂ |
ಸಂದಿರ್ಪ ಮೋಹಿನಿಯದೇಂ ಸ್ವೀಕೃತಾತ್ಮಮೋಹಂ ||

# ೪. ಮುಕುರ ಮುಗ್ಧೆ

ರಾಗ—ಕೇದಾರ] [ತಾಳ—ಮಿಶ್ರಚಾಪು

ಮುಗುದೆಯಾದೆಯ ಕನ್ನೆ — ಮುಕುರದ ಚೆನ್ನೆ || ಪ.

ನಿನ್ನ ಮೈ ಸೊಬಗಿಗೆ — ನೀನೇ ಮನವ ಸೋತು || ಅ. ಪ.

ಹರಹಿದ ಪೆರೆಯಂತೆ ಮೆರೆವ ಲಲಾಟದಿ |
ಧರಿಸೆ ಕುಂಕುಮವ ನೀಂ ಬೆರಲೆತ್ತಿದಂತೆ ||
ಸ್ಥಿರದಿ ನಿಂದಿಹುದದು ಬೆರಗಿನ ಸೆರೆಯಲಿ |
ಪರವಶೆಯಾದೆ ನೀಂ ಪರವಶಗೆಯ್ವಳೆ || ೧

ಬೆರಗಿದು ಸಾಜವೆ — ಬರಿಯ ಬಿಬ್ಬೋಕವೆ |
ತರಳಲೋಚನೆಯಿದು — ಸ್ಮರತಂತ್ರನಯವೆ ||
ಮೆರೆದು ಮೈಮರೆತಂತೆ — ಪರಿಕಿಸುತಿನಿಯನ |
ಗರುವವ ಮುರಿವೆಯ — ಗರುವವ ನಟಿಸುತೆ || ೨

ಕನ್ನಡಿಯಲಿ ಕಾಣ್ಬುದೇಂ — ಮನ್ನೆಯೆ ತೊಟ್ಟ |
ಚಿನ್ನರನ್ನಗಳಂದವೇಂ ||
ಉನ್ನತದಾನನವೇಂ - ತನ್ವಿಯೆ ತನು- |
ವಿನ್ಯಾಸ ತ್ರೈಭಂಗಿಯೇಂ ||
ಅನ್ಯಾಯವಾದೀತು ನೀನಿಂತು ನಿಂದಿರೆ |
ಧನ್ಯೆಯಪ್ಪೊಡೆ ನೋಡು ಚೆನ್ನಕೇಶವನೆಲ್ಲಿ || ೩

ಶುಕ ಭಾಷಿಣಿ

ಶುಕಸಂಭಾಷಿಣಿ ಹಾಸಿನಿ |
ಮುಕುಲಿತ ನಯನಾಭಿರಾಮೆ ಸಂಕೇತಕಮಂ ||
ಸಕರುಣಮನೇನೊ ದೂತಿಗೆ |
ಪ್ರಕಟಂಬಡಿಸುತ್ತಲಿರ್ಪ ಳಿನಿಯಂಗುಸಿರಲ್ ||

# ೫. ಶುಕ ಭಾಷಿಣಿ

ರಾಗ–ಬೇಹಾಗ್] [ತಾಳ–ಏಕ

ಏನೇ ಶುಕ ಭಾಷಿಣೀ—ಇದು |
ಏನೇ ಶುಕ ಭಾಷಿಣೀ — ಸುದ್ದಿ- |
ಯೇನೇ ಮನೋಲ್ಲಾಸಿನೀ || ಪ.

ಆರಾರ ತೆಗಳುತಲಾರಾರ ಪೊಗಳುತ |
ಕೀರಾಲಿಗುಸಿರುವೆ ಮಾರಾಂತರಂಗವ || ಅ. ಪ.

ಚಿಂತಾವಿಚಾರಂಗಳೇಂ — ನಿನ್ನ |
ಸಂತೋಷ ಗೋಪ್ಯಂಗಳೇಂ ||
ಕಾಂತಂಗದೇನೇ — ಕಾಂತಂಗಳೊಸಗೆಯ |
ಕಾಂತೇ ನೀಂ ಕಳುಹಿ ಅ-ಶಾಂತನನಾಗಿಪೆ || ೧

ವನ್ಯಪ್ರವಾಸಿಯೊಳೇಂ — ನಿನ್ನ |
ಬಿನ್ನಾಣ ಬೂತಾಟಗಳ್ ||
ಇನ್ನಾರುಮಿಲ್ಲವೆ ಚೆನ್ನ ಕೇಶವನಿಗೆ |
ನಿನ್ನಂದ ಚಂದವ ಬಣ್ಣಿಪ್ಪ ಚತುರರು || ೨

ವಾಸಂತೀ

ರಾಕೇಂದುಮುಖಿಯ ವಿರಹ|
ವ್ಯಾಕುಲತೆಯ ಮರಸಿ ಕಳೆವ ಸೇವದಿಂದವಳಂ ||
ಓಕುಳಿಯನಾಡೆನುತ್ತು-|
ದ್ರೇಕಿಸುತಿಹರವಳ ವೆತೆಯನೀ ಸ್ಮರಸಖಿಯರ್ ||

# ೬. ವಾಸಂತೀ

ರಾಗ—ವಸಂತ]　　　　　　　　　　　　[ತಾಳ—ಆದಿ

ವಾಸಂತಕೇಳೀರತೇ — ಲಲಿತೇ |
ರಾಸಿಕ್ಯ ದೀಕ್ಷಾವ್ರತೇ — ಓ ವನಿತೇ ||　　　　ಪ.

ಮಾಣಿಕ್ಯರಾಜತ - ಸೌವರ್ಣರಂಜಿತ |
ವೇಣುಪ್ರಣಾಳಿಯ - ಶೋಣಾಂಬುಧಾರೆಯು ||　　　　ಅ. ಪ.

ಶ್ರೀಗಂಧಕಸ್ತೂರಿಕಾ - ಕೇಸರ |
ಪುನ್ನಾಗ ಸೌಗಂಧಿಕಾ ||
ರಾಗಾಂಬು ಕುಂಕುಮ — ಸೇಕೋಪಯಂತ್ರದೆ |
ಯಾಗಾವಭೃಥವೇಂ ಚೆನ್ನಾಕೇಶವನಿಗೆ ||　　　　೧

ಕೀರವಾಣಿ

ಕೀರೋಕ್ತಿಯೊಳಾವುದನೋ |
ಸ್ವಾರಸ್ಯವ ಕಾಣುತಲೀ ||
ಚಾರುಪ್ರಭೆ ವಲ್ಲಭಸಂ |
ಸಾರಿರ್ಪಳ್ ಮಾನಸದೊಳ್ ||

# ೭. ಕೀರವಾಣಿ

ರಾಗ—ಕೀರವಾಣಿ] [ತಾಳ—ರೂಪಕ

ದೂರನದೇಂ ತಂದಿಹಳೀ |
ಕೀರವಾಣಿ ತಾಂ ನಿನಗೆ || ಪ.

ಮಾರನದೇಂ ರಾಯಸವೇ |
ಶಾರಿಕೆಯಾ ಕಥೆಯದೇನೆ || ಅ. ಪ.

ವರನು ಬರುವನೆಂದು ನೆನೆದು |
ಪರಿಮಳಗಳ ತನುವಿಗೆರೆದು |
ಕರದಿ ವೀಳೆಯುವನು ಪಿಡಿದು |
ನಿಂದಿಹೆಯೇನವನೊಳೊಲಿದು || ೧

ಬರುವನೊ ತಾಂ ಬರಲೊಲ್ಲನೊ |
ಕರೆಯೊಸಗೆಗೆ ಕಾದಿರುವನೊ |
ತ್ವರಿತದಿ ಶುಕಿ ಕರೆಯುಳೀಕೆ |
ದೊರೆಯ ಚೆನ್ನಿಗೇಶನ ಸಖಿ || ೨

ಕಪಿ ಕುಪಿತೆ

ಕಾಪಿಕ ವ್ಯಾಜದಿಂದಂತ- |
ಸ್ತಾಪಮಂ ತೋರುತಿರ್ಪಳೇಂ ||
ಕೋಪಗೊಂಡೀಕೆಗೇನಾಯ್ತು |
ರೂಪಮಿನ್ನುಂ ವಿರಾಜಿಕುಂ ||

## ೮. ಕಪಿ ಕುಪಿತೆ

ರಾಗ—ಕಾಪಿ] [ತಾಳ—ಆದಿ

ಓ ಮುಗ್ಧಕೋಪನೇ - ಪ್ರೇಮಸ್ಮಿತಾಸನೇ |
ಕೈಮಾಳ್ಪುದೇಕೆ ನೀ - ನೀ ಮಂಗಮಾಣಿಯೊಳ್ || ಪ.

ಮಾನಾಂಬರಾಂತವ — ವಾನರನೆಳೆದೊಡೇಂ |
ಹಾನಿಯದೇನಾಯಿತೆ — ಮಾನಾಭಿಮಾನಿನಿ ||
ಏಣಾಕ್ಷಿ ನಿನ್ನಯ — ಪೀನಾಂಗವಿಭ್ರಮ-|
ಧೂನನಕೀ ಕಪಿ — ಕಾರಣನಾದನೇ || ೧

ಸುಂದರ ಗಾತ್ರದಾ — ಸಿಂಧೂರ್ಮಿಮಾಲೆಯಾ |
ಬಂಧುರ ಲೀಲೆಯಾ — ಸಂದವನಾಗಿಪಾ ||
ಕಂದರ್ಪ ದೌತ್ಯದ — ಸಂಧಾನ ತಂತ್ರವ |
ಮನ್ನಿಸನೇನೆ ಆ — ಚೆನ್ನಕೇಶವ ಜಾಣೆ || ೨

ಲೀಲಾ ಕಿರಾತಿ

ಶಾರಿಯುಗ್ಮಂ |
ಮಾರತಿಗ್ಮಂ ||
ವೀರೆಯಸ್ತ್ರಂ |
ಚಾರುಗಾತ್ರಂ ||



VIJAYA EVENING COLLEGE LIBRARY
BANGALORE-4. 1934

# ೯. ಲೀಲಾ ಕಿರಾತಿ

ರಾಗ—ಕೇದಾರಗೌಳ] [ತಾಳ—ಮಿಶ್ರಚಾಪು

ಕೋಪವಿದೇನೆಲೆ - ಕೋಮಲ ತನುಲೀಲೆ |
ಚಾಪಹಸ್ತವಿದೇನೆಲೇ - ಓ ಬಾಲೆ || ಪ.

ಆ ಪಕ್ಷಿಯುಗಳದ - ಚಾಪಲ್ಯ ವೀಕ್ಷಿಯಿಂ |
ತಾಪವಾಯಿತೆ ನಿನ್ನ - ಮನಕೆ ಸುಶೀಲೇ || ಅ. ಪ.

ಧನುವ ನೀಂ ತೊಟ್ಟೊಡೆ - ತನುರಾಗವಿಳಿವುದೆ |
ಮನಸಿಜಾಶ್ರಯಗರ್ವಿತೇ — ಓ ದಯಿತೇ ||
ಇನಿಯರಾಟವ ಕಂಡು - ಕಿನಿಸುಗೊಳ್ಳುವರೇನೆ |
ಕನಿಕರಿಸದೆ ನೀಂ - ಕರುಬುವುದೇನೇ || ೧

ಶಾರೀರಮೋಹವ - ಬೀರುವೀ ವೀರಕೆ |
ಶಾರಿಕಾಯುಗ ಬರಿ - ಕಾರಣವಾಯ್ತೇ ||
ಕೈರಾತವೇಷಿ ನೀಂ - ಪೋರಾಡುವೊಡೆ ಸಾರು |
ಧೀರನಿರ್ಪನು ನಮ್ಮ - ಚೆನ್ನಕೇಶವ ದೊರೆ || ೨

ಮಂಜುಕಬರೀ

ಕಬರೀಭರಮಂ ಶುಭಪುಷ್ಪಗಳಿಂ ||
ಸೊಬಗಾಗಿಸುವಳ್ ವಿಭವಾಢ್ಯೆಯಿವಳ್ ||

---

ಕೇಶವೇಶಲಸದ್ರೂಪಂ ಕೇಶವೇಶ ಪ್ರಿಯಾಶಯಂ |
ಕೇಶವೇಶಲಸದ್ರೂಪಂ ಕೇಶವೇಶ ಪ್ರಿಯಾಶಯಂ ||

# ೧೦. ಮಂಜುಕಬರೀ

ರಾಗ—ನಾಟಕುರಂಜಿ] [ತಾಳ—ಮಿಶ್ರಚಾಪು

ಸೊಗಸಾಯಿತೆ ಕಬರೀ — ಸ್ಮಿತಾಧರೀ || ಪ.

ಸೊಗಸಾಯಿತೆ ರಾಜ - ಮುಕುಟದವೊಲು ಬಲು-|
ಬಗೆಯ ಕಾಂತಿಯ ಸುಮಸುರಭಿಗಳೊಪ್ಪಿರೆ || ಅ. ಪ.

ಕಾಶ್ಮೀರರಾಗರು ತೈಲ - ವಾಸನೆಗಳ ಕಟ್ಟಿ |
ಕೇಶರಾಶಿಯ ನಾಗ - ಪಾಶವ ಸುತ್ತಿ ||
ದೋಷವಿಲ್ಲದ ಚೆನ್ನ-ಕೇಶವ ಹೃದಯವ |
ಕೈಸೆರೆ ಪಿಡಿವೆಯು - ಮೋಸದ ಹೆರಳಿಂದೆ || ೧

ಕಾಳಿರುಳಿನ ಕಪ್ಪು - ಕುರುಳು ಗುಂಗುರಿನೊಪ್ಪು |
ನೀಳಾಗಿ ಹೆಣಿಲಿಟ್ಟು - ಸುತ್ತಿದ ಕೊಪ್ಪು ||
ನೋಳ್ಪರ ಕಣ್ಮನ - ಕಹುದು ಮೋಹದ ಹೆಪ್ಪು |
ಮೌಳಿಯಿಂ ಕೇಶವ - ನಡಿಗಳ ನೀನಪ್ಪು || ೨

ಮುರಜಾವೋದೆ

ಝಣಜ್ಝಣತ್ಕ ಕಿಂಕಿಣೀ |
ಢಣಡ್ಢಣತ್ಕ ಢಕ್ಕಿಣೀ ||
ಸ್ವನೋತ್ತರಂಗಿತಾಂಗಿನೀ |
ಮೃಣಾಲ ಲೋಲ ನರ್ತಿನೀ ||

# ೧೧. ಮುರಜಾಮೋದ

ರಾಗ–ಅಠಾಣ] [ತಾಳ–ಮಿಶ್ರಚಾಪು

ಏನೀ ಮಹಾನಂದವೇ - ಓ ಭಾಮಿನೀ |
ಏನೀ ಸಂಭ್ರಮದಂದವೇ - ಬಲ್ಚಂದವೇ || ಪ.

ಏನೀ ನೃತ್ಯಾಮೋದ - ಏನೀ ಮೌರಜನಾದ |
ಏನೀ ಜೀವೋನ್ಮಾದ - ವೇನೀ ವಿನೋದ || ಅ. ಪ.

ಡಕ್ಕೆಯ ಶಿರಕೆತ್ತಿ - ತಾಳಗೋಲಿಂ ತಟ್ಟಿ |
ತಕ್ಕಿಟ ಧಿಮಿಕಿಟ - ತಕಝುಣುರೆನಿಸಿ ||
ಕುಕ್ಕುತೆ ಚರಣವ - ಕುಲುಕುತೆ ಕಾಯವ |
ಸೊಕ್ಕಿದ ಕುಣಿತವ - ಕುಣಿವೆ ನೀನೆಲೆ ಬಾಲೆ || ೧

ಆರೋ ನಿನ್ನಯ ಹೃದಾ - ಗಾರದಿ ನರ್ತಿಸಿ |
ಮಾರಶೂರತೆಯ ಪ್ರ - ಚಾರಿಸುತಿರ್ಪನ್ ||
ಸ್ಮೇರವದನ ನಮ್ಮ - ಚೆನ್ನಕೇಶವರಾಯ- |
ನೋರೆಗಣ್ಣಿಂ ಸನ್ನೆ - ತೋರುತಲಿಹನೇನೆ || ೨



ಕಪಟಭೈರವಿ

ಭೈರವ ಶೂಲ ಕಪಾಲಗಳಿಂದೇಂ |
ದಾರುಣದೀಕ್ಷೆಯ ವೇಷಗಳಿಂದೇಂ ||
ನೀರೆಯ ಬೆಡಗನು ಮುಚ್ಚಿಡಲಹುದೇಂ |
ಧೀರರನೀ ಪರಿ ಬೆಚ್ಚಿಸಲಹುದೇಂ ||

# ೧೨. ಕಪಟಭೈರವಿ

ರಾಗ—ಭೈರವಿ] [ತಾಳ—ಮಿಶ್ರಚಾಪು

ಭೈರವ ವೇಷದಿಂ - ದಾರ ನೀನಂಜಿಪೆ |
ಮಾರತಂತ್ರ ಕಲಾಪೇ - ಸುರೂಪೇ || ಪ.

ಶೂಲರುಂಡವದೇಂ ಕ - ಪಾಲಪಾತ್ರೆಯದೇನೆ |
ಕಾಲೆಡೆ ಮೊಳಗುವ - ತಾಳ ಮದ್ದಲೆಯೇನೆ || ಅ. ಪ.

ಆರರಿಯರೆ ನಿನ್ನ - ವೈರಾಗ್ಯ ಕಪಟವ |
ಮಾರಭಿಕ್ಷೆಯನಿಂತು - ಕೋರುವುದೇನೆ ||
ತಾರಳ್ಯ ನಯನದ - ಸ್ಮೇರಕಪೋಲದ |
ತಾರುಣ್ಯವನದೆಂತು - ಮರೆಮಾಚಲಪ್ಪುದೆ || ೧

ಹೆದರಿಪುದಾರನೆ - ಮದಿರಲೋಚನೆ ಪೇಳು |
ಮಧುರ ರೂಪವ ಮತ್ತೆ - ತಳೆವುದೆ ಮೇಲು ||
ಚದುರ ಮಾಯಾವಿಯೀ - ಚೆನ್ನಕೇಶವ ನಮ್ಮ |
ಹೃದಯಂಗಳೊಳವೊಕ್ಕು - ಗೆಲುವನೆಲ್ಲರನಮ್ಮ || ೨

ತಾಂಡವೇಶ್ವರಿ

ಇವಳಾರ್ ತಾಂಡವ ರಭಸಕೆ |
ಡವಣೆಯ ಹವಣಾಗಿಸುತ್ತೆ ತನ್ನೀ ಸೊಬಗಂ ||
ಅವಲೋಕಿಪರಾರೆನ್ನುತೆ |
ಭುವನವ ಕೇಳುವವೊಳಿರ್ಪಳಿವಳೇಂ ಕಲಿಯೋ ||

# ೧೩. ತಾಂಡವೇಶ್ವರಿ

ರಾಗ—ಮಧ್ಯಮಾವತಿ] [ತಾಳ—ಏಕ

ಡಂಗುರ ಪೊಯ್ಯುವದದೇನೆ ಜನ-|
ಜಂಗುಳಿಗೆಲ್ಲ ನೀಂ ಸಾರ್ವುದದೇನೆ || ಪ.

ಅಂಗಜವಾರ್ತೆಯದೇನೆ - ಎಲೆ |
ಶೃಂಗಾರ ಶೀಲೆ ನಿನ್ನಯ ಸುದ್ದಿಯೇನೆ || ಅ. ಪ

ಡವಣೆಯ ತಟ್ಟುತ್ತಲಿರುವೆ - ಗೆಜ್ಜೆ-|
ಹವಣಿಂದೆ ಮೆಯ್ಯ ನೀಂ ಕುಲುಕಿಸಿ ಮೆರೆವೆ ||
ಸವಿನಗುವನು ನಗುತಿರುವೆ - ಓ |
ಯುವತೀ ನಿನ್ನಿಂಚರದೊಳಗೇನಿಟ್ಟಿರುವೆ || ೧

ತಧ್ಧಿಮಿ ತಕಧಿಮಿ ಝುಣುತಾ - ಥೈಯ |
ತತ್ತೊಂ ತಧ್ಧಿಮ್ಮಿತ ತಕಝುಣು ರಣಿತಾ ||
ಮದ್ದಲೆ ತಾಳದ ಕುಣಿತಾ - ಅದು |
ನಿದ್ರಿಪ ಚೆನ್ನಕೇಶವಗೆ ಜಾಗರಿತಾ || ೨

ಮುರಳೀಧರೆ

ಗೋಪಿಯರೊಲಿದರ್ಚಿಸಿದಾ |
ರೂಪವ ತಾಂ ವರಿಸಿ ಧರಿಸಿ ವೇಣುಸ್ವರಿತಾ-|
ಲಾಪನದಿಂದರಸುವಳೇಂ |
ಚಾಪಲೆ ಸಾರೂಪ್ಯಸೌಖ್ಯಮಂ ಯದುಪತಿಯೊಳ್ ||

# ೧೪. ಮುರಳೀಧರ

ರಾಗ—ಯದುಕುಲಕಾಂಭೋಜಿ] [ತಾಳ—ಮಿಶ್ರಚಾಪು

ಯದುವಂಶತಿಲಕನ - ವೇಷವಿದೇನೇ |
ಮದಿರಾಕ್ಷಿ ಮುರಲೀ - ನಾದವಿದೇನೇ || ಪ.

ಮುರಲೀಗಾನವಿದೇನೆ - ತರಲಾಪಾಂಗವದೇನೆ |
ಸ್ಮರಸಂಭ್ರಮಾನಂದ - ಸ್ಮರಣೆಯಿದೇನೇ || ಅ. ಪ.

ಕೊಳಲನೂದುತೆ ನಮ್ಮ - ಮನದಿ ಪವ್ವಳಿಸಿದ್ದ |
ನಲವೊಲವೆಲ್ಲವ - ಕೆರಳಿಸಿ ಕುಣಿಸಿ ||
ಪುಲಕಾಂಕುರಗಳನಾ - ಗಿಸಿ ಮೈಯ್ಯ ಮರೆಯಿಸಿ |
ನಲಿವೀ ಗಾಯನವಾಯೆ - ಯೊಳಗುಟ್ಟದೇನೆ || ೧

ಆಶೆಗಳೆಷ್ಟೋ ನಿರಾಶೆಗಳಿನ್ನೆಷ್ಟೋ |
ರೋಷ ದುಃಖ ಪ್ರೇಮೋ - ತ್ಸಾಹಂಗಳೆಷ್ಟೋ ||
ಸಾಸಿರ ಸುಳಿಗಾಳಿ ಜೀಸಿ ನಮ್ಮೆದೆಯನು |
ಘಾಸಿಗೊಳಿಸೆ ಚೆನ್ನಕೇಶವನೊಲಿವನೆ || ೨

ಗಾನಜೀವನೆ

ಮಾನುಷ್ಯ ಹೃನ್ಮಧ್ಯದಿ ಬಂದಿಯಾಗಿಹಾ ।
ನಾನಾನುರಾಗಾನುಭವಂಗಳೋಳಿಯಂ ॥
ಗಾನಪ್ರವಾಹಂಗಳಿನೊಯ್ದು ಮುಕ್ತಿಯಂ ।
ಕಾಣಿಪ್ಪಳೀ ರಾಗಿಣಿ ರಾಗಯೋಗದಿಂ ॥

## ೧೫. ಗಾನಜೀವನೆ

ರಾಗ–ರೀತಿಗೌಳ] [ತಾಳ–ಮಿಶ್ರಚಾಪು

ಆವ ರಾಗವ ಪಾಡುವೇ - ಓ ಚೆಲುವೇ - ಎನ್ನೊಲವೇ |
ಎನ್ನೊಲವೇ ಬಾಳ್ಗೆಲವೇ - ನೀನಾವ ರಾಗವ ಪಾಡುವೇ || ಪ.

ಆವ ರಾಗವ ಪಾಡಿ - ಆವ ಮಾಟವ ಮಾಡಿ |
ಆವ ಜೀವವ ಕಾಡಿ - ನೀನಿಂತು ನಲಿಯುವೆ || ಅ. ಪ.

ಕಲಹಂಸಿ ಲಲಿತಸ್ವರೇ - ಮನೋಹರೆ |
ವಿಲಸಿತ ವಿವರಾಧರೇ - ಓ ಚದುರೇ ||
ಮನಸಿನ ಗುಹೆಯಲಿ - ಮಲಗಿರ್ಪ ದನಿಗಳ |
ಹೊನಲಾಗಿ ಹರಿಸಿ ಜಾ - ಲಿಸುವೆ ನಮ್ಮಸುಗಳ ||

ಮಧುರಗೀತಾಯುಧದೆ ನಮ್ಮಯ |
ಚದುರ ಚೆನ್ನಿಗ ಕೇಶವೇಶನ ||
ಹೃದಯರಾಜ್ಯವ ಸೂರೆಗೊಳ್ಳುವ |
ಮದನ ಬಲ ಪಟ್ಟಾಧಿಕಾರಿಣಿ || ೧

ಜಗನ್ಮೋಹಿನಿ

ದೈತೇಯರ ಮೋಹಿನಿ ಕಣ್ಪಿಡಿದಾ |
ಮಾತೇಸವರಲ್ಪಕೆ ಮೈಮರೆವರ್ ||
ಭೂತೇಶನ ನಿಃಸ್ಪೃಹೆಯಂ ಮುರಿದಾ |
ಚೈತನ್ಯ ವಿಲಾಸಿನಿಯಾಟವಿದೈ ||

## ೧೬. ಜಗನ್ಮೋಹಿನಿ

ರಾಗ—ಜಗನ್ಮೋಹಿನಿ] [ತಾಳ—ರೂಪಕ

ಸೋಲಿಸಿದೆಯೆ ಶಿವನ
ಹಾಲಾಹಲವೀಂಟಿದವನ || ಪ.

ಪೀಯೂಷದ ವಿತರಣೆಯೊಳ-|
ಗೊಯ್ಯಾರದೆ ದನುಜಕುಲಕೆ ||
ಮೆಯ್ಯ ಮರಸಿ ಸುರರ ಕಾಯ್ದು |
ದೈವ್ಯದಮರ ತನುವಿದೇನೆ || ಅ. ಪ.

ಮೂಲೋಕವ ಮಾಯಾಬ್ಧಿಯೊ-|
ಳೋಲಾಡಿಸಿ ಬೆಡಗಿನಿಂದೆ ||
ಶೂಲಿಯನುಂ ಧೃತಿಗೆಡಿಸಿದ |
ಲೀಲೆಯಿದೇಂ ಮುಗಿಯದಿಹುದೆ ||
ತ್ರಿಜಗನ್ಮೋಹಿನಿ ಮಾನಿನಿ |
ಅಜಸಂಸಾರಾಕಾರಿಣಿ ||
ವೃಜಿನ ಸುಕೃತ ಮೂಲಜನನಿ |
ವಿಜಯ ಕೇಶವೇಶ ಗೃಹಿಣಿ || ೧

ವೀಣಾಪಾಣಿ

ಮಾಣಿಕ್ಯರಾಗಾಂಚಿತದಂಗುಲೀಯದಿಂ |
ನೀನಾಗಿಪಾ ಪ್ರಕ್ವಣ ನಿಕ್ವಣ ಕ್ವಣ-||
ದ್ವೀಣಾರವ ಸ್ರೋತವ ಸೇರಿದಾತ್ಮ ತಾ-|
ನಾನಂದಪೂರ್ಣಾಬ್ಧಿಯೊಳೈಕ್ಯಮೊಂದುಗುಂ ||

# ೧೭. ವೀಣಾಪಾಣಿ

ರಾಗ—ಕಲ್ಯಾಣಿ] [ತಾಳ—ಆದಿ

ವೀಣಾಪಾಣೀ - ವಿಶ್ವಕಲ್ಯಾಣೀ |
ಗಾಯನ ನರ್ತನಾ - ನಂದಪ್ರದಾನೀ || ಪ.

ಮೌನದಾ ಗಾಯನ - ಕಾಣದಾ ನರ್ತನ |
ಧ್ಯಾನದ ಕಿವಿಕಣ್ - ಗಮೃತಾಸ್ವಾದನ || ಅ. ಪ.

ಯುಗ ಯುಗದಿಂದಲೀ - ಜಗಕೆ ನಿನ್ನೊಲವಿನ |
ಸೊಗವ ನೀಂ ಸೂಸುತೆ - ನಗುತೆ ನಿಂದಿಹೆಯೇ ||
ಮುಗುದನಾಗಿ ಸೋಲ್ವನೀ - ಸೊಗಸಿನ ಕೇಶವಂ |
ಮುಗಿಯದೀ ಸರಸವ - ಬಗೆವರದಾರೇ || ೧

ಕುಟಿಲ ಕುಂತಲೆ

ಇನಿಯನ ನೆನೆದಾರಿವಳ್ |
ಮಣಿಮುಕುರದಿ ನೋಡುವಳ್ ||
ಪಣೆಯಲಕವ ತಿದ್ದುವಳ್ |
ಮನವನೆ ಸೆರೆಗೊಳ್ಳುವಳ್ ||

# ೧೮. ಕುಟಿಲ ಕುಂತಲೆ

ರಾಗ—ಕಾಂಭೋಜಿ] [ತಾಳ—ರೂಪಕ

ಕುಟಿಲ ಕುಂತಲೆ - ಕುಮುದ ಕೋಮಲೆ |
ಚಟುಲ ಲೋಚನೇ - ಬಾಲೆ || ಪ.

ನಿಟಿಲದಲಕವೇನು ಸೊಗಸೆ |
ತಟಿದುದಾರೆ ಚಾರುಶೀಲೆ || ಅ. ಪ.

ಅಂಗನೆ ನಿನ್ನಯ - ಮುಂಗುರುಳೋಳಿಯು |
ಗುಂಗುರ ನಾರಿಗೆ - ಸಂಕಲೆಯಾಗಿಪೆ ||
ಕೊಂಗಿದ ತೋಳದೇ-ಸಂಗಜ ಚಾಪವೆ |
ಇಂಗಿತವರಿತ ಭು-ಜಂಗನೆ ಕೇಶವ ||

ರಸಿಕ ಶಬರಿ

ಮಾಕಂದ ಸಂಧಾನಿತ ಪಾಣಿ ಪಲ್ಲವಂ |
ಸಾಕೂತ ಭಾವಾನ್ವಿತ ದೇಹ ವಲ್ಗನಂ ||
ಲೋಕಪ್ರಜೋದ್ದೀಪಕಚಾರು ಯುಕ್ತಿಯೋ |
ಸಾಕೇತರಾಜಾರ್ಪಿತ ದೈವಭಕ್ತಿಯೋ ||

# ೧೯. ರಸಿಕ ಶಬರಿ

ರಾಗ—ಶುದ್ಧ ಸಾವೇರಿ] [ತಾಳ—ರೂಪಕ

ಅಭಿನವಾವತಾರಿಯಾದ |
ಶಬರಿಯೇನೆ ನೀನು ಭಾಮೆ ||
ಸೊಬಗನಿಲ್ಲಿ ಕಂಡು ನಿನ್ನ |
ವಿಭುವನರಸ ಬಂದೆಯೇನೆ || ಪ.

ಯಮಿತೆಯು ರಘುವರನು ತೊರೆದು |
ರಮಣರೂಪಿಯಾದನೆಂದು ||
ಶ್ರಮಣಿತೆಯನು ನೀನು ತೊರೆದು |
ಪ್ರಮದೆಯಾಗಿ ನಿಂದೆಯೇನೆ || ಅ. ಪ.

ಕುಸುಮ ಪಲ್ಲವಗಳ ಭರದೆ |
ಕುಸಿವ ಲತೆಯ ಕೆಲದಿ ನಿಂತು ||
ಮಿಸುನಿ ಮೆಯ್ಯಿನಂತು ಬಳುಕಿ |
ನಸು ನಗುವಿಂ ಮೆರೆದು ||
ರಸ ರಸಾಲಫಲವ ವರನಿ-|
ಗೊಸಗೆಯೀವಳಂತೆ ತೋರ್ಪೆ ||
ಯಶಸಿ ಕೇಶವನನೆ ರಾಮ-|
ರಸಿಕನೆಂದು ಬಗೆದೆಯೇನೆ || ೧

ವೀರಯೋಷಿತೆ

ನಾರೀತಸುವೋ |
ವೀರಾಂಗಣವೋ ||
ಸ್ಮೇರಾನನವೋ |
ಮಾರೇಂಗಸವೋ ||

# ೨೦. ವೀರಯೋಷಿತೆ

ರಾಗ—ಮಾಯಾಮಾಳವಗೌಳ] [ತಾಳ—ಮಿಶ್ರಚಾಪು

ಏನಿದು ರೋಷಾ — ವೀರಾವೇಶಾ || ಪ.

ಮಾನಿನಿ ನಿನ್ನಂಗ - ಭಾವಪ್ರಕಾಶಾ || ಅ. ಪ.

ಕ್ಲೇಶವೇನಾಯಿತೆ - ಯೋಷಾಮಣಿಯೆ ನಿನಗೆ |
ಹಾಸ್ಯವಾಡಿದನಾರೆ - ದೋಷವದೇನೆ ||
ಆಶೆಯ ತೋರಿ ನಿ - ರಾಶೆಯ ಗೆಯ್ದ ಆ |
ಕೇಶವನೊಳ್ ಮುನಿ - ದಾಕಾಶವಿರಿವೆಯ ||



ಪುಂ ವಿಡಂಬಿನಿ

ಗಡ್ಡ ಮೀಸೆಗಳೇನೆ ಗಂಡಸಣಕಿಪೆಯೇನೆ |
ಮದ್ದಳಿಗನನು ಪೋಲ್ವ ಬಾಗುನಿಲುವೇನೆ ||
ನಿರ್ದಯಂ ಚೆನ್ನನೆಂಬುದ್ವೇಗವನು ತೀರಿ- |
ಪುದ್ಯಮವಿದೇನೆ ಅದು ಬರಿವೆರ್ತ ಕಾಣೆ ||

## ೨೧. ಪುಂ ವಿಡಂಬಿನಿ

ರಾಗ—ಶಂಕರಾಭರಣ] [ತಾಳ—ತ್ರಿಶ್ರಏಕ

ಆರ ನಗಿಸುವೇ - ಮತ್ತಾರನಳಿಸುವೆ |
ಆರ ಕತದಿ ಪುಂ ವಿಡಂಬ-ಕಾರಿಯಾಗಿಹೆ || ಪ.

ತಾಳ ತಪ್ಪಿದಾ - ಮೇಳಕಾಗದಾ |
ಕೀಳು ಮರ್ದಳಾ-ಸ್ಫಾಲಕಾರಿಯಂ ||
ಹೇಳನಂ ಗೆಯಲ್ - ತಾಳಿದೀ ಮುಖಂ |
ಓಲಗಕ್ಕೆ ಸಂ-ಶ್ಲೀಲಮುಕ್ಕುಮೇ || ೧

ಮೀಸೆಯುಂಟಿಸಲ್ - ಸೀಸಕಂ ತೊಡಲ್ |
ಯೋಷೆ ಸಾಜಮೇಂ - ಲೇಸದಕ್ಕುಮೇಂ ||
ಮೋಸ ಪೋಗನೇ - ಕೇಶವೇಶ್ವರಂ |
ವೇಷವರಿತು ಸಂ-ತೋಷಗೊಳುವನೇ || ೨

ನಾಟ್ಯ ನಿಪುಣೆ

ಹರದಗ್ಧಸ್ಮರ ಭಸ್ಮವ |
ಹರಡೆ ಮರುತ್ತದರೊಳೊಂದು ಕಣವೀಶನೊಳಂ ||
ಗಿರಿಜೆಯೊಳೊಂದುಂ ಸೇರ್ಪವೊ |
ಲೆರಚಾಡಲ್ ಪ್ರಕೃತಿ ನರ್ತಿಸಿದ ನಾಟ್ಯವಿದೇಂ ||

# ೨೨. ನಾಟ್ಯ ನಿಪುಣೆ

ರಾಗ—ನಾಟ] [ತಾಳ—ಆದಿ

ನೃತ್ಯನೈಪುಣೀ — ನಿತ್ಯರಾಗಿಣೀ |
ಚಿತ್ರಜಾಗಮಾರ್ಗ - ವ್ಯಕ್ತಹಾಸಿನೀ || ಪ.

ಮುರಲೀಸಿನಾದ - ಮುರಜಾನುವಾದ |
ಸ್ವರಮೇಳನದಾ - ಸರಸಪ್ರಮೋದ || ಅ. ಪ.

ಹರನ ಗೆಲ್ವ ವಶೀ - ಕರಣಮಂತ್ರವನು |
ಗಿರಜೆಗಿಂತು ನೀ - ಸೂರೆದು ತೋರ್ದ್ದಯೇಂ ||
ಸರಸಿಜಾಸ್ಯೆ ನಿನ್ನ - ಸರಸಿ ಬರುವನಮ್ಮ |
ಸರಸಿ ಸಮ್ಮ ದೊರೆ - ವರದಕೇಶವನು || ೧

ರಾಗ ಯೋಗಿ

ಭಕ್ತೆಯಿವಳ್ ನಾದಸುಖಾ |
ಸಕ್ತೆಯಿವಳ್ ರಾಗಯೋಗಿ ಕೇಶವಭಜನಾ ||
ರಕ್ತಿಯ ಸುಲಭೋಪಾಯದೆ |
ಮುಕ್ತಿಪದ ಪ್ರಾಪ್ತಿಯೆಂದು ಲೋಗರ್ಗ್ಗರೆವಳ್ ||

## ೨೩. ರಾಗ ಯೋಗಿ

ರಾಗ—ಕೇದಾರಗೌಳ] [ತಾಳ—ಮಿಶ್ರಚಾಪು

ವಿಜಯ ಕೇಶವ ನಿನ್ನ - ಭಜಿಸೆ ಬಂದೆನೊ ಚೆನ್ನ |
ತ್ಯಜಿಸಬೇಡವೊ ಎನ್ನ - ಮೋಹನ್ನ || ಪ.

ನಿಜದ ದೈವವೊ ನೀನು - ಹೃದಯಾವೇಗವ ಬಲ್ಲೆ |
ಮೃದು ನಯದಿಂದೆಮ್ಮ - ನಡಸುವ ಸಖ ನೀನೇ || ಅ. ಪ.

ಬಡಜೀವವೆಮ್ಮದು - ಕಠಿನವ್ರತದಿ ಬಾಳ |
ಸುಡಿಸೆಂಬ ದೈವವ - ಪಿಡಿವುದೆ ಮನವು ||
ಹುಡುಗನ ಹದವ ತಾ - ನರಿಯದೆ ಬೋಧೆಗೆ |
ಬಡಿತ ಸಾಧನವೆಂಬ - ಗುರುವಲ್ಲ ನೀಂ ದೊರೆ || ೧

ಸಹಜವೆ ಸರಿಯೆನ್ನೆ - ಪಶುವೃತ್ತಿಗೆಡೆಯದು |
ಸಹಜವ ಬಿಡಿರೆನ್ನೆ - ನಡೆಯದಾ ಮಾತು ||
ವಿಹಿತ ಲೋಕಕೆ ಸಾಜ - ಗತಿಮಿತಿಯನುನಯ |
ಸಿಹಿಯಲಿ ಕಹಿಮದ್ದ - ತಾಯ್ ಕೂಸಿಗೀವಂತೆ || ೨

ಸ್ನೇಹತತ್ಪರ ನೀನು - ರಸಮಯರೂಪನು |
ಮೋಹದಿಂದಲೆ ಮೋಹ - ಪಟವ ಪೋಗಿಪನು ||
ಐಹಿಕದಿನೆ ಮೋಕ್ಷಪದಕೇಣಿಯಾಗಿಪ |
ಮಾಹಾತ್ಮ್ಯ ನಿನ್ನದು - ಗತಿ ನೀನೆನಗೆ ಸ್ವಾಮಿ || ೩

ಸ್ವರ್ಗಹಸ್ತೆ

ಸ್ವರ್ಗಹಸ್ತವನೇಂ ತೋರ್ಪಳ್ |
ಭಾರ್ಗವೀರೂಪೆ ತಾನಿರಲ್ ||
ಮಾರ್ಗಣಶ್ರಮವೇಂ ಸ್ವರ್ಗಂ |
ಸರ್ಗಲೀಲೆಯೊಳಿಲ್ಲಿರಲ್ ||

## ೨೪. ಸ್ವರ್ಗಹಸ್ತ

ರಾಗ—ಕಾನಡಾ] [ತಾಳ—ಮಿಶ್ರಚಾಪು

ಭಾವವಿದೇನೇ ಸಖೀ - ನರ್ತನಸುಖೀ || ಪ.

ಭಾವವಿದೇನೇ ಓ - ದೇವಲೋಕಾಹ್ವಾನೆ |
ದಿವಿಜರಾವೋದಕೆ - ಭುವಿಯನೊಯ್ಯುವೆಯೇನೆ || ಅ. ಪ.

ಕಾಲವನಂತ ನಿನ್ನೊಲವೇನನಂತವೆ |
ದೈವವನಂತ ನಿನ್ನೊಯ್ಯಾರವಂತೇಂ ||
ಕಾಲ ದೈವ ಲೋಕ ಸ್ವಾರಸ್ಯಗಳು ನಿನ್ನ |
ಬಾಳಿನೊಂದು ಮುಹೂರ್ತದೊಳ ಮೇಳವಿಪುವಲ್ತೆ || ೧

ಒಂದೇ ಕ್ಷಣವೆ ನೂರು ಯುಗದಿಂ ಮೇಲೆನಿಸದೆ |
ಸೌಂದರ್ಯ ಸಾರದ ಸಂದರ್ಶನವಿರೆ ||
ಬಂಧುರೆ ನಮ್ಮಯ ಬಂಧಮೋಕ್ಷಕೆ-ನಿನ್ನಾ- |
ನಂದವಾಹಿನಿಯೊಂದು ಬಿಂದುವೆ ಸಾಲದೆ || ೨

ಚೆನ್ನೆ ನೀನಾರನು ಮನದೊಳು ನೆನೆವೆಯೆ |
ಇನ್ನೆಷ್ಟು ಯುಗ ಕಾದು ನೀನಿಂತು ನಿಲುವೆ ||
ಒಲ್ಲನೆ ನಿನ್ನ ನಾ ಚೆನ್ನಕೇಶವ ಸ್ವಾಮಿ |
ಒಲ್ಲೆಯ ನೀನವನೀವ ಪ್ರಸಾದವ || ೩

ಕೃತಕ ಶೂಲಿ

ಕಾಲನ ನಾಂ ಜಯಿಸಿಹೆನಾ |
ಶೂಲಿಯವೋಲೆಂದು ಲೋಕಕುದ್ಘೋಷಿಸೆ ನೀಂ ||
ತಾಳಿಹೆಯೇ ನೀ ದೇವಕ- |
ಪಾಲಿಯ ಚಿಹ್ನೆಗಳನದರಿನೇಂ ರೌದ್ರಿಯೆ ನೀಂ ||

# ೨೫. ಕೃತಕ ಶೂಲಿ

ರಾಗ—ಶಂಕರಾಭರಣ] [ತಾಳ—ತ್ರಿಶ್ರಏಕ

ಕೃತಕ ಶೂಲಧಾರಿಣೀ - ಕಥೆಯದೇನೆ ಭಾಮಿನೀ |
ನಟನಪತಿಯ ವಿಗಡವೇಂ - ಹಿತವೆ ನಿನಗೆ ಮಾನಿನೀ || ಪ.

ಸಹಜಮಿತ್ರ ಮಾರನ - ದಹಿಸಿದ ಹರನೆಂದು ನೀಂ |
ಸಹೃದಯ ಭವವೈರದಿಂ-ದಹಿತನನವಹಸಿಪೆಯೇಂ ||
ಸಹಿಪನೇನೆ ಹರನದಂ - ಸುಹೃದ ಕೇಶವೇಶನಾ |
ಮಹಿಮೆ ನಿನ್ನ ಪೊರವುದೇಂ - ತುಹಿನಕರ ನಿಭಾನನೇ || ೧

ಜಯ ನಿಷಾದಿ

ಧನುವಂ ಪಿಡಿದಿರ್ದೊಡದೇಂ |
ವನಗುಲ್ಮದ ನಡುವೆ ಬೇಡರೊಡತಿಯ ಬಿರುಬಿಂ ||
ದನುಚರಿಯರನಾಳಿದೊಡೇಂ |
ತನುಭಂಗಿಯ ರಾಮಣೀಯಕಂ ಕುಂದುವುದೇಂ ||

# ೨೬. ಜಯ ನಿಷಾದಿ

ರಾಗ—ಸಾಂಗತ್ಯ, ಲಾವಣಿ] [ತಾಳ—ಏಕ

ಲೀಲಾನಿಷಾದಿಯೆ ಏನೇನ ಗೆಲ್ದಿಯೆ
ಏನೇನ ತಂದಿಹೆಯೇ |
ಕಾಳಿದುರ್ಗಿಯರ ಕರಾಳಸಾಹಸಿಕವ
ಪೋಲುತ ನಿಂದಿಹೆಯೇ || ಪ.

ಕಾಡುಮೇಡುಗಳೊಳಗೋಡಾಡಿ ಮೃಗಗಳ-
ನೀಡಾಡಿ ಮೆರೆಯುತಿಹೇ |
ಗೂಡೆಯು ಹೊತ್ತಿಹ ಬೇಡಿತಿ ಬಳಲಿರೆ
ನೋಡಿ ನೀಂ ನಗುತಲಿಹೇ || ೧

ಅಡಿಯಲಿ ಮುಳ್ಳೆಂದಾ ಹುಡುಗಿಯಳುತ್ತಿರೆ
ಕುಡಿನೋಟ ನೋಡುತಿಹೇ |
ಕಡುಗಲಿ ನಾನೆಂದು ಸೆಡೆದು ಗರ್ವದೆ ಮೆಯ್ಯ-
ಬೆಡಗಿಂದ ಬಳುಕುತಿಹೇ || ೨

ಹುಲ್ಲೆಗಣ್ಣಿಂದಲೆ ಕೊಲ್ಲುವೆ ಪುರುಷರ
ಬಿಲ್ಲಿನ್ನು ನಿನಗೇತಕೆ |
ಭಿಲ್ಲಿತಿವೊಲು ನೀನು ಕ್ಷುಲ್ಲಜಂತುಗಳನ್ನು
ಕೊಳ್ಳೆಗೊಳ್ಳುವುದೇತಕೆ || ೩

ಬೇಟೆಗಾರಳ ವೇಷದಾಟವನಾಡುವೀ
ಹೂಟದರ್ಥವದೇನೆ |
ಪೋಟಿಗಾರಳೆ ನೀನು ಚೆನ್ನಕೇಶವನಿಗೆ
ಬೇಟದಾಟದಿ ಜಾಣೆ || ೪

ನಾಟ್ಯಸುಂದರಿ

ಝಲ್ಲರೀ ಝಂಕೃತಾಮೋದಮುಗ್ಧಾನನಂ |
ಮಲ್ಲಿಕಾ ಮಾಲಿಕಾಲಂಕೃತೋರಃಸ್ಥಲಂ ||
ವಲ್ಲರಾಗಾರದೊಳ್ ಚೇಟಿಕಾನರ್ತನಂ |
ವಲ್ಲಭಸ್ವಾಗತಾನಂದಸಂವೀಕ್ಷಣಂ ||

## ೨೭. ನಾಟ್ಯಸುಂದರಿ

ರಾಗ—ಬೇಗಡೆ] [ತಾಳ—ರೂಪಕ

ಸುಂದರಿ ನೀನೇ — ಸುಂದರಿ ನೀನೇ |
ಕಂದರ್ಪನ ಸಂದೇಶಧು-ರಂಧರಿ ನೀನೇ || ಪ.

ಪದಕರ ವಿನ್ಯಾಸಗಳೇಂ |
ವದನಾಧರ ಹಾಸಗಳೇಂ ||
ಮೃದುನಯನವಿಕಾಸಗಳೇಂ |
ಹೃದಯಾಂಗವಿಲಾಸಗಳೇಂ || ಅ. ಪ.

ಮಾನಸದೊಳದಾರನು ನೀಂ
ಜಾಸಿಸುತಲಿ ಪಾಡುವೆಯೇ |
ಗಾನ ಸುಧಾ ವಾಹಿನಿಯಿಂ
ಪ್ರಾಣಗಳಂ ತಣಿಸುವೆಯೇ ||

ತಾಳತರಂಗಿತ ಗೀತೇ |
ವೇಲ್ಲಿತ ತನು ವಿದ್ಯೋತೇ |
ಕೌಸುಮ ಋತು ಪ್ರಭಾತೇ |
ಕೇಶವ ವಿಭುಸಂಪ್ರೀತೇ || ೧



ಭಸ್ಮಮೋಹಿನಿ

ಸಸ್ಮಿತಾನನದಿಂದೆ ಮೋಹನ ಭಸ್ಮಧೂಳಿಯನೆರಚುತುಂ |
ವಿಸ್ಮಯಾಕುಲ ಭಸ್ಮದೈತ್ಯನ ಮತ್ತನೃತ್ತದಿ ಕುಣಿಸುತಂ ||
ವಿಸ್ಮೃತಾತ್ಮನವಂ ಸ್ವಶೀರ್ಷವ ಸೋಂಕಲಾ ಸ್ವಕರಾಗ್ನಿಯಿಂ |
ಭಸ್ಮವಪ್ಪವೊಲೀಕೆಯಾಡಿಸಿ ಭಸ್ಮಮೋಹಿನಿಯೆನಿಸಿದಳ್ ||

# ೨೮. ಭಸ್ಮ ಮೋಹಿನಿ*

(ಸಂಗೀತ ರೂಪಕ)

ರಾಗ—ರಾಗಮಾಲಿಕೆ : ಮೋಹನ,
ತೋಡಿ, ಇತ್ಯಾದಿ] [ತಾಳ—ಆದಿ

ಹಿಮ್ಮೇಳ :

ಆಹಾ !—ಮೋಹಾಭಿಸಯದ ಸನ್ನಾಹಾ |
ಕೇಶವನುತ್ಸಾಹಾ || ಪ.

ಮೋಹಿನಿವೇಷದೆ ಭಸ್ಮದಾನವನ |
ದಾಹಿಸಿ ಧರ್ಮವ ಕಾಯ್ದ ಚರಿತೆಯಿದು || ಅ. ಪ.

ಪ್ರವೇಶಕ :

ಬಂದಳ್—ಸುರಸುಂದರಿಯಿದೊ ತಾಂ ಬಂದಳ್ |
ತ್ರಿಜಗನ್ಮೋಹಿನಿಯೈತಂದಳ್ |
ಆನಂದವ ಲೋಕಕೆ ತಂದಳ್ ||
ಕಂಕಣ ಕಿಂಕಿಣಿ ರಣಿತಕೆ ಕುಣಿಯುತ |
ಕಣ್ಕಿವಿ ಮನಗಳಿಗಮೃತವನೆರೆಯುತ || ೧

---

* **ಸೂಚನೆ**—ಈ ಹಾಡನ್ನು ನಾಟಕವಾಗಿ ಅಭಿನಯಿಸಬಹುದು. ಪ್ರಾರಂಭದಲ್ಲಿ ರಂಗವೇದಿಕೆಯ ಎರಡು ಪಕ್ಕಗಳಲ್ಲಿಯೂ ಹಿಮ್ಮೇಳದವರು,—ಒಬ್ಬೊಬ್ಬರು ಅಥವಾ ಇಬ್ಬರಿಬ್ಬರು,—ಸೇರಿ ನಾಂದಿ ಹಾಡತಕ್ಕದ್ದು. ಅದಕ್ಕೆ "ಭಜಾಮ್ಯಹಂ" ಪದ್ಯವೂ (ಪುಟ ೨೮, ಸಂಖ್ಯೆ ೬) "ಶ್ರೀ ಚೆನ್ನಕೇಶವಾ" ಗೀತವೂ (ಪು. ೩೭, ಗೀತ ೧) ಉಪಯುಕ್ತವಾಗುತ್ತವೆ. ಆಮೇಲೆ ಹಿಮ್ಮೇಳದವರು "ಸಸ್ಮಿತಾನನ" ಪದ್ಯವನ್ನೂ, (ಪು. ೮೮) ಪ್ರಸ್ತುತ ರೂಪಕದ ಪಲ್ಲವಿ ಅನುಪಲ್ಲವಿಗಳನ್ನೂ, ಬಳಿಕ ಪ್ರವೇಶಕದ ಎರಡು ನುಡಿ (ಚರಣ) ಗಳನ್ನೂ ಪೀಠಿಕೆಯಾಗಿ ಹಾಡತಕ್ಕದ್ದು. ಆಗ ಮುಖ್ಯ ಪಾತ್ರಗಳಿಬ್ಬರೂ—ಮೋಹಿನಿ, ಭಸ್ಮಾಸುರ—ವೇದಿಕೆಯ ಮೇಲೆ ಕಾಣಿಸಿಕೊಳ್ಳತಕ್ಕದ್ದು. ಅವರು ಸಂವಾದ ಅಭಿನಯಗಳನ್ನು ನಡಸುತ್ತಿರುವಾಗ ಹಿಮ್ಮೇಳದವರು ಮರೆಯಿಂದ ಅವರಿಗೆ ಜೊತೆಯಾಗಿ ಹಾಡಬಹುದು. ಸಂವಾದದ ಚರಣಗಳ ನಡುನಡುವೆ ಹಿಮ್ಮೇಳದವರು ಪಲ್ಲವಿ ಹಾಡುತ್ತಿರಬೇಕು. ಅದಕ್ಕೆ ಮೋಹನರಾಗ ಸರಿ. ಸಮಾಪ್ತಿಯಲ್ಲಿ ಹಿಮ್ಮೇಳದವರು "ವನಜಾಸನ" "ಜಯ ಜಯ ಮೋಹನ ಕೇಶವ" (ಪು. ೯೫, ಸಂ. ೨೩, ೨೪).

[ಮೋಹಿನಿಯ ಪ್ರವೇಶ—ನರ್ತನ ; ಬಳಿಕ ಎದುರುಕಡೆಯಿಂದ ಭಸ್ಮಾಸುರನ ಪ್ರವೇಶ]

ಹಿಮ್ಮೇಳ :

ಬಂದನ್—ಭಸ್ಮಾಸುರನಿದೊ ತಾಂ ಬಂದನ್ |
ಬಂದಾ ಮೋಹಿನಿಯನು ಕಂಡನ್ |
ಕಂಡಾಕೆಯ ಬೆಡಗಿಗೆ ನಿಂದನ್ ||
ನಿಂದು ನಿರುಕಿಸುತೆ ರೂಪವಿಲಾಸವ |
ಸುಂದರಿಯೊಡನಾಡಿದನೀ ಚಾಟುವ || ೨

ಭಸ್ಮಾಸುರ :

ಬಾರೇ—ಬಾ ನೀರೆ ಸಕಲ ಸುಖ ಸಾರೇ |
ನೀನೆನ್ನಯ ಮನವನು ಸೂರೆ-|
ಗೈದಿಹೆಯಲೆ ನೀಂ ದಯೆ ತೋರೇ ||
ಆರೆ ತಕ್ಕವನು ನಾನಲ್ಲದೆ ಶೃಂ-|
ಗಾರ ವಾರಿನಿಧಿ ನಿನ್ನೊಯ್ಯಾರಕೆ || ೩

ಮೋಹಿನಿ :

ಆರೋ—ವೀರನ ನೀಂ ಪೋಲುವೆ ಯಾರೋ |
ನಾರೀಜನಕಥೆ ನಿನಗೇಕೋ |
ಈ ಧೂರ್ತನ ಚೇಷ್ಟಿತ ಸಾಕೋ ||
ಪಾರುವುದೆನ್ನಸು ಪೋರರ ಕಂಡೊಡೆ |
ದಾರಿವಿಡಿದು ನೀಂ ಪೋಗು ಸಾಗೆಲವೊ || ೪

ಭಸ್ಮಾಸುರ :

ಕೇಳೇ—ನಾನೇ ದೊರೆ ಜಗಕೆಲೆ ಬಾಲೆ |
ಸರಿಯೆನಗಿಲ್ಲವೆ ಸುಖಲೋಲೆ |
ಮೂಲೋಕಕಮೊಡೆಯನು ನಾನೇ ||
ಹರನನೊಲಿಸಿ ನಾಂ ವರವನು ಗಳಿಸಿಹೆನ್ |
ಅರಿಯ ಸುಡುವೆನೀ ಬೆರಲ ಸೋಂಕಿಸಿಯೆ || ೫

---

ಹಿಮ್ಮೇಳದವರು—ಈ ಎರಡು ಪದ್ಯಗಳನ್ನು ಹಾಡಿ ಬಳಿಕ "ಶ್ರೀ ವಿಷ್ಣುಸಮ್ರಾಜ್ಞೀ" (ಪು. ೧೪೪, ಗೀತ ೬೦) ಗೀತವನ್ನು ಮಂಗಳವಾಗಿ ಹಾಡತಕ್ಕದ್ದು.

ಮೋಹಿನಿ :

ವೀರಾ—ನೀನಾರ ಗೆಲ್ದಿಹೆಯೊ ಧೀರಾ |
ಆವುರಿಬೆರಲಿಂದುಪಕಾರಾ- |
ವೇನೆಸಗಿಹೆ ಬೆಂಕಿಯು ಶೂರಾ ||
ಕೊಳ್ಳಿಕೈಯಿನ್ ಏನೊಳ್ಳಿತನೆಸಗಿದೆ |
ಉಲ್ಲಾಸವದೇಂ ದಳ್ಳುರಿಯಾಟದಿ || ೬

ಭಸ್ಮಾಸುರ :

ಭಾಮೇ—ಎನಗಾರೆದುರೆಲೆ ಸುಪ್ರೇಮೇ |
ಹೆದರುವೆ ನಾನಾರಿಗೆ ರಾಮೇ |
ಎನ್ನವಳಾಗೆಲೆ ಸುಖಸೀಮೇ ||
ಸದೆದು ಸುರರನಾಸೊದೆದಿಹೆನಿಂದ್ರನ |
ವಿಧಿ ಹರಿ ಶರ್ವರು ಬೆದರಿ ಧಾವಿಪರು || ೭

ಮೋಹಿನಿ :

ವೀರಾ—ನಿನಗೆನ್ನೊಡನೇನು ವಿಚಾರಾ |
ಶೂರರ ನೀನರಸೆಲೊ ಶೂರಾ |
ಹೋರಾಟವೆ ನಿನಗೆ ವಿಹಾರಾ ||
ನೀರೆಯರೆಡೆ ನೀನೇನ ಸಾಧಿಸುವೆ |
ಸಾರು ಶೂರರೆಡೆ--ಸಾರೆಲೊ ದೂರಕೆ || ೮

ಭಸ್ಮಾಸುರ :

ಪ್ರೀತೇ—ನಿನಗೆನ್ನೆಲ್ಲವ ನಾಂ ಸೋತೆ |
ನಿನ್ನೊಲವನೆ ಬೇಡುವೆ ದಾತೇ |
ನೀಂ ಕನಿಕರಿಸೆಲೆ ವಿದ್ಯೋತೇ ||
ಸುಧೆಯು ನಿಧಿಯೆ ನಿನ್ನಧರವ ಸವಿಯುದೆ |
ಬದುಕೆನಗೇತಕೆ ? ವರಬಲವೇತಕೆ ? || ೯

ಮೋಹಿನಿ :

ಮಾಣೋ—ನೀನೆನ್ನೊಳು ಬಯಕೆಯ ಮಾಣೋ |
ವ್ರತಚಾರಿಣಿಯೋ ನಾಂ ಕಾಣೋ |
ನೀಂ ವ್ರತವ ಮುರಿಯೆ ಸುಖವೇನೋ ? ||
ಆತುರದಿಂ ನೀನೆನ್ನ ನೋಕಿದೊಡೆ |
ಬೂದಿರಾಶಿ ನಾನಾಗದೆ ನಿಲುವೆನೆ ? || ೧೦

ಭಸ್ಮಾಸುರ :

ಏನೇ—ಆ ನಿನ್ನಯ ನೋಂಪಿಯದೇನೇ |
ನಾನದನು ಮುರಿಯೆನೆನ್ನಾಣೇ |
ಆ ವ್ರತವ ನಡೆಯಿಪೆನೆ ಜಾಣೇ ||
ನಿನ್ನ ನಿರಿಗೆ ನಾನಲುಗುವೆನೆಲೆವೊಲು |
ಧನ್ಯನ ಗೆಯ್ ನಿನ್ನಿಂಗಿತವನು ನುಡಿ || ೧೧

ಮೋಹಿನಿ :

ಕೇಳೋ—ಬ್ರಹ್ಮನ ಸುತೆ ನಾಂ ಸ್ವಾಯತ್ತೇ |
ನರ್ತನ ಲಲಿತ ಕಲಾಸಕ್ತೇ |
ನಾಂ ಪಶುಚೇಷ್ಟಿತಕೆ ವಿರಕ್ತೇ ||
ನೃತ್ಯದೊಳೆನಗೀಡಲ್ಲದ ಪುರುಷನ |
ಮುಟ್ಟೆನು ನಾನದು ನಿಶ್ಚಯ ಶಪಥವೊ || ೧೨

ಭಸ್ಮಾಸುರ :

ರಾಣೀ—ಕಲಿಸಾ ನೃತ್ಯವ ಬಿನ್ನಾಣೀ |
ನೀಂ ಗುರುವಾಗೆಲೆ ಸುಶ್ರೋಣೀ |
ನಾಂ ಶಿಷ್ಯನಹೆನೆ ಶುಕವಾಣೀ ||
ಚಿತ್ರೇಶ್ವರಿ ನಿನ್ನೊಲುಮೆಯ ಗಳಿಸಲು |
ನೃತ್ಯವನಾಡುವೆ ನೀನಾಡುವವೊಲು || ೧೩

ಮೋಹಿನಿ :

ಭಾಪು—ಮಝು ಭಾಪು ಭಾಪು ಸುಕುಮಾರಾ |
ಕುಣಿಯಲು ನೀಂ ಬಾರೆಲೊ ಧೀರಾ |
ಪರಿಕಿಪೆ ನಾಂ ನಿನ್ನನು ಪೂರಾ ||
ಥಾ ಥಕಿಟವೆನೆ ಬಲಗಾಲಿಂತಿಡು |
ಥೈ ತದ್ಧಿಮಿಯೆನಲೆಡಗಾಲಿಂತಿಡು || ೧೪

ಭಸ್ಮಾಸುರ :

ಹಾ ಹಾ !—ಏನಿದು ಸುಖ ಹೃದಯಾವೇಶಾ |
ಮೈಮರಸುವುದೀ ಸಂತೋಷಾ |
ಸರ್ವಾಂಗದ ಸುಂದರ ಲಾಸಾ ||
ದಾಸನಾದೆ ಓ ಭಾಮೆ ನಿನ್ನಡಿಗೆ |
ಆಶೆಯನರಿತು ಹಸಾದವ ನೀಡೆಲೆ || ೧೫

ಮೋಹಿನಿ :

ತತ್ತೋಂ—ಇಂತಾಗಿಸು ಬಲಗಾಲ್ಕೊಂಕ |
ತತ್ಥೈ ನಡು ಡೊಂಕ—ತಕಥೋಂ |
ಇಂತಾಗಿಸು ಕೊರಳೊಳು ವಂಕ ||
ಕಲಿತೆ ಧರಿಸಲೀ ತ್ರೈಭಂಗಿಯ ನೀಂ |
ಬಲುಹುಗಾರ ಇನ್ನೊಂದು ಗತಿಯ ನಡೆ || ೧೬

ಭಸ್ಮಾಸುರ :

ಕಾಂತೇ—ನಾನಾಡುವೆ ನೀಂ ತೋರ್ಪಂತೆ |
ನಿನ್ನೆವೆಯ ಸನ್ನೆಯಾದಂತೆ |
ನಿನ್ನೊಡಲಿಗೆ ನಾಂ ನೆಳಲಂತೆ ||
ಚರಣದೆ ಚರಣವ ಕರದೆ ಕರವನನು-|
ಕರಿಸುತಲಾಂ ವರ ಶಿಷ್ಯನಾಗುವೆನೆ || ೧೭

ಮೋಹಿನಿ :

ನೋಡು—ಈ ಮೋಹನ ನೃತ್ಯವನಾಡು |
ನಿನ್ನಾನಂದಕ್ಕಿದು ಜೋಡು |
ಇದನಾಡಿ ಬೇಗ ಮುದಗೂಡು ||
ನನ್ನಂತೆಯೆ ನೀಂ ಕುಲುಕೆಲ್ಲಂಗವ |
ಚೆನ್ನಾಗುವುದೆಲ್ಲವುಮೊಳಿತಪ್ಪುದು || ೧೮

ಭಸ್ಮಾಸುರ :

ಅಂತೇ—ನಾನಾಡುವೆ ನೋಡೆಲೆ ಕಾಂತೇ |
ನಿನ್ನೊಡಲ ಲಘುವ ನಾನಾಂತೇ |
ನೀಂ ಮೆಚ್ಚಲೆನಗೆ ನಿಶ್ಚಿಂತೇ ||
ತ್ವರಿತದಿ ಮುಗಿಯಿಸು ನಿನ್ನೀ ಶಿಕ್ಷೆಯ |
ಕರುಣಿಸೊಡನೆ ನಾಂ ಬೇಡಿದ ಭಿಕ್ಷೆಯ || ೧೯

ಮೋಹಿನಿ :

ಈಗಾ—ಸಂಪೂರ್ಣದ ಗತಿಯಾವೇಗಾ |
ಬಾಗಿದ ಬಲಗಾಲಿಡು ಥತ್ತೈ |
ಎಡಗೈಯೆಡಕಟಿಗಿಡು ತತ್ತೋಂ ||
ಥಕ್ಕಿಟ ಬಲತೋಳನು ಬೀಸೊಯ್ಯನೆ |
ಮಸ್ತಕಕಿಡು ನೀಂ ಮುಕುಟವ ಕೈಯಿನೆ || ೨೦

ಭಸ್ಮಾಸುರ :

ಆಹಾ—ಏನೀ ವಿನ್ಯಾಸವೆ ಹೋ ! ಹೋ !!
. . . . . . . . || ೨೧

(ತಲೆಗೆ ಕೈ ಸೋಕಿದೊಡನೆ ಭಸ್ಮಾಸುರನಿಂದ ಬೆಂಕಿಯುರಿಯೆದ್ದು, ಬೂದಿರಾಶಿ ಬೀಳುವುದು. ಮೋಹಿನಿ ಅದೃಶ್ಯಳಾಗುವಳು. ಹಿಮ್ಮೇಳ ಹಾಡುತ್ತಿರುವುದು.)

ಹಿಮ್ಮೇಳ :

ಹೋಹೋ !—ಹೋ ! ಭಸ್ಮನೀಗ ತಾಂ ಭಸ್ಮ |
ಆ ಹರವರ ಕರಶಿಖಿಯೂಷ್ಮ-|
ಕ್ಕಾಹುತಿ ತಾನಾ ವಿಕೃತಾತ್ಮ ||
ಆಹಾ ಏನದ್ಭುತವೀ ನಾಟ್ಯ |
ಮೋಹನ ಕೇಶವ ಹಿತ ಕಾಪಟ್ಯ || ೨೨

ವನಜಾಸನಕೃತಿವನದೊಳ್ |
ತನಿವಣ್ಗಳ ಮರೆತು ಮುಳ್ಳುಕೋಲರಸುವುದೇಂ ||
ಪ್ರಣಯ ಸುಮ ವರವ ತೊರೆಯುತ-|
ಲನಲೋಲ್ಮುಕ ವರವ ಬಯಸೆ ವಿಧಿ ವಿಗಡಿಸನೇಂ || ೨೩

ಜಯ ಜಯ ಮೋಹನ ಕೇಶವ |
ನಯಸೋತ್ಸವವೇಷ ರಸಿಕಚಕ್ರಾಧಿಪತೇ ||
ಪ್ರಿಯ ಚಯುವ ಜಗದೊಳಾಗಿಸಿ |
ನಯಧರ್ಮವ ಕಲಿಪ ಗುರುವೆ ನಿನಗಕ್ಕೆ ಜಯಂ || ೨೪

ನೀಲಾಂಬರೆ

ದೃಷ್ಟ ವೃಶ್ಚಿಕಾ |
ನಷ್ಟ ವೇಷ್ಟಿಕಾ ||
ಸ್ಪೃಷ್ಟ ಕನ್ಯಕಾ |
ಹೃಷ್ಟ ಲೌಕಿಕಾ ||

# ೨೯. ನೀಲಾಂಬರೆ

ರಾಗ—ನೀಲಾಂಬರಿ] [ತಾಳ—ಮಿಶ್ರಚಾಪು

ಏನೀ ಭಯಭ್ರಾಂತಿಯೇ - ನೀಲಾಂಬರೆ |
ಏನಂಗ ವಿಭ್ರಾಂತಿಯೇ - ಅಶಾಂತಿಯೇ || ಪ.

ನೀಲಾಂಬರದ ಸಿರಿ - ಯಾಲಯ ತನಗೆಂದು |
ಜೋಳಿಗಾರರುಹಿದರೇ - ಮನೋಹರೆ || ಅ. ಪ.

ಹೇಮಾಂಗರಾಗಕೆ - ಶ್ಯಾಮಾಂಬರಚ್ಛವಿ |
ರಾಮಣೀಯಕವೆಂದು - ಭಾಮೆ ನೀಂ ಬಗೆದು ||
ಕ್ಷೌಮವ ಕೊಳ್ಳಲೀ - ಭೀಮೋತ್ಪಾತವಿದೇನೆ |
ಸೌಮ್ಯನಾಯಕೀ ವರ-ಸ್ವಾಮಿಯೇ ಗತಿಯಲ್ತೆ || ೧

ಬೆಚ್ಚಿಸಿ ನಿನ್ನನು - ನಿಶ್ಚೋಲಗೈದು ತ- |
ನ್ನಕ್ಷಿಗೆ ಸಿಂಗಾರ-ದೂಟವನುಣಿಸೆ ||
ವೃಶ್ಚಿಕ ಮಂತ್ರವ-ನುಚ್ಚರಿಸಿದನೇನೆ |
ಅಚ್ಚುಮೆಚ್ಚಿನ ನಿನ್ನ - ಮಾಯಾವಿ ಕೇಶವ || ೨

ಹಾವ ಸುಂದರಿ

ಅಭಿನಯಚಟುಲಾಂಗೀ ಮನ್ಮಥಾಹ್ವಾನಭಂಗೀ |
ಶುಭಕರ ಕರಮುದ್ರಾ ಜಾನುಬಂಧೂರಭದ್ರಾ ||
ನಭನಿಭತನುಮಧ್ಯಾ ವಾದ್ಯಸಂಗೀತಹೃದ್ಯಾ |
ತ್ರಿಭುವನಪರಿತೋಷಾ ಸುಂದರೀ ನೃತ್ಯವೇಷಾ ||

## ೩೦. ಹಾವ ಸುಂದರಿ

ರಾಗ—ಕಮಾಸು] [ತಾಳ—ಆದಿ

ಸರಸವನಾಡೆ ನೀಂ - ಕರೆವುದದಾರನೇ |
ವರಿಸೆ ನಿನಗೆ ತಕ್ಕಾ - ತರುಣನೆಲ್ಲಿರ್ಪನೇ || ಪ.

ಹಲವು ತೆರನಲ್ಲವೇ - ಚೆಲುವಿನ ಸವಿ ಬಾಲೆ |
ಚಲದಿ ನೀ ನಿಂತು ಹಂ - ಬಲಿಸಲೊಲಿವನೇನೇ || ಅ. ಪ.

ಹಾವ ಚಾತುರ್ಯಂಗಳ - ನರಿತವನಾತನೇ |
ಭಾವಜಶೌರ್ಯವ - ನಳೆದವನಾತನೇ ||
ಜೀವದಂತರಂಗವ - ನಾಳುವನಾತನೇ |
ತೀವಿದ ಪ್ರೇಮವ - ಪರಿಯಿಪನಾತನೇ || ೧

ಮೊಗಗಳ ಸಾಸಿರ - ಕಂಡವನಾತನೇ |
ಸೊಗಗಳ ಸಾಸಿರ - ಉಂಡವನಾತನೇ ||
ಜಗದಿ ನೀನೊಬ್ಬಳೇ - ಸೊಗಸಿಗೆ ನೆಲೆಯೇನೆ |
ಬಗೆಯದೆ ವರಿಸನಾ - ಚೆನ್ನಕೇಶವ ಜಾಣೆ || ೨

ಶಕುನ ಶಾರದೆ

ಕಣಿ ಪೇಳುವೆಯೇಸಜರಾಣಿಯೆ ನೀ-|
ನಿನಿಯರ್ಗ್ಗಿನಿಯರ್ ದನಿಗೂಡಿಸರೇಂ ||
ಜನಮೆಂದಹುದೋ ಮನದೊಳ್ ಸರಸಂ |
ಪಣೆಲೆಕ್ಕವ ನೀಂ ಗುಣಿಸುತ್ತಿಹೆಯೇಂ ||

# ೩೧. ಶಕುನ ಶಾರದೆ

ರಾಗ—ಆನಂದಭೈರವಿ] [ತಾಳ—ಮಿಶ್ರಚಾಪು

ಶಾರದೆ ತತ್ತ್ವಾರ್ಥ ನೃತ್ಯವಿಶಾರದೆ |
ಜೀವಕಲಾಕೋವಿದೇ - ಸಂಮೋದೇ || ಪ.

ಪ್ರಸ್ತುತಲೋಕದ ಮಸ್ತಕಲೇಖ್ಯದ |
ಪುಸ್ತಕದರ್ಥವ ವಿಸ್ತರಿಸುವೆಯೇನೆ || ಅ. ಪ.

ಬ್ರಹ್ಮಾಂಡವಿಭ್ರಮ ಮರ್ಮವಿದೇನಮ್ಮ
ಚಿಸ್ಮುದ್ರಿಕಾ ಧಾರಿಣೀ |
ನಿರ್ಮಲಸತ್ತ್ವಕೆ ಭೌಮಾಂಗವೇಕಮ್ಮ
ಸಂಮೋಹನಾಕಾರಿಣೀ |
ಕೂರ್ಮೆಯ ಹೂವೊಳು ಕೂರ್ಮೊಸೆ ಮುಳ್ಳೇಕೆ |
ಸೌಮ್ಯಕೇಶವ ರಾಜ್ಯ ದೈವಜ್ಞಮೌಳಿಕೆ || ೧

## ವೀಟೀಧರೆ

ಶಶಿಸ್ಮಿತಳ್ ವೀಜನ ವೀಟಿಕಾನ್ವಿತಳ್|
ಕುಶೀಲವ ಪ್ರೇರಿತ ನೃತ್ಯ ಸಂಯುತಳ್ ||
ರಸಜ್ಞನೈತಪ್ಪ ನಿರೀಕ್ಷೆಯಿಂದಿವಳ್ |
ಸುಸಜ್ಜಿತಳ್ ನಿಂದಿಹಳೇಕಭಾವದಿಂ ||

# ೩೨. ವೀಟೀಧರೆ

ರಾಗ—ಫರಜು] [ತಾಳ—ಮಿಶ್ರಚಾಪು

ವೀಟೀಧರೇ - ಚಾಟು ಚತುರೇ - ಮನೋಹರೆ |
ಪಾಟೀರ ಸಂ - ಸಿಕ್ತ ಚಮರೇ - ಓ ಮಾಧುರೆ || ಪ.

ವೀಳೆಯದೂಳಿಗದೆ - ಬಾಳ ಸೊಂಪೇರಿಸುತೆ |
ಆಲವರ್ತದಿಂದಲಾ - ಯಾಸವ ಬೀಸಾಡುತೆ ||
ಲೋಲದೃಶಾ ತಂತುವಿಂ - ಜಾಲವನೆಯ್ದೊಡ್ಡುತೆ |
ಲೀಲೆಯಿಂದೀ ಲೋಗರ - ಮಾರನ ಪಾಲಾಗಿಪೆ || ೧

ಚಿನ್ನದ ಚಿಗುರಿನ - ಪರ್ಣವ ನೀನಾಯ್ದೆಯು |
ಚೂರ್ಣ ಪೂಗದ್ರವ್ಯವ - ಪನ್ನೀರೊಳಗೂರಿಟ್ಟೆಯು ||
ನಿನ್ನ ಚೆಂಗೈಯಿಂದಲೆ - ಸುಣ್ಣವ ಪೂಸಿರ್ಪೆಯು |
ಚೆನ್ನ ಕೇಶವಂಗೆ ಸಂ - ಪನ್ನವೇನೀ ತಂಬುಲ || ೨

ನಾಗವೈಣಿಕೆ

ಸರನಾರೀ ಹೃದಯಂಗಳ|
ಚಿರಂತನಾಲೋಲ ಘರ್ಷ ಘೂರ್ಣನ ಲೀಲಾ-|
ಪರಿಪಾಟಿಯು ತೋರಿಪಳೀ|
ಸುರಸರ್ತಕಿ ನಾಗವೈಣಿಕಾ ಸ್ವರಗತಿಯಿಂ||

# ೩೩. ನಾಗವ್ಯೆಣಿಕೆ

**ರಾಗ–ಶಂಕರಾಭರಣ]** **[ತಾಳ—ಏಕ**

ಧೃತ ನಾಗವೀಣೇ - ಶ್ರುತಿ ರಮ್ಯಗಾನೇ |
ಸ್ಮಿತವಿದ್ಯುದುನ್ಮೇಷಣೇ |
ಅತಿಮರ್ತ್ಯವಾಣೀ - ಗತಿಚಿತ್ರಯಾನೀ |
ನಟರಸಿಕಾಹ್ಲಾದಿನೀ || ಪ.

ಝುಂಝುಣು ಝಣಿತೇ - ಮಂಜುಲ ಹಸಿತೇ |
ಶಿಂಜಿತ ಪದ ಚರಿತೇ |
ಕಿಂಕಿಣೀ ರಣಿತೇ - ಶೃಂಗಾರ ಭಣಿತೇ |
ಭಂಗ ತರಂಗ ಗತೇ || ೧

ನೃತ್ತದೂಳಿಗವೇ ತೃಪ್ತಿಯೆ ನಿನಗೆ |
ಮತ್ತೇನ ಬೇಡುವೆಯೋ |
ಪೃಥ್ವೀಮನ್ಮಥಿನೀ ನಿತ್ಯಸಂಸರಿಣೀ |
ಧೂರ್ತಕೇಶವ ಕಾಮಿನೀ || ೨

भूषण... 

ಭೂಷಣಪ್ರಿಯೆ

ತರಣಿಗೆ ದೀಪೋತ್ಸವಮೇಂ |
ತರುಣೀ ನಿನ್ನಂಗರುಚಿಗೆ ಮಣಿಭೂಷಣಮೇಂ ||
ಕರೆಕರೆಯೇತಕೆ ? ಬೇಡದ |
ಕರವಲಯುವ ಬಿಸುಟು ತಾಳು ಹರುಷವ ಮುಖದೊಳ್ ||

# ೩೪. ಭೂಷಣಪ್ರಿಯೆ

ರಾಗ—ಬಿಲಹರಿ] [ತಾಳ—ಮಿಶ್ರಚಾಪು

ಆಭರಣ ನಿನಗೇತಕೇ - ಸಖಿಯೇ |
ಆಭರಣ ನಿನಗೇತಕೇ || ಪ.

ಸ್ವಾಭಾವಿಕದ ರೂಪ - ಸೌಭಾಗ್ಯವಿರೆ ಬೇರೆ |
ಆಭರಣ ಭಾರವೇಕೇ - ಸಖಿಯೇ || ಅ. ಪ.

ಬಳೆಯ ನೀನಿದನೀಗ ತೊಡುವ ಚಿಂತೆಯದೇಕೆ |
ಮದುಮಗಳವೊಲು ನಿನಗೆ ಚಾಪಲ್ಯವೇಕೇ ||
ಬಡನಡುವ ಬಾಗು ಬೆಡಗಿಗೆ ನಲಿಯುದನ ಕಣ್ಣು |
ಒಡವೆಗೊಲಿವುದೆ ತಕ್ಕುದೇ - ಸಖಿಯೇ || ೧

ಪರಿಚರೆಯು ತೋರುತಿಹ - ಕುರುವಿಂದದಲಿ ನೋಡು |
ಮರೆಯಿಸವೆ ನಿನ್ನ ಮೆಯ್ಸಿರಿಯು ತೊಡವುಗಳು ||
ಸುರಯಿ ಮಾಲೆಯು ವರವ - ಸರಸ ಕೇಶವದೂತಿ |
ಕರುಣಿಪಳು ಧರಿಸು ನೀನು - ಸಖಿಯೇ || ೨

ಕೇಳೀನಿರತೆ

ವೇಣುವ ತಾಂ ಬಾಜಿಸಲುಂ |
ಬಾಸೊಳು ತಾಂ ಗಾಳಿಪಟವ ಬಟ್ಟಾಡಿಸಲುಂ ||
ವಾಣಿನಿವೊಲು ನರ್ತಿಸಲುಂ |
ಏಸೆಸಗಲುಮಿವಳ ಸೊಬಗು ಮಾಸದುದಲ್ತೇ ||

## ೩೫. ಕೇಳೀನಿರತೆ

ರಾಗ—ಸಿಂಹೇಂದ್ರ ಮಧ್ಯಮ] [ತಾಳ—ಮಿಶ್ರಚಾಪು

ಕೊಳಲನೂದುವರಾರೆ - ನಲವ ಸೂಸುವರಾರೆ |
ತಿಳಿದು ನೀಂ ಪೇಳಲೆ ಗೆಳತೀ - ನನ್ನು ತಮತಿ || ಪ.

ಕೊಳಲ ರಾಗಂಗಳ ಹೊಳೆಯೊಳು ನಮ್ಮನು |
ಮುಳುಗಿಸಿ ತೇಲಿಪೀ ಚಲದಾಟವೇನೇ || ಅ. ಪ.

ಹುತ್ತದೊಳಗೆ ಹಾವು - ಸುತ್ತಿ ನಿದ್ರಿಸುವಂತೆ |
ಚಿತ್ತಜಲದಿ ಭಾವ - ಸುಪ್ತಿಯೊಳಿರಲು||
ಕುತ್ತುವ ಭಲ್ಲೆಯು - ವಾಯಿತೀ ಗಾಯನ |
ವೆತ್ಯಾಸವೇನೋ - ಎನ್ನೆದೆಯೊಳಾದಂತಿದೆ || ೧

ಸಂಸಾರ ತಾಪಂಗ - ಳನುಭವಗಳ ಕೇಳಿ |
ಸಾಂತ್ವನಗಳ ಪೇಳ್ವ ಸಖನವೊಲಿಹುದೇ||
ವಂಶೀವಿನೋದಿಯ ಕಂಸನಿಷೂದಿಯ |
ಪ್ರಾಂಶು ಕೇಶವನ ಕೃಪಾಂಶವಿದೇನೆ || ೨

ಕೊರವಂಜಿ

ಕೊರವಂಜಿಯ ವೇಷದಿ ಬಂದೊಡದೇಂ |
ಶರದೈಂದವಹಾಸವ ಮುಚ್ಚಿ ಹೆಯೇಂ ||
ಕರದೊಳ್ ಡಮರೇಂ ಚಿಟಿತಾಳಗಳೇಂ |
ಸ್ಮರಕೀರ್ತಸೆಗೀ ಕರಣಂ ಸರಿಯೇಂ ||

# ೩೭. ಕೊರವಂಜಿ

ರಾಗ—ಹುಸೇನಿ] [ತಾಳ—ರೂಪಕ

ನಟನವಾಡಿದಳ್ - ತರುಣಿ ನಟನವಾಡಿದಳ್ |
ಪಟುಮುಖಾಭಿನಯಗಳಿಂದೆ || ಪ.

ಕೊರವಿತಿವೊಲು ವೇಷತೊಟ್ಟು |
ಸ್ಮರನ ಗುಟ್ಟ ಮನದೊಳಿಟ್ಟು || ಅ. ಪ.

ಡಮರು ಢಣರು ಢಂಢಣರೆನೆ |
ಚಿಟಿಕೆ ತಾಳ ಚಟ ಚಟವೆನೆ ||
ಕುಲುಕಿ ಬಳುಕಿ ಬಳ್ಳಿಯೊಡನೆ |
ಒಲಿದು ನಲಿದು ಕುಣಿದ ಲಲನೆ || ೧

ಈಶತಾಂಡವದವೊಲೊಮ್ಮೆ |
ರಾಸರಭಸದಿಂದಲೊಮ್ಮೆ ||
ಆಶೆನೋಟದಿಂದಲೊಮ್ಮೆ |
ಕೇಶವೇಶ ದಾಸಿಯಿವಳು || ೨

ಕೀಶರುಷ್ಟೆ

ಮಾನವೊ ಪೀನಾಂಗ ವ್ಯಾ-|
ಧೂನನವೋ ರೂಪಧನೆಯ ಭಾಗ್ಯವಿಶೇಷಂ ||
ವಾನರ ಸಂಪ್ರಶ್ನೆಯಿದನ್ |
ಮಾನವರೇಸೊಪ್ಪಿಕೊಳುವರೋ ತಪ್ಪಿಪರೋ ||

## ೩೭. ಕೋಶರುಷ್ಟೆ

ರಾಗ—ಕಾಂಭೋಜ] [ತಾಳ—ಮಿಶ್ರಚಾಪು

ರೋಷವಿದೇನೇ ಸಖೀ - ಓ ಸುಮುಖೀ |
ಸುಮುಖೀ ಪ್ರಮುಖೀ ಸ್ಮರಪಂಜರಶುಕಿ || ಪ.

ರೋಷವಿದೇತಕೆ - ದೋಷವದೇನಾಯ್ತೆ |
ಕೋಶಲೀಲೆಯ ಪರಿ - ಹಾಸಕೆ ಮುನಿವುದೆ || ಅ. ಪ.

ಉಡಿಗೆಯುನೆಳೆಯೆ ನಿ - ಸ್ನೊಡಲಿನೊಯ್ಯಾರದ |
ಬೆಡಗು ಕಣ್ಗಳಿಗೆ ಸೂ - ರ್ಮ್ಮಡಿ ಸೊಗಸಾಯ್ತೇ ||
ಬಿಡು ರೋಷದೃಷ್ಟಿಯ - ಬಿಸುಡಾ ದ್ರುಯುಷ್ಟಿಯ |
ಹುಡುಗಾಟದೀ ಹುಚ್ಚು - ಕೇಶವನಿಗೆ ಮೆಚ್ಚು || ೧

ಪಾದಾಂಗುಳೀಯೆ

ಧರಿಸಲ್ ಪಾದಾಂಗುಳ್ಯಾ - |
ಭರಣವನ್ ಇವಳೇಕಪಾದ ತಪವಂ ಗೆಯ್ವಳ್ ||
ಸುರುಚಿಯದು ನೋಳ್ಪರಿಗೆ ಸಂ - |
ಸ್ಫುರಿಸಲ್ ತನುವೆಲ್ಲ ಮಾಧವೀವಲ್ಲಿಯವೋಲ್ ||

# ೩೮. ಪಾದಾಂಗುಳೀಯ

ರಾಗ—ಹಿಂದೋಳ] [ತಾಳ—ಮಿಶ್ರಚಾಪು

ಕಾಲುಂಗುರ ಸೆವವೇ - ಬಾಲಾಮಣಿ || ಪ.

ಕಾಲುಂಗುರ ಸೆವ - ಲೋಲಾಂಗಕಾಯಿತೆ |
ವಲ್ಲೀ ತೋರಣಗುಚ್ಛ - ವಾಲಿಂಗ್ಯವಾಯಿತೆ || ಅ. ಪ.

ಚಾರುವಾಮಾಂಘ್ರಿಗೆ - ಚಾರೆಯುಂಗುರವನು |
ಧಾರಯ್ಸೆ ಪಿಡಿದಿರೆ - ಸೀರೆ ನೀನೊಲಿದು ||
ಓರಡಿಯಿನೆ ನಿಂತು - ವೀರವ್ಯಾಯಾಮವ |
ತೋರುವಾತುರವೇನೆ - ನಾರೀಶಿರೋಮಣಿ || ೧

ರಾಕೇಂದುಮುಖಿ ನಿನ್ನೀ - ಏಕಪಾದದ ತಪ |
ನಾಕವಾಸಿಗಳನಾ - ರಾಧಿಪ ಪರಿಯೇಂ ||
ಲೋಕದ ಬೇಗೆಯ - ಪೋಗಿಪುದದು ನಮ್ಮ |
ಶ್ರೀ ಕೇಶವೇಶನ - ಕೃಪೆಯು ಸಾಧಿಪುದೇನೆ || ೨

ವಿಕಟ ನರ್ತಿನಿ

ಕೇಶದ ಭರವೇಂ ನಿನ್ನೀ |
ಮೀಸೆಯ ಸಾಜತೆಯ ತೋರಿಪುದೆ ವಿಕಟಮುಖೀ ||
ಮೋಸವಸು ನಿನ್ನ ಬಡನಡು |
ಪೋಷಿಪುದೇಂ ಕಾಲಿಸುಂಗುರಂ ಘಲಿರೆನದೇಂ ||

## ೩೯. ವಿಕಟ ನರ್ತಿನಿ

ರಾಗ—ಮಧ್ಯಮಾವತಿ] [ತಾಳ—ಏಕ

ಮುದ್ದಿನ ವಿಕಟೆಯ ನೋಡೇ - ಎಲೆ |
ಮದ್ದಲೆ ರಭಸದ ಕುಣಿತವ ನೋಡೆ || ಪ.

ಮದ್ಯವನುಂಡಿಹಳೇನೇ - ಭಂಗಿ |
ಮದ್ದಸು ಸೇವಿಸಿ ಹುಚ್ಚಾದಳೇನೇ || ಅ. ಪ.

ಪುರುಷನ ಮುಖವಾಡವೇನೇ - ಈ |
ಒರಟಾಟಗಳ ದೇವಸೆಡೆ ಮಾಳ್ಪರೇನೇ ||
ಶಿರದಲ್ಲಿ ಹಿರಿಯ ಕೊಪ್ಪೇನೇ - ನಿನ್ನ |
ಕೊರೆಯುವ ತೆಳುಸಡು ಕಾಲಾಳಿಯೇನೆ || ೧

ತದ್ಧಿಮ್ಮಿ ತಕಧಿಮ್ಮಿ ಧಿಮ್ಮಿ - ಈ |
ಗದ್ದಲವೇ ನಿನ್ನ ಹಬ್ಬವೇಸಮ್ಮಿ ||
ಸಿದ್ದಿಯ ಕೆಡಿಸಿದೊಡಮ್ಮೀ - ನಿನ್ನ - |
ಸೊದ್ದು ಬೀಳಿಸಿಯಾನು ಕೇಶವನಮ್ಮೀ || ೨

ಗಾಂಧರ್ವದೇವಿ

ಮೋಹನಾಂಬುಧಿಯುತ್ತರಂಗ ಧೋರಣಿಯಿಂ |
ದೇಹದಂಗಕವಿಭ್ರಮಂಗಳಿಂಬುಗೊಳಲ್ ||
ರೋಹಿಣೀಪ್ರಿಯವಕ್ತ್ರ ಬಿಂಬಕಾಂತಿಗಳಿಂ- |
ದೀಹಿತಳ್ ಜಗಕಿವಳ್ ನಾಕನರ್ತಕಿವೋಲ್ ||

# ೪೦. ಗಾಂಧರ್ವದೇವಿ

ರಾಗ—ಮಣಿರಂಗು] [ತಾಳ—ಮಿಶ್ರಚಾಪು

ಆನಂದ ರಸ ಸನ್ನಿಧಾನೇ - ದೇವಿ |
ಗಾಂಧರ್ವವೇದ ನಿದಾನೇ - ಸನ್ಮಾನೇ || ಪ.

ಕಂಪಿತ ಮಾಧವೀ ವಲ್ಲೀ ಬಂಧುರ ಬಾಹು |
ಶಂಪಾಲಸನ್ನೇತ್ರೇ - ಚಾಂಪೇಯಗಾತ್ರೇ ||
ಚಂಪಕನಾಸಿಕೆ - ಬಂಭರಕೈಶಿಕೆ |
ಅಂಭೋಜಭವ ಹೃದ್ಯ ಕಾವ್ಯಪ್ರತೀಕೆ ೧

ಪಾರಿವಾಳದ ಕಿರುಗೊರಲ ಕೊಂಕಿನ ನುಣ್ಪು |
ಸಾರಸಿ ಸರದೊಳ್ ಈಜಾಡುವಲಂಪು ||
ಶಾರಿ ರಸಾಲದೊಳೆರಗಿ ಪಾರುವ ಸೊಂಪು |
ಸೀರೆ ನಿನ್ನವಯುವ ವಿನ್ಯಾಸದಿಂಪು || ೨

ತ್ರಿಜಗನ್ಮೂಲಾಧಾರ ಚಿದನಂತ ಸತ್ತ್ವದ |
ಸೃಜಿಸಿ ಲಾಲಿಸಿ ಜೀವನಾಟ್ಯವಾಡಿಸುವಾ ||
ನಿಜಶಕ್ತಿಗಳ ಶಸ್ತ್ರಶಾಲೆ ನಿನ್ನೊಡಲೇನೆ |
ಅಜಮಾಯೆಯವತಾರ ಸರ್ವಸ್ವ ನೀನೇ || ೩

ಕುಂದುವ ಕರಗುವ ನೊಂದುವೀ ಲೋಕದಿ |
ಎಂದೆಂದುಮಳಿಯದ ಸತ್ಯವೊಂದಿಹುದು ||
ಸೌಂದರ್ಯವದರ ಪ್ರಭಾವವೆಂದೆನ್ನುವ |
ಗಂಧರ್ವಾಪ್ಸರಕಲಾ ಸಂದೇಶಕೃತಿ ನೀನು || ೪

ಗೆಜ್ಜೆ ಕಿಂಕಿಣಿಗಳ ನಿಸ್ವಾನ ಸ್ವನ ಮಿಗೆ |
ಮದ್ದಲೆ ತಾಳದ ತದ್ಧಿಮಿ ಧಿಮಿಗೆ ||
ಹೃದ್ಯಾಂಗಭಂಗಿಗಳಾ ಪ್ರತಿಸಂಜ್ಞೆಗೆ
ಮಾದ್ಯನಾಗನೆ ನಮ್ಮ ಮುದ್ದು ಕೇಶವ ದೊರೆ|| ೫

ಲಾಸ್ಯೋತ್ಸವೆ

ಭಜಿಸುವಳೇಂ ಕೇಶವನಂ |
ವಿಜಯೋತ್ಸವ ಗೀತ ನೃತ್ಯವಾದ್ಯಗಳಿನಿವಳ್ ||
ಧ್ವಜಿನಿಯಿವಳ್ ಸ್ತ್ರೀಸೃಷ್ಟಿಗೆ |
ವಿಜಿತಾಹಂಕಾರಿ ವಲ್ಲಭಾರ್ಪಿತ ಚೇತಳ್ ||

# ೪೧. ಲಾಸೋತ್ಸವೆ

ರಾಗ—ಶಾಹನ] [ತಾಳ—ಮಿಶ್ರಚಾಪು

ಏಸು ಕಾಲ ನೀಂ ಕಾಯುವೇ - ಲಾಸೋತ್ಸವೇ || ಪ.

ಕೇಶವ ಬರುವನೆಂ - ಬಾಸೆಯ ಭರದಲಿ |
ಬೇಸರವಡದೆ ಆ - ಯಾಸವ ತಾಳುತೆ || ಅ. ಪ.

ಊಳಿಗಕೇಂ ಮಿತಿ - ಯಿಲ್ಲವೇ - ಈ ಲೋಕದಿ |
ಕೇಳಿ ನೀತಿಯ ಪೇಳ್ವರಿಲ್ಲವೇ - ಪ್ರತೀಕ್ಷಣೆ ||
ಆಳುವ ದೊರೆ ನಿನ್ನ - ತಾಳುಮೆಯೆನಿತೆಂದು |
ಆಳವನಳೆವವೋಲ್ - ಕಾಲವ ಕಳೆವನೆ || ೧

ಕೇಳಿಯೋಳ್ ಮನಸಿಲ್ಲವೇನ್ - ಆ ಸ್ವಾಮಿಗೆ
ವೇಳೆಗೊತ್ತುಗಳೇನಿಲ್ಲವೇನ್ - ಲೋಲಾಂಬಕೆ ||
ಬಾಲೆ ನಿನ್ನಯಾ ಪದ - ತಾಳ ಝುಂಕಾರವ- |
ನಾಲಿಪ ಸುಖದೊಳೇ - ಲೋಲನಾದನೇಂ ದೊರೆ || ೨

ಶುಕ ಸಖಿ

ಶುಕಿಯೇಂ ಸಖಿಯಿಂದಾಪ್ತಳೆ |
ವಿಕಸಿತ ಸುಮವದನೆ ಬೇಸರವೆ ಮನುಕುಲದೊಳ್ ||
ವಿಕಟವ ಗೆಯ್ದನೆ ವಲ್ಲಭ - |
ನಕಲಂಕಿತೆ ಸೈಸು ವಿರಲವಿಶ್ರಮಿಯಾತಂ ||

# ೪೨. ಶುಕ ಸಖಿ

ರಾಗ—ಹಂಸಧ್ವನಿ] [ತಾಳ—ತ್ರಿಶ್ರ ಏಕ

ಸರಸವಾಡೆ ಕೆಳೆಯನೆತ್ತಲರಸಿ ತಂದೆಯೇ |
ಅರಗಿಣಿಯಾ ನುಡಿಯ ಕೇಳಿ ಮರುಳುಗೊಂಡೆಯೇ || ಪ.

ಬೆಡಗ ನೋಳ್ಪರಿರದೆ ನಿನಗೆ ಬೇಸರಾದುದೇ |
ನುಡಿಯ ಕೇಳ್ವರಿರದೆ ಮನಸು ರೋಸಿಪೋದುದೇ ||
ಕಲಿಸಿದುಲಿಯನುಲಿಯುವ ಗಿಣಿ |
ತಿಳಿಯಲಹುದೆ ನಿನ್ನ ಮನವ || ೧

ಕಾದು ನೋಡುತಿಹನು ನಿನ್ನ ಚೆನ್ನಕೇಶವಂ |
ಆದಿಮೂಲನವನೆ ಸೊಬಗನೆಲ್ಲ ನೂಸುವಂ ||
ಶುಕಭಣಿತದಿ ಪಿಕಮಣಿತದಿ |
ಸಕಲ ಜಗದ ರುಚಿಯೊಳವನೆ || ೨

ಉಲ್ಲಾಸಿನಿ

ಅನಂತಕಾಲಾಯತ ತೇಜವೊಂದು ತಾ-|
ನಸಸ್ಯ ಲಾವಣ್ಯರಸ ಪ್ರವಾಹದೀ ||
ಕ್ಷಣೈಕಮಾತ್ರಾಸುಭವ ಪ್ರತೀಕದೊಳ್ |
ಘನಿಷ್ಠಮಾಗಿರ್ಪುದು ಲೋಕಪುಣ್ಯದಿಂ ||

## ೪೩. ಉಲ್ಲಾಸಿನಿ

ರಾಗ—ಸಾರಂಗ] [ತಾಳ—ಮಿಶ್ರಚಾಪು

ಆವ ಜೀವಕೆ ಶೂಲ - ಆವ ಮೀನಿಗೆ ಗಾಳ |
ಆವ ಹಕ್ಕಿಗೆ ಜಾಲವೇ - ನೀನೋ ಬಾಲೆ || ಪ.

ಹಾವಭಾವಾಸ್ತ್ರ - ಪ್ರಭಾವದಿನಾಳುವ |
ದೈವಾಧಿಕಾರಿಣಿ ನೀಂ - ಸುಶೀಲೆ || ಅ. ಪ.

ಕುಂಚಿತಚರಣ ಹೃದಂಚಿತಕರಚಿಹ್ನ |
ಚಂಚಲನಯನ ಪ್ರಪಂಚಿತಹಸನ ||
ಕಾಂಚೀಸ್ವನನವೆಂಬೀ ಪಂಚಶರದೆ ನೀಂ |
ವಂಚಿಸ ಬಂದೆಯ ಚೆನ್ನಕೇಶವನ || ೧

ಭಾವದೇವಿ

ಭಾವದೇವತೆ ಕಾವ್ಯಗಾಯನ ನೃತ್ತ ಶಿಲ್ಪಕ ಕಲ್ಪನಾ- |
ಜೀವಮಾತೃಕೆ ವಿಶ್ವಕೃತ್ಪ್ರತಿಭಾಪ್ರತೀಕೆ ಕಲಾತ್ಮಿಕೇ ||
ದೇವಮಾನವರೊಳ್ ಪರಸ್ಪರ ಸಖ್ಯಸೇತು ವಿಧಾಯಿನೀ |
ಸ್ತ್ರೀವಿಲಾಸದ ಸೀಮೆ ನೀನೆಲೆ ಕೇಶವೇಶ್ವರ ಮೋಹಿನೀ ||

# ೪೪. ಭಾವದೇವಿ

ರಾಗ—ಸಾವೇರಿ] [ತಾಳ—ಮಿಶ್ರಚಾಪು

ಆವ ದೇವಿಯೆ ನೀನು - ಭೂವ್ಯೈಭೋಗಕೆ ಬಂದೆ |
ಊರ್ವಶಿ ಮೇನಕೆ - ರಂಭೆಯರಂತೆ || ಪ.

ಜೀವಸಂಕುಲದೆಲ್ಲ - ಭಾವಂಗಳುದಯದ |
ತಾವಿದು ಕಾಣೆಯ - ದೇವ ಕೇಶವನೆಡೆ || ಅ. ಪ.

ಬಾಹುವಿನ್ಯಾಸವೊ - ಮೋಹದ ವದನವೋ |
ನೇಹದ ನಯನದ - ಶೋಭಾ ಪ್ರಚುರವೋ ||
ಈಹಾ ಸಹಸ್ರಕ - ದಾಹಿಸೆ ಲೋಕವ |
ಊಹೆ ಮುಟ್ಟದ ನಿನ್ನ - ಸಾಹಸ ತಾನೇನೆ ||

ನಿತ್ಯದೀ ಸಂಸಾರಲೀಲಾ- |
ನೃತ್ಯದಲಿ ಸೃಷ್ಟಿಯ ವಿಚಿತ್ರದ ||
ತತ್ತ್ವವಿವರಣಯತ್ನದಿಂ ಸಂ- |
ತೃಪ್ತಳೇ ನೀಂ ಭಾವದೇವತೆ || ೧

ವೇಣೀ ಸಂಹಾರೆ

ದುರುಳಂ ಮಡಿಯದೆ ನಾನೀ |
ಕುರುಳಂ ಪೆಣೆಲಿಕ್ಕೆನೆಂಬ ಶಪಥವ ನಿನ್ನಿಂ ||
ಅರಿತಾಡಿದಳೇಂ ದ್ರೌಪದಿ |
ಗುರು ನೀಂ ವೀರೆಯರಿಗಂ ವಿಹಾರಿಯರಿಂಗಂ ||

---

ಕೇಶವಾಮೋದ ರಾಸಿಕ್ಯಂ ಕೈಶಿಕೀರಾಗ ಕಾರಣಂ |
ಕೈಶಿಕೀರಾಗ ರಾಸಿಕ್ಯಂ ಕೇಶವಾಮೋದ ಕಾರಣಂ ||

# ೪೫. ವೇಣೀ ಸಂಹಾರೆ

ರಾಗ—ಪೂರ್ವೀ ಕಲ್ಯಾಣಿ] [ತಾಳ—ಮಿಶ್ರಚಾಪು

ವೇಣೀ ಸಂಹಾರೇ - ಏಣಾಂಕಗೌರೇ || ಪ.

ಶೋಣ ಬಿಂಬಾಧರೆ - ಕಾಲೀಯ ಚಿಕುರೇ || ಅ. ಪ.

ದ್ರುಪದಾತ್ಮಜೆಯುವ್ರೋಲು - ಶಪಥವ ಗೈದು ನೀಂ |
ಸಫಲವದಾಯ್ತೆಂದೀ - ಕಬರಿಯ ಪೆಣಿಲೇಂ ||
ಕೃಪಣಾತ್ಮ ಲೋಕದ - ತಪನೆಯುನಣಗಿಸಿ |
ವಿಪುಲಹೃದ್ವನಗಳ್ಗೆ - ತಣಿವ ನೀನೆರೆವೇ ||

ಎರೆದು ನೀಸನುರಾಗವರ್ಷವ |
ಧರೆಯು ನೀರಸ ಜೀವಿಕೋಟಿಗೆ ||
ಸರಸತೆಯು ರಾಜ್ಯವನು ಪಾಲಿಸಿ |
ವರದ ಕೇಶವನೊಲವ ಗಳಿಸಿಹೆ || ೧

ನೃತ್ಯ ಸರಸ್ವತಿ

ಪೂರ್ಣಮೆನಿಪುದು ಹೃದಯಭಾಷಿಕೆ ವರ್ಣಪದವಚಸಂಗಳೊಳ್ |
ಕರ್ಣದೃಶೆಗಳ ಕುತುಕವಾಗಿಪ ಗಾನನಟನಗಳೊಂದಿರಲ್ ||
ತೂರ್ಣದವಿರಳ ಮತಿಮಸಂಗಳ ಪಾಕಮಿದೆನಿಪ ರೂಪಿವಳ್ |
ಅರ್ಣವಜೆ ಗಿರಿಜೆಯುರ ಚಿದ್ದ್ಯುತಿ ಜೀವರಸಜೆ ಸರಸ್ವತೀ ||

## ೪೬. ನೃತ್ಯ ಸರಸ್ವತಿ

ರಾಗ—ದರ್ಬಾರು] [ತಾಳ—ಮಿಶ್ರಚಾಪು

ನೃತ್ಯ ಸರಸ್ವತಿ - ಸತ್ಯಲೋಕವಿಭೂತಿ |
ನಿತ್ಯ ಚಿದ್ರಸಿಕಾಕೃತಿ - ಕಲಾದ್ಯುತಿ || ಪ.

ಅತ್ಯಂತ ಹಿತರೂಪೆ - ಪ್ರೀತ್ಯಾಸ್ಪದಾಲಾಪೆ |
ತತ್ತ್ವಬೋಧನ ಮೋದಿನೀ - ಆಮೋದಿನಿ || ಅ. ಪ.

ಪದಮಾತ್ರ ತಾನೆಂತು - ಹೃದಯೇಂಗಿತಂಗಳ |
ವಿದಿತವಾಗಿಪುದರ್ಥ - ಚ್ಯುತಿಯಾಗದಂತೆ ||
ಒದವಿ ಕೂಡಿರೆ ರಾಗ - ಹದದಿಂದಾಂಗಿಕಸಂಜ್ಞೆ - |
ಯುದಿಪುದಾಗಳೆ ಪೂರ್ಣ - ವಿಧದಿಂದಾತ್ಮ ವಿಲಾಸ || ೧

ಚಿತ್ತಹಿಮಾಚಲ - ತೀರ್ಥತ್ರಿವೇಣಿಯು |
ಪ್ರತ್ಯಕ್ಷರೂಪಿದು - ಹೃದ್ಭಾಷ್ಯಮೂರ್ತಿ ||
ಮುಕ್ತಿಯಿದಾತ್ಮಕ್ಕೆ - ರಕ್ತಿ ರಸಜ್ಞರ್ಗೆ |
ಯುಕ್ತದರ್ಶನೆಯಿದು - ಚೆನ್ನಕೇಶವನಿಗೆ || ೨

ನೃತ್ತೋನ್ಮತ್ತೆ

ಶುಭಾಂಗಿ ಲೋಲಲೋಚನೇ |
ತ್ರಿಭಂಗಿ ಬಂಧುರಾಂಗನೇ ||
ಸ್ವಭಾವ ಕೋಮಲೇಂಗನೇ |
ಅಭೀಷ್ಟನಾರೆ ಲಾಸನೇ ||

# ೪೭. ನೃತ್ತೋನ್ಮತ್ತೆ

ರಾಗ—ಪುನ್ನಾಗವರಾಳಿ] [ತಾಳ—ಏಕ

ನೃತ್ತದ ರಭಸವಿದೇನೇ - ಎಲೆ |
ಮತ್ತೇರಿ ಮೆಯ್ಯ ನೀ ಮರೆತಿಹೆಯೇನೆ ||
ಚಿತ್ತಜನಾವೇಶವೇನೇ - ನಿನ್ನ |
ಪುತ್ತಳಿಯೊಡಲೇನು ಬಳಲದೆ ಬಾಲೆ || ಪ., ಅ. ಪ.

ತದ್ಧಿಮಿ ತಕಧಿಮಿ ಥೈಯಾ ತಾ |
ತಜ್ಝಣು ತೋಂ ಝಣು ಝಣು ಝಣುರೆಸುತಾ ||
ವಿದ್ಯಾಧರಾನಂದ ಭರಿತಾ - ಇದು |
ಮುದ್ದು ಮೋಹನೆ ನಿನ್ನ ಬೆಡಗಿನ ಕುಣಿತಾ || ೧

ಗೆಜ್ಜೆಯ ಘಲಿಘಲಿ ಘಲಿರೂ - ನಿನ್ನ |
ಹೆಜ್ಜೆಯ ತಾಳದ ಥೈಥಕ್ಕರೆಗರೂ ||
ಕಜ್ಜಲ ನಯನದ ಪೊಗರೂ - ನೋಡೆ |
ಹೃದ್ಯವೆ ಚೆನ್ನಕೇಶವನಿಗೆ ಮಿಗಿಲು || ೨

# ೪೮. ವಿರಹಾರ್ತೆ

ರಾಗ—ಖರಹರಪ್ರಿಯ] [ತಾಳ—ಆದಿ

ನಾಥನೇಂ ಮುನಿದನೆ - ಮಾತನೇ ತೊರೆದನೆ |
ಏತಕೀ ವಿರಹವೆ - ಪ್ರೀತಿಪ್ರಮೋದನೆ || ಪ.

ಪ್ರಣಯ ಸಲ್ಲಾಪಂಗಳೊಳ್ - ವಿನಯವನೇಂ ಮೀರ್ದೆಯ |
ಮನಸಿನಿಂಗಿತಾರ್ಥವ - ಗಣಿಸದೆ ಬಿಟ್ಟೆಯ ||
ಅನುರಾಗಕಾಂಕ್ಷಿಯಿಂ - ಪಣವ ನೀಂ ಕೇಳ್ದೆಯ |
ಕನಲಿರ್ಪುದೆಂತೆ ನಿ - ನ್ನಿನಿಯ ಕೇಶವೇಶ್ವರಂ || ೧

## ೪೯. ಚಾರುಹಾಸಿನಿ

ರಾಗ—ಅಸಾವೇರಿ] [ತಾಳ—ಮಿಶ್ರಚಾಪು

ಕರೆದವರಾರೇ ಓ - ತರುಣೀ ಇಲ್ಲಿಗೆ ನಿನ್ನ |
ಪರಿಷೆಯೊಳಾರನಾ - ದರಿಸುವರಾರೇ || ಪ.

ಕೇಳುವ ದೊರೆಯಿಲ್ಲ - ಕೇಳಿಗೆ ಕೆಳೆಯಿಲ್ಲ |
ತಾಳಮೇಳಗಳೆಲ್ಲ - ಗಾಳಿ ಪಾಲಾಯಿತೆ || ಅ. ಪ.

ಚಾರುಹಾಸಿನಿ ಕೇಳೆ - ನೂರು ಚೆಲ್ವೆಯರಿರೆ |
ತಾರತಮ್ಯದ ತಿಳಿ - ವಾರ ಕಣ್ಗಿಹುದೇ ||
ಕೋರಿ ನೀನರಸುವಾ - ಸಾರಜ್ಞನೇತಕೋ |
ದೂರದೊಳೇ ನಿಂತು - ಗಾರುಡಿಗೈವನೆ || ೧

ದೇಶದೇಶಗಳ ವಿ - ಲಾಸಿನಿಯರ ಸಂತೆ |
ರಾಸಕೋಲಾಹಲ - ತುಮುಲದ ಕಂತೆ ||
ವಾಸವನೋಲಗ-ಕಿಂತಿದು ಮಿಗಿಲಂತೆ |
ಕೇಶವ ರಾಜೇಂದ್ರ - ಸಂತಃಪುರವಿದಂತೆ || ೨

# ೫೦. ಪ್ರಣಯವಂಚಿತೆ

ರಾಗ—ನಾದನಾಮಕ್ರಿಯೆ] [ತಾಳ—ಮಿಶ್ರಚಾಪು

ಮೋಸ ಗೆಯ್ದನೇ ಕೆಳದೀ - ಕೇಶವರಾಯ || ಪ.

ಆಶೆಯ ತೋರಿ ಸಾ - ವಾಸಕೆ ಬಾರದೆ || ಅ. ಪ.

ಕುಡಿನೋಟಗಳ ಬೀರಿ - ನಿಡಿದುಸಿರ್ಗಳ ಸಾರಿ |
ಪಿಡಿದೆನ್ನ ಸೆರಗನು - ನುಡಿದೊಸಗೆಯನು ||
ಮಿಡಿವೆನ್ನ ಮನಸಿಗೆ - ದೃಢದ ನಂಬಿಕೆಯಿತ್ತು |
ಕಡೆಗೆ ತಾನೆತ್ತಲೋ - ಕಡುಮಾಯವಾದನೆ || ೧

ಕೆಳದೀ ಪೇಳುವುದೇನೆ - ಒಲವಿನಾ ಕಥೆಯಿಷ್ಟೇ |
ಮಲರ ಸಸಿಯಿನೆಳೆದು - ನಲುಬೀ ಬಿಸುಡುವುದೇ ||
ಬಳಗ ನೂರಿರ್ಪರಾ - ಚೆಲುವು ಬಿಕಾಶಿಗೆ |
ಕಲಿತು ನ್ಯಾಯವನವಂ - ಬರುವಂದೆ ಬರಲಮ್ಮ || ೨

# ೫೧. ಕಲಹಾಂತರಿತೆ

ರಾಗ—ಹುಸೇನಿ] [ತಾಳ—ಮಿಶ್ರಚಾಪು

ಮುಳಿದನೇ - ಸಖೀ - ಮುಳಿದನೇ || ಪ.

ಮುಳಿದನೆ ಸಖಿ ಪೇಳೆ - ಚೆಲುವ ಕೇಶವರಾಯ |
ಸುಳಿದಾಡನೇಕಿಲ್ಲಿ - ಕಲಹವದಾರಲ್ಲಿ || ಅ.ಪ.

ಮರೆಯಿಂದಿಣಿಕಿನೋಡಿ - ಸರಸಸಂಜ್ಞೆಯ ನೀಡಿ |
ಪರಿಪರಿಯನುನಯ - ವಚನಂಗಳಾಡಿ ||
ಕರೆದು ನಾಂ ಬಾರೆನ್ನು - ತಿರಲಾಗ ಸರಿದೋಡಿ |
ವಿರಸ ಗೈವುದದೊಂದು - ಹಿರಿಮೆಯು ಗುರುತೇನೆ || ೧

ಪ್ರಣಯದ ಹಾಸ್ಯವ - ರಣಭೀಷಣವ ಮಾಡಿ |
ಮನದೊಳೇನನೊ ತಾನೆ - ನೆನೆದೆನ್ನ ದೂಡಿ ||
ಬಿನದದೊಳ್ ಆತನದೇಕೆ - ಕನಲಿ ಕೆರಳ್ದನೆ |
ಮುನಿಸಿಗೆನ್ನೆಡೆಯೊಳೇ - ನಿನಿಮದ್ದಿಲ್ಲವೆ || ೨

ಮುಳಿದರೆ ಮುಳಿಯಲಿ - ಇಳೆಯೊಳಗಿನ್ನೇನು |
ಬೆಳಗಾಗದಿರ್ಪುದೆ - ಸುಳಿಯದೆ ಗಾಳಿ ||
ಇಳಿಯದೆ ಬಿಸಿ ಮತ್ತೆ - ಕೆರಳದೆ ಹಸಿವಿನ್ನು |
ಒಳಿತಾಗದಿರ್ಪುದೆ - ಮಲರಂಬು ಕೆಳೆಯಿರೆ || ೩

# ೫೨. ವಿಲಾಸಿಕೆ

ರಾಗ—ಮುಖಾರಿ] [ತಾಳ—ಮಿಶ್ರಚಾಪು

ಕೊರಗದಿರೆಲೆ ಬಾಲಿಕೇ - ವಿಲಾಸಿಕೆ |
ಮರುಗದಿರೆಲೆ ಶಾರಿಕೇ - ಓ ಲಾಸಿಕೆ || ಪ.

ಚಿರಕಾಲ ಗೈದಿಹ - ಸರಸತಪಸ್ಯಕೆ |
ವರವ ನೀಂ ಬೇಳ್ಕೊಡೆ - ಮರುನುಡಿಯುವರಾರೆ || ಅ. ಪ.

ಎಷ್ಟು ನೀಂ ಕಾದೊಡ - ಮಿಷ್ಟೇ ನಿನ್ನಯ ಪಾಡು |
ಇಷ್ಟ ಚೆನ್ನಿಗ ತಾನ್ ಅ - ದೃಷ್ಟರೂಪಿಯಲೇ ||
ಶ್ರೇಷ್ಠಕಲಾರಸ - ವೃಷ್ಟಿಯಿಂ ಲೋಕ ಸಂ - |
ತುಷ್ಟಿ ಗೈವುದೆ ನಿನ್ನ - ಸೃಷ್ಟಿಗೆ ಫಲವಲ್ತೆ || ೧

# ೫೩. ನೃತ್ತಹಾಸಿನಿ

ರಾಗ—ಶ್ರೀರಂಜಿನಿ] [ತಾಳ—ಆದಿ

ನೃತ್ತಹಾಸಿನೀ - ಮತ್ತಕಾಶಿನೀ |
ಚಿತ್ತಜೋತ್ಸವ - ಪ್ರತ್ಯವೇಕ್ಷಿಣೀ || ಪ.

ರನ್ನದಿಂಬಿನಾ - ಕೆನ್ನೆ ಗೆಂಪನು |
ಹೊನ್ನಿನೆಸಕದಾ - ನುಣ್ಣುಮೆಯ್ಯನು ||
ಕನ್ನೆ ನಿನ್ನಯಾ - ಕಣ್ಣುಸನ್ನೆಯಿಂ |
ಬಲ್ಲನೇನವಂ - ಚೆನ್ನಕೇಶವಂ || ೧

ಕನ್ಯಕಾಮಣೀ - ಪುಣ್ಯಕಾಮಿನೀ |
ಸ್ವರ್ಣಕಿಂಕಿಣೀ - ಶಿಂಜಿತಸ್ವನೀ ||
ಪೂರ್ಣಸುಖಮಯಂ - ತೂರ್ಣಕರುಣೆಯಿಂ |
ನಿನ್ನ ವರಿಸುವಂ -ಚೆನ್ನಕೇಶವಂ || ೨

## ೫೪. ಚಕ್ರವಾಕಿ

ರಾಗ—ಚಕ್ರವಾಕ] [ತಾಳ—ಆದಿ

ಇನ್ನುವೇಕೆ ಬಾರನೇ - ಏನುಪೇಕ್ಷೆ ಧೊರಣೇ |
ಅನ್ಯಚಿಂತೆಯಾಂತನೇ - ಚೆನ್ನಿಗಂ ಪ್ರಮತ್ತನೇಂ || ಪ.

ಮುಳಿಸೇನೊ ಎನ್ನೊಳು - ಛಲವೇನೊ ತನ್ನೊಳು |
ಬಲು ನಲ್ಮೆಯುವನೆಂದು - ಗಳಹಿದ್ದೆಯಲ್ಲೆ ನೀಂ || ಅ. ಪ.

ಪಾಪವೇನ ಗೈದೆನೋ - ಶಾಪವಾರು ಕೊಟ್ಟರೋ |
ತಾಪವೆನ್ನ ಪಾಡಾಯಿತೇ - ಪೋಪುದೆಲ್ಲಿಗೇ ಸಖೀ || ೧

ಚಕ್ರವಾಕಿವೋಲು ನಾಂ - ವಿಕ್ಲಬಾರ್ತೆಯಾದೊಡಂ |
ಚಕ್ರವರ್ತಿ ಕೇಶವಂ - ಸುಪ್ರಸನ್ನನಾಗನೇಂ || ೨

ಸಾಕೂತಲೋಚನಂ - ಲೋಕಪ್ರಮೋಹನಂ |
ಏಕಿಂತು ಕಾಡಿಪ್ಪನೇ - ಶ್ರೀ ಕೇಶವಂ ಕಾಣೇ || ೩

## ೫೫. ಪ್ರಣಯ ಕುಪಿತೆ

ರಾಗ—ಉದಯರವಿಚಂದ್ರಿಕೆ] [ತಾಳ—ಆದಿ

ಮರುಳನೇನವಂ - ದುರುಳನೇನವಂ |
ವರಿಸೆ ಬಾರದಾ - ಚೆನ್ನ ಕೇಶವಂ || ಪ.

ವರುಷ ನೂರರಿಂ - ಸ್ಥಿರದೊಳೆನ್ನನೀ |
ತೆರದಿ ಕಾಯಿಸಿಟ್ಟು - ಮರೆತು ಪೋದನೇನೆ || ಅ. ಪ.

ಸರಸದಾಶೆಯಂ - ಕೆರಳಿಸಿರ್ದ್ದ ತಾಂ |
ಮರಳಿ ಬಾರದಿಂತು - ವಿರಮಿಸಿರ್ಪುದೇಂ ||
ಅರಿಯನೇನವಂ - ಮರಿಯಾದೆ ಬಗೆಯ |
ಮುರಿವುದೆಂತೆ ಆ - ಗರುವಿಯಬ್ಬರವ || ೧

ಕಪಟಿಯೇನವಂ - ಕೃಪಣನೇನವಂ |
ಚಪಳನೇನವಂ - ನಿಪುಣೆ ಪೇಳೆ ನೀಂ ||
ಕುಪಿಸಿ ಪೋದನೋ - ತಪಿಸಿ ಸೋತನೋ |
ನೆಪವದೇನೋ ಆ - ಅಪರಾಧವೇನೋ || ೨

# ೬೩. ಲತಾಂಗಿ

ರಾಗ—ಲತಾಂಗಿ] [ತಾಳ—ಮಿಶ್ರಚಾಪು

ಗೆಲಿದೌ ಲಲಿತಾಂಗೀ - ಲತಾಂಗೀ || ಪ.

ಲಾಲಿಸಿ ಈ ಲೋಕವ - ಲೀಲಾನಯಲೋಲಾಂಗದಿಂ || ಅ. ಪ.

ಹೃದಯವಾರಿಧಿಯ ನೀಂ - ಕಡೆದಭಿನಯದಿಂ |
ಮಧುರ ಗಾಯನದಿಂದೆ - ಗಳಿಸಿದೆ ಸುಧೆಯಂ ||
ರೂಪ ಕಾಂತಿಗಳಿಂದೆ - ತೋಳಿನ |
ಬಳ್ಳಿ ಬಳುಕುಗಳಿಂದೆ - ಕಾಲಿನ ||
ತಾಳ ಮೇಳಗಳಿಂದೆ - ವದನದ |
ಹಾವ ಭಾವಗಳಿಂದೆ - ಭುವನವ || ೧

ಜಗದ ಕಟ್ಟಡವಿಯೊಳ್ - ಭವದ ಕತ್ತಲೆಯೊಳ್ |
ಸೊಗದ ದೀವಿಗೆ ತೋರಿ - ಸವಿಯೂಟವಿಡುವೆ ||
ಜೀವಯಾತ್ರೆಯ ಚರಿಪ ಚರಣದಿ |
ತೀವಿಸುವೆ ಸೋತ್ಸಾಹ ಬಲವನು ||
ರಾಸಕೇಳೀ ರಸವಿಲಾಸಿನಿ |
ಕೇಶವಾಂತಃಪುರ ನಿವಾಸಿನಿ || ೨

## ೫೭. ಸುಮಬಾಣ

ರಾಗ—ಜಂಜೂಟಿ] [ತಾಳ—ಆದಿ

ಕೌಸುಮಬಾಣನ - ಕರುಣೆಯಿಂತಾಯಿತೇ |
ಕುಸುಮವೆ ಕಂಟಕವಾಯಿತೇ - || ಸುಮಬಾಣ || ೧

ಭಾಮೆ ನೀ ಕೇಳೇ - ಪ್ರೇಮವೆನ್ನದೆ ಶೂಲೆ |
ವಾಮನೇತ್ರಕೆ ಬಲಿ - ಯಾದೆನೇ - || ಸುಮಬಾಣ || ೨

ಪ್ರಿಯೆ ನಿನ್ನ ಪೋಲ್ವ ನಿ - ರ್ದಯೆಯ ನೇತಕೆ ಎನ್ನ |
ನಯನವೀಧಿಗೆ ವಿಧಿ - ತಂದನೇ - || ಸುಮಬಾಣ || ೩

ನಸುನಗು ನಗುತೆ ನೀಂ - ವಿಷವ ಬಿತ್ತಿದೆಯಲ್ಲೇ |
ಕಿಸಲಯವೇಂ ಬಿಸಿ - ಕಾರುವುದೇ - || ಸುಮಬಾಣ || ೪

ಪ್ರಣಯವನೇತಕೆ - ಕೆಣಕುವೆ ಬಾಲಿಕೆ |
ಹರಣಕದುವೆ ಶಿಖಿ - ಜ್ವಾಲಿಕೇ - || ಸುಮಬಾಣ || ೫

ಶಿಲೆಯೆದೆಗೀಪರಿ - ಲಲನೆಯ ರೂಪಿತ್ತು |
ಅಣಕಿಪನೆನ್ನ ಚೆನ್ನ - ಕೇಶವನೇ - ನಹಾ - || ಸುಮಬಾಣ || ೬

ರತಿ ಮನ್ಮಥ

ಜೀವಜೀವದ ಹೃದಯಗುಹೆಯೊಳಮವಿತು ಕೆರಳಿಸುತೆಲ್ಲರಂ |
ಹಾವಭಾವವಿಕೃತಿಗಳಿಂ ಕಾಡಿಸುತೆ ಸಂತಸವಡಿಸುತುಂ ||
ವೈವಸತನನುಮಣಕಿಸುತೆ ಸೃಷ್ಟಿಯನು ಶಾಶ್ವತಮಿರಿಸುವಾ |
ದೇವದೇವಿಯರಿವರು ಮನ್ಮಥ ರತಿಯರಮೃತಾಮೋದರು ||

# ತಿದ್ದುಪಡಿ

## ರತಿಮನ್ಮಥ

ಪುಟ ೧೪೫, ಗೀತೆ ೫೮

(ಗೀತೆಯ ಮೊದಲ ಎಂಟು ಪಂಕ್ತಿಗಳನ್ನು ಈ ರೀತಿಯಾಗಿ ಓದತಕ್ಕದ್ದು)

ಶ್ರೀವಿಷ್ಣುಸುಕುಮಾರಾ - ನಮೋ ಮಾರ |
ಶ್ರೀವಿಷ್ಣುಸುಕುಮಾರಾ || ಪ.

ಸೃಷ್ಟಿಮೂಲಾಧಾರ - ಸಕಲ ಜೀವ ವಿಹಾರ |
ಧೃತ ವಿಶ್ವ ಸಂಸಾರಾ - ಶೃಂಗಾರ || ಅ.ಪ.

ಭುವನ ಮೋಹನ ರೂಪ - ನವಮಲ್ಲಿಕಾಚಾಪ |
ಲಲಿತ ಗಾನ ವಿಲಾಸ - ಕಲಮಂಜುಹಾಸ ||
ಪ್ರಣಯ ಪಾರಾವಾರ - ತೃಣಲಘುಭವಭಾರ |
ದೈವಗೂಢಚರ - ಲಾವಣ್ಯಪೂರ ||

## ೫೮. ರತಿಮನ್ಮಥ

ರಾಗ—ಕಾಂಭೋಜಿ] [ತಾಳ—ರೂಪಕ

ಶ್ರೀವಿಷ್ಣು ಸುಕುಮಾರಾ - ನಮೋ ಮಾರ |
ಶ್ರೀವಿಷ್ಣು ಸುಕುಮಾರಾ || ಪ.

ಸೃಷ್ಟಿಮೂಲಾಧಾರ - ಸಕಲಜೀವ ಚಿತ್ತ ವಿಹಾರ |
ಧೃತವಿಶ್ವ ಸಂಸಾರಾ - ಶೃಂಗಾರ || ಅ.ಪ.

ಭುವನ ಸುಂದರ ರೂಪ - ನವಮಲ್ಲಿಕಾ ಚಾಪ |
ಲಲಿತಗಾನ ವಿಲಾಸ - ಕಲಮಂಜು ಹಾಸ ||
ಪ್ರಣಯ ಪಾರಾವಾರ - ತೃಣಲಘುಭವಭಾರ !
ದೈವ ಗೂಢಚರ - ಲಾವಣ್ಯಪೂರ ||

ರತಿ-ಮದನ ನೀವಾದಿಗುರು ದಂ-|
ಪತಿ ಪದದಿ ನಿಮ್ಮ ಪ್ರಸಾದದೆ ||
ವಿತತಬಂಧು ಕುಟುಂಬ ಸಂಗತಿ |
ಗತಿ ವಿಧಾತರು ಜಗಕೆ ನೀವೈ|| ೧

ಹರನೇತ್ರಶಿಖಿಯಿಂದೆ - ಸ್ಮರ ನಿನಗೇನಾಯ್ತು|
ಗಿರಿಜಾನೇತ್ರವೆ ನಿನ್ನ - ಶರಜಾಲವಾಯ್ತು||
ತೊರೆದೆಲ್ಲ ತಪವನಾ - ತರುಣಿಗೆ ತನುವಿತ್ತ|
ಪುರವೈರಿ ಸೋತನು - ಗೆಲಿದೆಯೋ ನೀನು ||

ಮಥನ ಮೋಹನ ಮಾದನಾದಿ ವಿ-|
ಕೃತಿಗಳಿಂ ನರಜೀವಶೋಧನ ||
ಹಿತಕರಣ ಸುಮಬಾಣ ನೀಂ ಶಾ-|
ಶ್ವತ ನಿಸರ್ಗದ ಮೂಲ ಚೇತನ || ೨

# ೫೯. ಜಯ ವಿಶ್ವಮೋಹನ

ರಾಗ—ಕುರಂಜಿ] [ತಾಳ—ತ್ರಿಶ್ರರೂಪಕ

ಜಯ ವಿಶ್ವಮೋಹನನೆ - ವಿಜಯ ನಾರಾಯಣನೆ |
ಜಯ ಸರ್ವಪಾವನನೆ - ಜಯಿಸು ಜಯಿಸು || ಪ.

ಜಯ ಮಂಗಳಾಕಾರ - ಜಯ ಸೌಮ್ಯಗಂಭೀರ |
ಶೃಂಗಾರ ಸಂಸಾರ - ಸಂಗೀತ ಸಾರಾ ||
ಜಯ ಜೀವಿತರಹಸ್ಯ - ಪರಮಾನುಭವಿವಶ್ಯ |
ಜಯ ಮಂಜುಹಸಿತಾಸ್ಯ - ಜಯ ಸರಸಲಾಸ್ಯ ||

ಜಯ ಜಯಾ ಜಯತು ಜಯತು || ೧

ಚೆನ್ನ ಕೇಶವಮೂರ್ತಿ - ಶಿಲ್ಪ ಚಿತ್ರಸ್ಫೂರ್ತಿ |
ವಿಷ್ಣುವರ್ಧನಕೀರ್ತಿ - ಕವಿತಾಗ್ರವರ್ತಿ ||
ಕರ್ಣಾಟಜನಕಾಂತಿ - ಭವತಾಪ ವಿಶ್ರಾಂತಿ |
ಸೌಂದರ್ಯ ಸಿದ್ಧಾಂತಿ - ಜಯತು ಜಯತು ||

ಜಯ ಜಯಾ ಜಯತು ಜಯತು || ೨





ಮನ್ಮಥ

ಸುಮಸಾಯಕ ರತಿನಾಯಕ ಜಗದಾದಿಮರಸಿಕಾ |
ಕಮನೀಯ ಹೃದಯ ಚೇತನರುಚಿ ಸೂತನಕರಣಾ ||
ಅಮೃತಾಶ್ರಿತ ಪ್ರಕೃತೀಶ್ವರ ಪರಿಖೇಲಿತ ಹಸಿತಾ |
ಜಯ ಮನ್ಮಥ ಜಯ ಮನ್ಮಥ ಜಯ ಜೀವೋಲ್ಲಸಿತಾ ||

# ೬೦. ಮಂಗಳಂ

ರಾಗ—ಮಧ್ಯಮಾವತಿ] [ತಾಳ—ಆದಿ

ಶ್ರೀ ವಿಷ್ಣು ಸಮ್ - ರಾಜ್ಞೀ ಮಂಗಲಂ |
ಶಿವಮಸ್ತು ಸಕಲಂ || ಪ.

ಸೌಮ್ಯನಾಯಿಕೇ - ಸಕಲ ಕಲಾತ್ಮಿಕೆ |
ವಿಶ್ವಜೀವ ಸೌ - ಭಾಗ್ಯ ವಿಧಾಯಿಕೆ || ಅ. ಪ.

ಮಾಯೇ - ಬ್ರಹ್ಮಾಂಡ ಚಿತ್ರ ಸಮುದಾಯೇ |
ನಾನಾ ಶಕ್ತಿದ್ಯುತಿ ಕಾಯೇ - ಕಮನೀಯೇ ||
ಜೀವ ಜೀವ ಸಂಸರ್ಗ ರಸಕ್ರಿಯೆ |
ನಿತ್ಯ ಭುವನ ಸಂಸಾರ ಮಹೋದಯೆ ||
ರೂಪ ನಾಮ ರಸ ರಾಗ ಭಾವ ಮಯೆ |
ಶ್ರೀಪರಮಾದಿಮ ಪೂರುಷ ಜಾಯೆ || ೧

ರಾಮೇ - ನಿಶ್ಶೇಷ ಭುವನ ಹೃತ್ಕಾಮೇ - |
ಜೀವಾಂಕುರವಿಲಸತ್ ಪ್ರೇಮೇ - ನಿಸ್ಸೀಮೇ ||
ಸೌಮ್ಯಕೇಶವೈಶ್ವರ್ಯ ಶರೀರಿಣಿ |
ಸಾಂಸಾರಿಕ ಸಂತಾಪ ನಿವಾರಿಣಿ ||
ಸಾಮ್ಯ ಸರಸ ನಯ ಧರ್ಮ ನಿರೂಪಿಣಿ |
ರಮ್ಯ ಪರಾತ್ಪರ ತತ್ತ್ವ ನಿದರ್ಶಿನಿ || ೨

ಮಂಗಳಂ

# ಸೌಂದರ್ಯ ವಿಜಯಂ

ಜಯ ವಿಜಯ ಚೆನ್ನಕೇಶವ |
ಜಯ ಲಲಿತ ಕಲಾ ವಿಲಾಸ ಚಕ್ರಾಧಿಪತೇ ||
ಜಯುವಂ ಕರುಣಿಸು ನಿನ್ನೀ |
ದಯಿತೆಯರಾಕೂತ ಸಂಜ್ಞಿತಂಗಳಿಗೆಂದುಂ || ೧

ಬೆರೆಯಿಸಿ ಚಿತ್ತವ ರುಚಿಯೊಳ್ |
ಮರೆಯಿಸಿ ಮಿಕ್ಕೆಲ್ಲ ಲೋಕಮಂ ತನ್ನನುಮಂ ||
ಪೆರತೊಂದನುವೆಳಸಿಸದಾ |
ಪರಜೀವಸಮಾಧಿಯಲ್ತೆ ಸೌಂದರ್ಯಕೃತಂ || ೨

ನ್ಯೂನಾಂಶದಿಂ ಲೋಕದಿ ತೋರ್ಪ ಸುಂದರಂ |
ಪೂರ್ಣಂ ವಿಭೋ ನಿನ್ನೊಳಗಲ್ತೆ ಕೇಶವಾ ||
ಉನ್ಮೀಲಿತಾಕ್ಷರ್ ವರ ನಿನ್ನದೆನ್ನುತೀ |
ಹೃನ್ಮಾಧುರೀಸಾರವನೀಂಟೆ ಧನ್ಯರೈ || ೩

ನೀಡೀ ಜನರ್ಗಚ್ಛದ ನೇತ್ರ ದೀಪ್ತಿಯಂ |
ಮಾಡಾರ್ದ್ರರಂ ಹಾರ್ದಿಕ ಧರ್ಮ ಚರ್ಯೆಯೊಳ್ ||
ಕೂಡಿರ್ಕವರ್ ನಿನ್ನನೆ ಲೋಕಭೋಗದೊಳ್ |
ನಾಡೋಜ ನೀನಾಗಿರು ಚೆನ್ನಕೇಶವಾ || ೪

ಸಾಂದ್ರಾಮೋದ ಪ್ರಭಾಕರ್ಷಣಗಳಿನೆಳೆದಿ-
ಟ್ಟಿಂದ್ರಿಯ ಗ್ರಾಮಮಂ ತತ್- |
ಕೇಂದ್ರಾಧಿಷ್ಠಾನದೊಳ್ ಜೀವವ ಸುಖರಸ ತ-
ಲ್ಲೀನಮಂ ಗೆಯ್ದು ವಾಂಛಾ- ||
ಬಂಧಂ ವಾಂಛಾಕರಂ ವಾಂಛಕನಿವು ಕರಗಲ್
ಮೂರರೈಕ್ಯಂಗೊಳಿಪ್ಪಾ |
ಸೌಂದರ್ಯಾದ್ವೈತಯೋಗಂ ಜಯಿಸುಗೆ ಜಗದೊಳ್
ಕೇಶವಾಮ್ನಾಯರಾಗಂ || ೫

ಶಾಂತಲಾದೇವಿ ಮತ್ತು ವಿಷ್ಣುವರ್ಧನರಾಜ

೧೫೦

ಶಬ್ದಾರ್ಥಕೋಶ

ಪದ್ಯಗೀತಗಳ ಮೊದಲ ಚರಣಗಳ ಅಕಾರಾದಿ

ರಾಗಗಳ ಅಕಾರಾದಿ

# ಶಬ್ದಾರ್ಥಕೋಶ

(ಪ=ಪದ್ಯ. ಗ=ಗದ್ಯ. ಪು=ಪುಟ.)

ಸೂಚನೆ—ಶಬ್ದಕ್ಕೆ ಅರ್ಥ ಬರುವುದು ನಿಘಂಟಿನಿಂದ. ಭಾವಕ್ಕೆ ಸ್ವಾರಸ್ಯ ಬರುವುದು ಅಂತರಂಗದ ಅನುಭವದಿಂದ—ಅನುಭವ ಪರಿಪಾಕದಿಂದ.

## ನಾಂದಿ

ನಾಂದೀ=ಸಂತೋಷ ಕಾರ್ಯದ ಪ್ರಾರಂಭ, ಆಗಿನ ದೇವತಾ ಪೂಜೆ, ಸ್ತೋತ್ರ.

**ಪ.** ೧—ಶ್ರೀಮತ್=ಸಂಪದ್ಯುಕ್ತವಾದ, ತ್ರೈಲೋಕ್ಯ ಪೂಜ್ಯಾಯ=ಮೂರುಲೋಕಗಳಿಗೂ ಪೂಜಾರ್ಹನಾದ ಸರ್ವ ಕರ್ಮಸು ಸಾಕ್ಷಿಣೇ=ಎಲ್ಲಾ ಕರ್ಮಗಳಲ್ಲಿಯೂ ಸಾಕ್ಷೀಭೂತನಾಗಿರುವ, ಫಲದಾಯ=ಫಲಗಳನ್ನು ಕೊಡುವ, ಕೇಶವಾಯ=ಕೇಶವನಿಗೂ, ಚ=ಮತ್ತು, ಶಿವಾಯ=ಈಶ್ವರನಿಗೂ, ನಮೋ ನಿತ್ಯಂ=ಪ್ರತಿ ನಿತ್ಯವೂ ನಮಸ್ಕಾರ, (ಶಿವಾಯ ಎಂದರೆ ಮಂಗಳಕರನಾದ ಪರಮೇಶ್ವರ ಎಂದೂ ಆಗಬಹುದು).

**ಪ.** ೨—ಧರಣೀ ಲೋಕೋತ್ತಂಸಿತಾತ್ಮೀಯ ಪಾದಃ=ಭೂಲೋಕಕ್ಕೆ ಕಿರೀಟಪ್ರಾಯವಾದ ಚರಣವುಳ್ಳವನೂ, ಚತುರ ವಿಬುಧಗೋಷ್ಠೀ ಪ್ರೌಢವಾಣೀ ವಿನೋದಃ=ಚತುರರಾದ ವಿದ್ವಾಂಸರ ಸಮೂಹದ ಪ್ರೌಢವಾಣಿಯಲ್ಲಿ ವಿನೋದವುಳ್ಳವನೂ, ಸಕಲ ಭರತ ವಿದ್ಯಾ ಹೃದ್ಯ ಗಂಭೀರ ಭಾವಃ=ಸಮಸ್ತ ನಾಟ್ಯವಿದ್ಯೆಯ ಮೂಲಕ ಆಪ್ಯಾಯಮಾನವೂ ಗಂಭೀರವೂ ಆದ ಭಾವವುಳ್ಳವನೂ, ವಿಪುಲ ವಿಜಯಲಕ್ಷ್ಮೀ ವಲ್ಲಭೋ ವಿಷ್ಣುದೇವಃ=ವಿಸ್ತಾರವಾದ ಜಯಗಳಿಗೆ ಒಡೆಯನೂ ಆದ ವಿಷ್ಣುದೇವನು, ಜಯತಿ=ಜಯಿಸುತ್ತಾನೆ.

**ಪ.** ೩—ಜಿಷ್ಣುರ್ಮಹೀಪಾಲಃ=ಜಯಶೀಲನಾದ ಮಹಾರಾಜನೂ, ಪಾಲಿತಾಖಿಲ ಭೂತಲಃ=ಸಮಸ್ತ ಭೂಮಿಯನ್ನೂ ರಕ್ಷಿಸುವವನೂ ಆದ, ವಿಷ್ಣುಃ=ವಿಷ್ಣುದೇವನು, ದೇವದೇವೇಶ ವಿಜಯನಾರಾಯಣಂ=ದೇವದೇವೇಶನಾದ ವಿಜಯನಾರಾಯಣಸ್ವಾಮಿಯನ್ನು (ವಿಗ್ರಹವನ್ನು), ಅಚೀಕರತ್=ಮಾಡಿಸಿದನು.

**ಪ.** ೪—ಶಾನ್ತಿಕೃತ್ಸರ್ವ ಭೂತಾನಾಂ=ಎಲ್ಲ ಪ್ರಾಣಿಗಳಿಗೂ ಶಾಂತಿಯನ್ನುಂಟುಮಾಡುವ, ಚೆನ್ನಕೇಶವ ದೇವಸ್ಯ=ಚೆನ್ನಕೇಶವ ದೇವರ, ಉತ್ತಮಾ ಪ್ರತಿಷ್ಠಾ=ಶ್ರೇಷ್ಠವಾದ ಸ್ಥಾಪನೆಯು, ವಿಷ್ಣುಕಾಂತಯಾ=ವಿಷ್ಣುದೇವನ ಪತ್ನಿಯಾದ, ಶಾಂತಿದೇವ್ಯಾ=ಶಾಂತಲದೇವಿಯಿಂದ, ಕೃತ=ಮಾಡಲ್ಪಟ್ಟಿತು.

ಗ. ೫—ಪರಬ್ರಹ್ಮಸ್ವರೂಪನೂ, ಅತಿಪ್ರಸನ್ನನೂ ಚೆನ್ನನೂ ಎನಿಸಿದ ಶ್ರೀಮದ್ವಿಜಯನಾರಾಯಣ ದೇವರನ್ನು ಹೊಯ್ಸಳದೇವನಾದ ಶ್ರೀಮದ್ವಿಷ್ಣುವರ್ಧನನು, ಶಕವರ್ಷ ಸಾವಿರದ ಮೂವತ್ತೊಂಬತ್ತನೆಯ ಹೇವಿಳಂಬಿ ಸಂವತ್ಸರ ಚೈತ್ರ ಶುದ್ಧ ಪಂಚಮೀ ಶನಿವಾರದಂದು ಸದ್ಭಕ್ತಿಯಿಂದ ಸುಪ್ರತಿಷ್ಠೆ ಮಾಡಿದನು.

ಪ. ೬—ಶ್ರೀವಸುಧಾಸಮೇತಂ=ಲಕ್ಷ್ಮೀ ಮತ್ತು ಭೂದೇವಿಯರಿಂದ ಕೂಡಿದವನೂ, ಇಂದುವಕ್ತ್ರಂ=ಚಂದ್ರನಂತೆ ಮುಖವುಳ್ಳವನೂ, ಅಂಬುಜಾಕ್ಷಂ=ತಾವರೆಯಂತೆ ಕಣ್ಣುಳ್ಳವನೂ, ಯೋಷಾಕೃತಿಂ ಬಿಭ್ರತಂ=ಯುವತಿಯ ವೇಷವನ್ನು ಧರಿಸಿದವನೂ, ಭಸ್ಮಾಸುರಧ್ವಂಸಕಂ=ಭಸ್ಮಾಸುರನನ್ನು ಸಂಹರಿಸಿದವನೂ, ದಿವ್ಯಮನಂತರೂಪಂ=ಪ್ರಕಾಶಮಾನನೂ, ಅನಂತರೂಪವುಳ್ಳವನೂ ಆದ, ಶ್ರೀಕೇಶವಂ=ಶ್ರೀಕೇಶವನನ್ನು ಭಜಾಮ್ಯಹಂ=ನಾನು ಭಜಿಸುತ್ತೇನೆ.

ಪ. ೭—ಯಂ=ಯಾರನ್ನು, ಶೈವಾಃ=ಶಿವಭಕ್ತರು, ಶಿವ ಇತಿ=ಶಿವನೆಂಬುದಾಗಿಯೂ, ವೇದಾಂತಿನಃ=ವೇದಾಂತಿಗಳು, ಬ್ರಹ್ಮೇತಿ=ಬ್ರಹ್ಮ ಎಂಬುದಾಗಿಯೂ, ಬೌದ್ಧ=ಬೌದ್ಧಮತೀಯರು, ಬುದ್ಧ ಇತಿ=(ಗೌತಮ) ಬುದ್ಧನೆಂಬುದಾಗಿಯೂ, ಪ್ರಮಾಣ ಪಟವಃ=ಪ್ರಮಾಣದಲ್ಲಿ ಸಮರ್ಥರಾದ. ನೈಯಾಯಿಕಾಃ=ನ್ಯಾಯ ದಾರ್ಶನಿಕರು, ಕರ್ತೇತಿ=ಕರ್ತ ಎಂಬುದಾಗಿಯೂ, ಜೈನಶಾಸನರತಾಃ=ಜೈನಮತೀಯರು, ಅರ್ಹಂಶ್ಚೇತಿ=ಅರ್ಹಂತನೆಂಬುದಾಗಿಯೂ, ಮೀಮಾಂಸಕಾಃ=ಪೂರ್ವಮೀಮಾಂಸಾದಾರ್ಶನಿಕರು, ಕರ್ಮೇತಿ=ಕರ್ಮ ಎಂಬುದಾಗಿಯೂ, ಉಪಾಸತೇ=ಆರಾಧಿಸುತ್ತಾರೆಯೋ, ಸಃ ಅಯಂ ಶ್ರೀಕೇಶವಃ=ಆ ಶ್ರೀಕೇಶವನು, ಸದಾ=ಸರ್ವದಾ, ವಃ=ನಿಮಗೆ, ವಾಂಛಿತ ಫಲಂ=ಇಷ್ಟಾರ್ಥವನ್ನು, ವಿದಧಾತು=ನೀಡಲಿ.

ಪ. ೮—ನಯನಾನಂದಮೂರ್ತಯೇ=ಕಣ್ಣಿಗೆ ಸಂತೋಷವನ್ನುಂಟುಮಾಡುವ ರೂಪವುಳ್ಳ, ಕೇಶವನಾಥಾಯ=ಕೇಶವ ಪ್ರಭುವಿಗೆ, ವೇಲಾಪುರೀ ನಿವಾಸಾಯ=ವೇಲಾಪುರಿಯಲ್ಲಿ (ಬೇಲೂರಿನಲ್ಲಿ) ವಾಸಿಸುವ, ಸತ್ಯ ಜ್ಞಾನಾಯ ವಿಷ್ಣವೇ=ಸಚ್ಚಿದ್ರೂಪನಾದ ವಿಷ್ಣುವಿಗೆ, ನಮಃ=ನಮಸ್ಕಾರ.

## ಸೌಂದರ್ಯತತ್ತ್ವಂ

ಪ. ೧—ಮನೋನ್ಮಾದನ=ಮನಸ್ಸನ್ನು ಕೆರಳಿಸುವುದು; ಹೃದಾರ್ದ್ರೀಕರಣ (ಹೃತ್+ಆರ್ದ್ರೀಕರಣ)=ಹೃದಯವನ್ನು ಕರಗಿಸುವುದು; ವಾಣಿನಿ=ನರ್ತಕಿ; ಆನಂದಸಂರಂಭ=ಆನಂದೋತ್ಸಾಹ.

ಪ. ೨—ಉಚ್ಛ್ರಯ=ಮೇಲಕ್ಕೆ ಎದ್ದ; ರಾಸರಾವ=ರಾಸ ಲೀಲೆಯ ಶಬ್ದ; ರಂಜನ=ಸಂತೋಷ.

ಪ. ೩—ದ್ಯುತಿಶಕ್ತಿ=ಕಾಂತಿಶಕ್ತಿ; ಅಕ್ಷಿ=ಕಣ್ಣು; ಶ್ರುತಿ=ಕೇಳುವುದು, ಕಿವಿ; ಮಾನುಷ್ಯ=ಮನುಷ್ಯ ರೀತಿಯಲ್ಲಿ; ಆದಿಚೇತನ=ಎಲ್ಲ ಶಕ್ತಿಗಳಿಗೂ ಮೂಲಸ್ಥಾನನಾದವನು.

ಪ. ೪—ಪಾರಾವಾರ=ಸಮುದ್ರ; ಮಾರುತಾಹತಿ=ಗಾಳಿಯ ಬಡಿತ; ಉಲ್ಲೋಲ ಕಲ್ಲೋಲ=ಮೇಲಕ್ಕೆದ್ದ ಅಲೆಗಳು; ತೀರಸ್ಥಂ=ದಡದಲ್ಲಿರುವವನು; ಕುತುಕ=ಕುತೂಹಲ; ನಿರುಕಿಪಂತೆ=ನೋಡುವಂತೆ; ಸ್ಮೇರಾಸ್ಯಂ=ಹಸನ್ಮುಖಿ, ನಗುನಗುತ್ತಿರುವ ಮುಖವುಳ್ಳವನು; ನಾರ ಸ್ವಾಂತ=ಮನುಷ್ಯನ ಅಂತರಂಗ; ವೀಚಿ=ಅಲೆ; ಘೂರ್ಣನ=ತಿರುಗುವುದು, ಉಲ್ಲಾಸ=ಸಂತೋಷ.

ಪ. ೫—ಅಂಬುರಾಶಿ=ಸಮುದ್ರ ; ಅನಿಲ=ಗಾಳಿ ; ಸಾವೇಗ=ಭಾವವೇಗದಿಂದ ; ಊರ್ಮಿಮಾಲಾ=ತೆರೆಗಳ ಮಾಲೆ ; ಆಕುಲ=ಸಮೂಹ ; ಉತ್ಕರ್ಷ=ಆಧಿಕ್ಯ ; ಸಂಧಾನ=ಒಡಗೂಡಿಸುವುದು.

ಪ. ೬—ಪೃಷದ್ಬಿಂದೂತ್ಸೇಕಂ=ಹನಿ ಹನಿಯಾಗಿ ಸಿಂಚಿಸುವುದು ; ಅಕಾಂಡ=ಅನಿರೀಕ್ಷಿತ ; ಉರ್ವಿ=ಭೂಮಿ ; ಅಂಧೀಕಾರಕಂ=ಕತ್ತಲೆ ಕವಿಸುವುದು, ಕುರುಡು ಮಾಡುವುದು ; ಆ ಪೃಷನ್ಮಯಪಟಂ=ಆ ನೀರುಹನಿಗಳ ಪರದೆ ; ಭೋಗಾಶಯ=ಸುಖಾಪೇಕ್ಷೆ ; ಸಂಧ್ಯಾತ=ಚೆನ್ನಾಗಿ ಧ್ಯಾನಿಸುವ ; ಆತ್ಮವಿಚಾರಿ=ಆತ್ಮಜ್ಞಾನಿ ; ಬ್ರಹ್ಮಸಂಜ್ಞಾಪಕ=ಬ್ರಹ್ಮವಸ್ತುವನ್ನು ನೆನಪುಮಾಡಿಕೊಡುವುದು.

ಪ. ೭—ಹಸಿತ=ನಗೆ ; ತೀವು=ತುಂಬು ; ಉದ್ಭಾವ=ಆಲೋಚನೆ ; ರಾಸಿಕ್ಯ=ರಸಿಕತ್ವ ; ಆವಿರ್ಭಾವ=ತೋರುವಿಕೆ ; ಸಂತಸ=ಸಂತೋಷ.

ಪ. ೮—ಶ್ರೀಲ=ಸುಂದರ ; ಲೋಲ=ತೊನೆದಾಡು ; ಅವಯವ=ಅಂಗ ; ಕಾಲಾಪಗೆ=ಕಾಲವೆಂಬ ನದಿ ; ಕೂಲ=ದಡ.

ಪ. ೯—ಜಕ್ಕಣೋಜ=ಜಕ್ಕಣಾಚಾರ್ಯ ; ನಿಬೋಧಿತರ್=ಪಾಠಕಲಿತವರು ; ಶಿಲ್ಪಮಂದರ=ಶಿಲ್ಪಕಲೆಯೆನ್ನುವ ಮಂದರಪರ್ವತದಿಂದ ; ಮಥಂಗೆಯೆ=ಕಡೆಯಲು ; ಚೋದಿತರ್=ಪ್ರೇರಣೆ ಪಡೆದವರು; ಕಲ್ಪವಲ್ಲರಿ=ಕಲ್ಪಲತೆ; ವಾರುಣಿ=ಹೆಂಡ ; ಸೋಮ=ಚಂದ್ರ ; ಬಲ್ಪು=ಶಕ್ತಿ ; ಒಲ್ಪು=ಪ್ರೀತಿ.

ಪ. ೧೦—ಶುಕವಾಣಿಯರ್=ಗಿಳಿಯಂತೆ ಮಧುರ ಧ್ವನಿಯುಳ್ಳ ಸುಂದರಿಯರು ; ಫಣಿವೇಣಿಯರ್=ಹಾವಿನಂತೆ ನೀಳವಾದ ಜಡೆಯುಳ್ಳವರು ; ಹಾಸ=ನಗೆ ; ಸ್ಮರವೀರೆಯರ್=ಮನ್ಮಥಶಕ್ತಿಯಿಂದ ಪ್ರಬಲೆಯರು ; ಲಾಸ=ಕುಣಿತ ; ದೃಗು ಬಾಣೆಯರ್=ನೋಟದ ಬಾಣವುಳ್ಳವರು ; ಮದನಿಕೆಯರ್=ಶಿಲಾಬಾಲಿಕೆಯರು (ಮದನಿಕೆ=ಮದನವತಿ, ಮನ್ಮಥಪ್ರಿಯೆ).

ಪ. ೧೧—ಅದಿತಿಯ ಸುತರು=ದೇವತೆಗಳು ; ವಿಧುವದನಿಕೆಯರ್=ಚಂದ್ರವದನೆಯರು.

ಪ. ೧೨—ಮಧುರಕಲಾಮಂಥಾನಂ=ಸವಿಯಾದ ಕಲೆಯ ಕಡೆಗೋಲು ; ಮಾನುಷಹೃದಯ ರಸಾಬ್ಧಿ=ಮನುಷ್ಯರ ಎದೆಯ ರಸಸಮುದ್ರ ; ಒಗೆ=ಹುಟ್ಟು ; ಶೀಕರಕಣ=ತುಂತುರು ; ಶುಭಸದನಿಕೆಯರ್=ಶುಭದ ನೆಲೆಯಾಗಿರುವವರು.

ಪ. ೧೩—ಭಾಷಿಕೆ=ಮಾತು ; ಹದ=ಹಿತ ; ಒಂದಿರವೇಳ್ಕುಂ=ಕೂಡಿರಬೇಕು ; ರಸಭಣನಿಕೆಯರ್=ಸರಸವಾದ ವಾಕ್ಕುಳ್ಳವರು, ರಸವಂತವಾಗಿ ಮಾತನಾಡುವವರು.

ಪ. ೧೪—ಎದೆಗುದಿ=ಕಳವಳ ; ಪದುಳ=ಕ್ಷೇಮ, ಪ್ರೀತಿ ; ಪಸರಿಸು=ಹರಡು ; ವಿಧುಮಂಡಲ=ಚಂದ್ರಮಂಡಲ ; ಸ್ಮರಗುಣನಿಕೆಯರ್=ಮನ್ಮಥನ ರತ್ನಹಾರ.

ಪ. ೧೫—ಚದುರೆಯರ್=ನಿಪುಣೆಯರು ; ಒಲವು=ಪ್ರೇಮ ; ವಿಧಿತಂತ್ರ=ದೈವದ ಉಪಾಯ ; ಹಿತಕಥನಿಕೆಯರ್=ಇಷ್ಟವಾದುದನ್ನು ಹೇಳುವವರು.

ಪ. ೧೩—ಚಿದಬುಧಿ=ಜ್ಞಾನಸಮುದ್ರ; ಅಲೆ=ತೆರೆ; ಮಧುಕರಣಿಕೆಯರ್=ಸವಿಯನ್ನೇ ಆಯುಧವಾಗಿ ಉಳ್ಳವರು.

ಪ. ೧೭—ಸ್ಫುರಣ=ಹೊಳಪು; ನಾಂಗಳ್=ನಾವುಗಳು; ಒರೆ=ಹೇಳು.

ಪ. ೧೮—ದೀಪಿಸು=ಬೆಳಗಿಸು; ಸುದೃಕ್ ಸಲ್ಲಾಪಂ=ಕಣ್ಣಿನ ಸಂಭಾಷಣೆ. ರಸದಾಪಗೆ=ರಸವೆಂಬ ನದಿ.

ಪ. ೧೯—ಪ್ರೇಕ್ಷೆ=ನೋಟ.

ಪ. ೨೦—ಪದ=ಸ್ಥಾನ; ಕಣ=ಅತ್ಯಲ್ಪ; ಪರಾತ್ಪರ=ಎಲ್ಲಕ್ಕಿಂತಲೂ ಮೇಲಿನ; ಅಮಿತ=ಎಲ್ಲೆಯಿಲ್ಲದ; ಅನುಬಂಧಿಸು=ಗಂಟುಹಾಕು; ಚಿತ್ರಸೂತ್ರಣಂ=ಆಶ್ಚರ್ಯಕರವಾದ ನೂಲು.

ಪ. ೨೧—ತಾರಂಗಗಳು=ಅಂಗಾಂಗ . . . ಅಲೆಯಂತೆ ಬಳುಕಿ ಬೀಳುವುದೇ ನಾಟ್ಯದ ಸೊಗಸು; ಸಂಗೀತಕ=ರಾಗವೃಂದ(symphony); ನಾದದ ಆರೋಹಣ, ಅವರೋಹಣಗಳೇ ಸಂಗೀತದ ಸೊಗಸು. ಮನಸ್ಸಿನ ಏಳು ಬೀಳುಗಳೇ ಕಾವ್ಯದ ಸೊಗಸು. ಉನ್ನತಿ ಅವನತಿಗಳೇ ಜೀವನದ ಸೊಗಸು.

ಪ. ೨೨—ಅದ್ರಿಗರ್ತ=ಬೆಟ್ಟ, ಕಣಿವೆ; ಪುಷ್ಕರ=ತಾವರೆ.

ಪ ೨೩—ವಿರಾಟ್=ಬಹುವಿಧದಲ್ಲಿ ಪ್ರಕಾಶಿಸುವ; ಆಂಗಿಕ=ದೇಹಸಂಬಂಧವಾದ, ಚೇಷ್ಟಿತ=ಕ್ರಿಯೆ.

ಪ. ೨೪—ರಾಮಣೀಯಕ=ಸೌಂದರ್ಯ; ವೀಚಿ=ಅಲೆ; ರಾಮೆಯರ್=ಚಿತ್ತಾಕರ್ಷಣೆಯನ್ನು ಮಾಡುವ ಸುಂದರಿಯರು; ಊಷ್ಮ=ಧಗೆ; ಸೇಕ=ತುಂತುರು (ಮಳೆ); ಆಮಯ=ರೋಗ.

ಪ. ೨೫—ನಾಕಭಾಷೆ=ಸ್ವರ್ಗದ ನುಡಿ; ಪ್ರತಿಭಾಷಿತ=ಜವಾಬು.

## ೧. ಶ್ರೀ ಚೆನ್ನ ಕೇಶವ

ಅ. ಪ.—ಸೌಂದರ್ಯಾರ್ಣವ=ಸೌಂದರ್ಯವೆಂಬ ಸಮುದ್ರ.

ಪ. ೧—ಸುಖರಾವಾ=ಸುಖಕರವಾದ ಶಬ್ದ.

ಪ. ೨—ಲಾಸ=ಕುಣಿತ; ಭಾಸ=ಹೊಳವು, (ಕಾಂತಿ).

ಪ. ೩—ಆವರ್ತನ=ತಿರುಗು; ನೇಮಿ=ಚಕ್ರದ ಹೊರಸುತ್ತು, ಹಳಿ; ಶಮ=ಶಾಂತಿ; ರಾಮಣೀಯಕ=ಸುಂದರ; ಕಾಮರೂಪ=ಇಚ್ಛಾರೂಪ.

## ೨. ತತ್ತ್ವ ಸೌಂದರ್ಯ

ಪಲ್ಲವಿ—ಪರಿವೇಶಂ=ಹೊರಪ್ರಾಕಾರ; ಸುತ್ತುಗಟ್ಟಿನ ಸೊಗಸು.

ಅನುಪಲ್ಲವಿ—ಪಾದಪ=ಗಿಡ; ನಿಷ್ಯಂದನ=ಒಸರಿಕೆ; ಮೂಲ=ಬೇರು; ಕಂದ=ಗಡ್ಡೆ; ವಿಕಾಸ=ಅರಳಿಕೆ.

ಪ. ೧—ಕೇಳಿ=ಆಟ.

ಪ. ೨—ಕ್ಷೀರಾಬ್ಧಿ=ಹಾಲಿನ ಸಮುದ್ರ; ಕಲ್ಪನಾಂಬುಧಿ=ಕಲ್ಪನೆಯೆಂಬ ಕಡಲು; ಕಂದರ್ಪ=ಮನ್ಮಥ; ಬಿನ್ನಣಿ=ಚದುರೆ.

ಪ. ೩—ತಾಣ=ಸ್ಥಳ.

ಪ. ೪—ರಾಗ=ಪ್ರೇಮ; ಲೇಸು=ಒಳ್ಳೆಯದು; ಸಂಯೋಗ=ಸೇರುವುದು; ರಾಗಿಣಿ=ಪ್ರಣಯಿನಿ.

ಪ. ೫—ಜ್ಞಾನೋಜ=ಜ್ಞಾನದ ಆಚಾರ್ಯ.

## ೩. ಧನ್ಯಮೂರ್ಧನ್ಯ

ಪಲ್ಲವಿ — ಮೂರ್ಧನ್ಯ=ಪ್ರಮುಖ, ಮಸ್ತಕಪ್ರಾಯ.

ಪ. ೧—ಸೂಸು=ಚೆಲ್ಲು; ಎಡರು=ತೊಂದರೆ; ಸನ್ನೆ=ಸಂಜ್ಞೆ.

ಪ. ೨—ಗಹ್ವರ=ಗುಹೆ; ಮ್ಲಾನ=ಬಾಡಿದ; ಸಂತ್ರಾಣಿಸು=ಶಕ್ತಿ (ಚೈತನ್ಯ)ಕೊಡು.

## ೪. ಮುಕುರ ಮುಗ್ಧೆ

ಪು. ೪೦—ಮುಗ್ಧೆ (ಮುಗುದೆ)=ಮೋಹಕ್ಕೊಳಗಾದವಳು, ಮೋಹಭ್ರಾಂತಳು. ಮುಕುರ=ಕನ್ನಡಿ; ಮಂದಸ್ಮಿತ=ಮುಗುಳ್ನಗೆ; ಪ್ರಹಿತ=ತುಂಬಪ್ರಿಯ; ಚಾಂದ್ರಮ=ಚಂದ್ರನ; ವಕ್ತ್ರರಾಗಂ=ಮುಖಕಾಂತಿ; ವೇಲ್ಲಿತ=ಅಲುಗಾಡುವ; ಬಂಧುರಾಂಗಂ=ಮನೋಹರವಾದ ಅವಯವ; ಕಂದರ್ಪದರ್ಪ=ಮನ್ಮಥನಿಗೆ ಹೆಮ್ಮೆಯುಂಟುಮಾಡುವುದು; ಪರಿಜೃಂಭ=ಅಧಿಕವಾದ; ದರ್ಪಣಾಸ್ತ್ರಂ=ಕನ್ನಡಿಯೆಂಬ ಅಸ್ತ್ರ.

ಪ. ೧—ಪೆರೆ=ಚಂದ್ರ; ಲಲಾಟ=ಹಣೆ; ಪರವಶೆ=ಮೈಮರೆವವಳು.

ಪ. ೨—ಸಾಜ=ಸಹಜ; ಬಿಬ್ಬೋಕ=ಬಿಂಕ; ತರಳಲೋಚನೆ=ಚಂಚಲನೇತ್ರೆ ಸ್ಮರತಂತ್ರನಯ=ಮನ್ಮಥ ತಂತ್ರದ ರೀತಿ; ಪರಿಕಿಸು=ಪರೀಕ್ಷಿಸು; ಗರುವ=ಹೆಮ್ಮೆ.

ಪ. ೩—ಆನನ=ಮುಖ; ತನ್ವಿ=ಕೋಮಲೆ, ತೆಳುಮೈಯವಳು.

## ೫. ಶುಕಭಾಷಿಣಿ

ಪು. ೪೨—ಶುಕಸಂಭಾಷಿಣಿ=ಗಿಳಿಯೊಂದಿಗೆ ಮಾತನಾಡುತ್ತಿರುವವಳು; ಹಾಸಿನಿ=ಸುಪ್ರಸನ್ನವಾದ ನಗೆಯುಳ್ಳವಳು; ಮುಕುಲಿತ ನಯನಾಭಿರಾಮೆ=ಮೊಗ್ಗಿನಂತೆ ಮುಚ್ಚಿರುವ ಕಣ್ಣಿನಿಂದ ಮನೋಹರವಾಗಿರುವವಳು; ಸಂಕೇತಕ=ರಹಸ್ಯ ಸೂಚನೆ; ದೂತಿ=ಸೇವಕಿ.

ಪಲ್ಲವಿ—ಮನೋಲ್ಲಾಸಿನಿ=ಮನಸ್ಸಿಗೆ ಸಂತೋಷವನ್ನುಂಟುಮಾಡುವವಳು.

ಅ. ಪ—ಕೀರಾಲಿ=ಗಿಳಿಯೆಂಬ ಸಖಿ; ಮಾರಾಂತರಂಗ=ಮನ್ಮಥ ರಹಸ್ಯ.

ಪ. ೧—ಗೋಪ್ಯ=ರಹಸ್ಯ, ಗುಟ್ಟು; ಕಾಂತ=ಪ್ರಿಯ; ಒಸಗೆ=ಉತ್ಸವ ವಾರ್ತೆ.

ಪ. ೨—ವನ್ಯ ಪ್ರವಾಸಿ=ಕಾನನ ಚರ(ಇಲ್ಲಿ ಗಿಳಿ) ; ಬೂಟಾಟ=ನಟನೆ ; ಬಣ್ಣಿಸು= ವರ್ಣಿಸು.

## ೬. ವಾಸಂತೀ

ಪು. ೪೪—ವಾಸಂತೀ=ಓಕುಳಿಯಾಟದಲ್ಲಿ ಅಭಿಲಾಷೆಯುಳ್ಳವಳು ; ರಾಕೇಂದು ಮುಖಿ=ಪೂರ್ಣಚಂದ್ರನಂತೆ ಮುಖವುಳ್ಳವಳು ; ವೆತೆ=ವ್ಯಥೆ, ಸಂಕಟ ; ಸ್ಮರಸಖಿ= ಮನ್ಮಥನ ಜೊತೆಗಾತಿ.

ಪಲ್ಲವಿ—ವಾಸಂತಕೇಳೀರತೇ=ಓಕುಳಿಯಾಟದಲ್ಲಿ ಸಂತೋಷವುಳ್ಳವಳೇ ; ರಾಸಿಕ್ಯ ದೀಕ್ಷಾವ್ರತೇ=ರಸಿಕತೆಯ ದೀಕ್ಷೆಯ ನೋಂಪಿಯನ್ನು ಕೈಗೊಂಡಿರುವವಳೇ.

ಅನು ಪಲ್ಲವಿ—ರಾಜತ=ಬೆಳ್ಳಿ; ಸೌವರ್ಣ=ಚಿನ್ನ; ವೇಣುಪ್ರಣಾಳಿ=ಬಿದಿರಿನ ಕೊಳವೆ; ಶೋಣಾಂಬುಧಾರೆ=ಕೆಂಪುನೀರಿನ ಧಾರೆ.

ಪ. ೧—ರಾಗಾಂಬು=ಕೆಂಪುನೀರು; ಸೇಕೋಪಯಂತ್ರ=ಸಿಂಚಿಸುವ ಸಾಧನ; ಯಾಗಾವಭೃಥ=ಯಜ್ಞಕಾರ್ಯ ಮುಗಿದ ಬಳಿಕ ಮಾಡುವ ಸ್ನಾನ.

## ೭. ಕೀರವಾಣಿ

ಪು. ೪೬—ಕೀರವಾಣಿ=ಮಾತನಾಡುವ ಗಿಳಿ; ಕೀರೋಕ್ತಿ=ಗಿಳಿಯ ಮಾತು; ಚಾರು ಪ್ರಭೆ=ಮನೋಹರವಾದ ಕಾಂತಿಯುಳ್ಳವಳು; ವಲ್ಲಭ=ಪ್ರಿಯ; ಸಾರು=ಹತ್ತಿರ ಸುಳಿ; ಮಾನಸ=ಮನಸ್ಸು.

ಪಲ್ಲವಿ—ದೂರು=ನಿಂದೆ.

ಅನುಪಲ್ಲವಿ—ಮಾರ=ಮನ್ಮಥ; ರಾಯಸ=ಪತ್ರ; ಶಾರಿಕೆ=ಗಿಳಿ.

ಪ. ೧—ಎರೆ=ನೀರೆರೆ; ವೀಳೆಯ=ತಾಂಬೂಲ

ಪ. ೨—ಒಸಗೆ=ಉತ್ಸವ; ಶುಕಿ=ಹೆಣ್ಣು ಗಿಳಿ.

## ೮. ಕಪಿ ಕುಪಿತೆ

ಪು. ೪೮—ಕಪಿ ಕುಪಿತೆ=ಕಪಿಯಿಂದ ಕೋಪಗೊಂಡವಳು; ಕಾಪಿಕ ವ್ಯಾಜ=ಕಪಿಯ ನೆವ; ಅಂತಸ್ತಾಪ=ಮನಸ್ಸಿನ ಬೇಗೆ; ವಿರಾಜಿಕುಂ=ಪ್ರಕಾಶಿಸುತ್ತದೆ.

ಪಲ್ಲವಿ—ಪ್ರೇಮಸ್ಮಿತಾನನೇ=ಪ್ರೇಮದ ನಗೆಮುಖವುಳ್ಳವಳೇ; ಮಂಗಮಾಣಿ=ಚಿಕ್ಕ ದಾದ ಕಪಿ.

ಪ. ೧—ಅಂಬರ=ಬಟ್ಟೆ; ಏಣಾಕ್ಷಿ=ಜಿಂಕೆಯ ಕಣ್ಣಿನಂತೆ ಕಣ್ಣುಳ್ಳವಳು; ಪೀನಾಂಗ=ಕೊಬ್ಬಿದ ಶರೀರ; ವಿಭ್ರಮ=ಬಳುಕು; ಧೂನನ=ಒದರುವುದು.

ಪ. ೨—ಸುಂದರಗಾತ್ರ=ಮನೋಹರವಾದ ಶರೀರ; ಸಿಂಧೂರ್ಮಿಮಾಲೆ=ಸಮುದ್ರದ ಅಲೆಗಳ ಮಾಲೆ; ಕಂದರ್ಪ=ಮನ್ಮಥ; ದೌತ್ಯ=ಸೇವಕಕಾರ್ಯ.

## ೯. ಲೀಲಾ ಕಿರಾತಿ

ಪು. ೫೧—ಕಿರಾತಿ=ಬೇಡರವಳು ; ಶಾರಿಯುಗ್ಮಂ=ಎರಡು ಸಾರಿಕಾ ಪಕ್ಷಿಗಳು ; ಮಾರತಿಗ್ಮಂ=ಮನ್ಮಥತಾಪ ; ಚಾರುಗಾತ್ರ=ಮನೋಹರವಾದ ಶರೀರ.

ಪಲ್ಲವಿ—ಚಾಪಹಸ್ತ=ಬಿಲ್ಲನ್ನು ಧರಿಸಿರುವ ಕೈ.

ಅನುಪಲ್ಲವಿ—ಪಕ್ಷಿಯುಗಳ=ಪಕ್ಷಿ ದಂಪತಿಗಳು ; ಚಾಪಲ್ಯವೀಕ್ಷೆ=ಚಪಲದ ನೋಟ.

ಪ. ೧—ತನುರಾಗ=ಅಂಗಕಾಂತಿ; ಮನಸಿಜ=ಮನ್ಮಥ; ದಯಿತೆ=ಪ್ರಿಯೆ; ಕಿನಿಸು=ಕೋಪ ; ಕರುಬು=ಅಸೂಯೆ.

ಪ. ೨—ಕೈರಾತ ವೇಷಿ=ಬೇಡರ ವೇಷವನ್ನು ಧರಿಸಿರುವವಳು.

## ೧೦. ಮಂಜು ಕಬರೀ

ಪು. ೫೨—ಮಂಜುಕಬರೀ=ಮನೋಹರವಾದ ಮುಡಿಯುಳ್ಳವಳು ; ವಿಭವಾಢ್ಯೆ=ವೈಭವವನ್ನುಳ್ಳವಳು ; ಲಸದ್ರೂಪ=ಕಾಂತಿಯುಳ್ಳ ರೂಪ.

ಪಲ್ಲವಿ—ಸ್ಮಿತಾಧರೀ=ನಗೆತುಟಿಯುಳ್ಳವಳು.

ಅನ ಪಲ್ಲವಿ—ರಾಜಮುಕುಟ=ರಾಜಕಿರೀಟ ; ಸುರಭಿ=ಸುವಾಸನೆ.

ಪ. ೧—ಕಾಶ್ಮೀರ=ಕೇಸರಿ ; ಅಗರು=ಗಂಧ ; ನಾಗಪಾಶ=ಹಾವಿನಂತೆ ಸುರುಳಿ ; ಹೆರಳು=ಜಡೆ.

ಪ. ೨—ಕಾಳಿರುಳು=ಕಪ್ಪಾದರಾತ್ರಿ ; ಕುರುಳು=ಕೂದಲು ; ಹೆಣಿಲು=ಜಡೆ ; ಕೊಪ್ಪು=ಎತ್ತಿಕಟ್ಟಿದ ಮುಡಿ ; ಮೌಳಿ=ತಲೆ.

## ೧೧. ಮುರಜಾಮೋದೆ

ಪು. ೫೪—ಮುರಜಾಮೋದೆ=ಢಕ್ಕೆಬಾರಿಸಿ ಸಂತೋಷಗೊಂಡವಳು ; ಕಿಂಕಿಣೀ=ಕಾಲಂದುಗೆ ; ಉತ್ತರಂಗ=ಮೇಲಕ್ಕೆದ್ದ ಅಲೆ, ಮೃಣಾಲ=ತಾವರೆಯ ದಂಟು.

ಅನುಪಲ್ಲವಿ—ಮೌರಜನಾದ=ಢಕ್ಕೆಯ ನಾದ.

ಪ. ೧—ಕಾಯ=ಶರೀರ.

ಪ. ೨—ಹೃದಾಗಾರ=ಎದೆಯೆಂಬ ಮನೆ ; ಮಾರಶೂರತೆ=ಮನ್ಮಥ ಪ್ರತಾಪ ; ಸ್ಮೇರವದನ=ನಗುಮುಖದವನು ; ಸನ್ನೆ=ಸಂಜ್ಞೆ.

## ೧೨. ಕಪಟ ಭೈರವಿ

ಪು. ೫೬—ಕಪಟ ಭೈರವಿ=ಭೈರವಿಯ ವೇಷ ಧರಿಸಿರುವವಳು ; ದಾರುಣ ದೀಕ್ಷೆ=ಕಠಿನ ವ್ರತ ; ನೀರೆ=ಹೆಂಗಸು.

ಪ. ೧—ಮಾರಭಿಕ್ಷೆ=ಮನ್ಮಥ ಭಿಕ್ಷೆ (ಪ್ರೇಮಭಿಕ್ಷೆ); ತಾರಳ್ಯ=ಚಂಚಲತೆ; ಸ್ಮೇರ ಕಪೋಲ=ನಗೆಯಿಂದ ಕೂಡಿದ ಕೆನ್ನೆ.

ಪ. ೨—ಮದಿರಲೋಚನೆ=ಮತ್ತೇರಿದ ಕಣ್ಣುಳ್ಳವಳು.

## ೧೩. ತಾಂಡವೇಶ್ವರಿ

ಪು. ೫೮—ತಾಂಡವೇಶ್ವರಿ=ತಾಂಡವನೃತ್ಯ ಮಾಡುವವಳು; ಡವಣೆ=ಡೋಲು; ಹವಣಾಗಿಸು=ಹೊಂದಿಸು; ಅವಲೋಕಿಸು=ನೋಡು; ಕಲಿ=ಧೀರಳು.

ಪಲ್ಲವಿ—ಜನಜಂಗುಳಿ=ಜನಸಮೂಹ.

ಅನುಪಲ್ಲವಿ—ಅಂಗಜವಾರ್ತೆ=ಮನ್ಮಥನ ಸುದ್ದಿ.

ಪ. ೧—ಇಂಚರ=ಸವಿದನಿ.

ಪ. ೨—ರಣಿತ=ಶಬ್ದ; ಜಾಗರಿತ=ಎಚ್ಚೆತ್ತ.

## ೧೪. ಮುರಳೀಧರೆ

ಪು. ೬೦—ಮುರಳೀಧರೆ=ಕೊಳಲನ್ನು ಹಿಡಿದಿರುವವಳು; ವೇಣುಸ್ವರ=ಕೊಳಲಿನ ನಾದ; ಯದುಪತಿ=ಯಾದವರ ಒಡೆಯನಾದ ಕೃಷ್ಣ.

ಪಲ್ಲವಿ—ಮದಿರಾಕ್ಷಿ=ಮತ್ತೇರಿದ ಕಣ್ಣುಳ್ಳವಳು; ಮುರಲೀನಾದ=ಕೊಳಲನಾದ.

ಅನುಪಲ್ಲವಿ—ತರಲಾಪಾಂಗ=ಚಂಚಲವಾದ ಕಡೆಗಣ್ಣನೋಟ; ಸ್ಮರಸಂಭ್ರಮ=ಮನ್ಮಥ ವೈಭವ.

ಪ. ೧—ಪವ್ವಳಿಸು=ಮಲಗು (ಪವಡಿಸು~ಪವಳಿಸು); ಪುಲಕಾಂಕುರ=ರೋಮಾಂಚ.

## ೧೫. ಗಾನಜೀವನೆ

ಪು. ೬೨—ಗಾನಜೀವನೆ=ಸಂಗೀತವೇ ಬದುಕಿನ ಭಾಗ್ಯವಾಗಿ ಇರುವವಳು; ಮಾನುಷ್ಯ ಹೃನ್ಮಧ್ಯ=ಮನುಷ್ಯರ ಹೃದಯದ ನಡುವೆ; ಬಂದಿ=ಸೆರೆ; ಓಳಿ=ಸಮೂಹ; ರಾಗಿಣಿ=ಪ್ರಣಯಿನಿ; ರಾಗಯೋಗ=ಗಾನಸಾಧನೆ.

ಪ. ೧—ಕಲಹಂಸಿ=ಹಂಸೆಯಂತೆ ಮೃದು—ಕೋಮಲವಾದ ಧ್ವನಿಯುಳ್ಳವಳು. ವಿವರಾಧರೆ=ತುಟಿದೆರೆದ; ವಿಲಸಿತ=ಪ್ರಕಾಶಮಾನವಾದ; ಅಧರ=ತುಟಿ; ಹೊನಲು=ಹೊಳೆ, ನದಿ. ಜಾಲಿಸು=ಜಾಲಾಡು; ಅಸು=ಪ್ರಾಣ.

## ೧೬. ಜಗನ್ಮೋಹಿನಿ

ಪು. ೬೪—ದೈತೇಯರು=ರಾಕ್ಷಸರು; ಕಣ್ಸೆಡಿ=ಆಕರ್ಷಿಸು; ಭೂತೇಶ=ಈಶ್ವರ; ನಿಃಸ್ಪೃಹ=ಆಶೆ ಇಲ್ಲದ.

ಪಲ್ಲವಿ—ಹಾಲಾಹಲ=ವಿಷ; ಈಂಟು=ಕುಡಿ.

ಅನುಪಲ್ಲವಿ—ಪೀಯೂಷ=ಅಮೃತ; ವಿತರಣೆ=ಹಂಚು; ದನುಜಕುಲ=ರಾಕ್ಷಸ ಕುಲ; ದೈವ್ಯ=ಶ್ರೇಷ್ಠ, ದೇವತಾರ್ಹವಾದ; ಅಮರತನು=ದೇವಶರೀರ.

ಪ. ೧—ಮೂಲೋಕ=ಸ್ವರ್ಗ, ಮರ್ತ್ಯ, ಪಾತಾಳ ಲೋಕಗಳು; ಮಾಯಾಬ್ಧಿ=ಮಾಯಾ ಸಮುದ್ರ; ಧೃತಿ=ಸ್ಥೈರ್ಯ; ಅಜ=ಬ್ರಹ್ಮ; ವೃಜಿನ=ಪಾಪ; ಸುಕೃತ=ಪುಣ್ಯ.

## ೧೭. ವೀಣಾಪಾಣಿ

ಪು. ೬೬—ಮಾಣಿಕ್ಯರಾಗ=ಮಾಣಿಕ್ಯದ ಕೆಂಬಣ್ಣ; ಅಂಚಿತ=ಕೂಡಿದ, ಅಂಟಿದ; ಅಂಗುಲೀಯ=ಉಂಗುರ; ಪ್ರಕ್ವಣ ನಿಕ್ವಣ ಕ್ವಣದ್ವೀಣಾರವ ಸ್ರೋತ=ವೀಣಾಧ್ವನಿಯ ಧಾರೆ.

ಪಲ್ಲವಿ—ಆನಂದಪ್ರದಾನೀ=ಆನಂದವನ್ನು ನೀಡುವವಳು.

ಪ. ೧—ಸೂಸು=ಚೆಲ್ಲು, ಬೀರು.

## ೧೮. ಕುಟಿಲ ಕುಂತಲೆ

ಪು. ೬೮—ಕುಟಿಲ ಕುಂತಲೆ=ಗುಂಗುರುಗುಂಗುರು ಕೂದಲುಳ್ಳವಳು; ಮಣಿಮುಕುರ=ರನ್ನಗನ್ನಡಿ; ಅಲಕ=ಮುಂಗೂದಲು.

ಪಲ್ಲವಿ—ಚಟುಲ=ಚಂಚಲ.

ಅನುಪಲ್ಲವಿ—ನಿಟಿಲ=ಹಣೆ; ತಟಿದುದಾರೆ=ಮಿಂಚಿನಂತೆ ದೊಡ್ಡದಾದ; ಚಾರು=ಮನೋಹರ.

ಪ. ೧—ಓಳಿ=ಸಮೂಹ; ಸಂಕಲೆ=ಸಂಕೋಲೆ, ಸರಪಣಿ; ಕೊಂಗು=ಬಾಗು; ಅಂಗಜಚಾಪ=ಮನ್ಮಥನ ಬಿಲ್ಲು; ಇಂಗಿತ=ಇಷ್ಟ; ಭುಜಂಗ=ವಿಟ.

## ೧೯. ರಸಿಕ ಶಬರಿ

ಪು. ೭೦—ರಸಿಕಶಬರಿ=ರಸಿಕಳಾದ ಬೇಡರವಳು; ಮಾಕಂದ=ಮಾವು; ಪಾಣಿ ಪಲ್ಲವ=ಚಿಗುರಿನಂಥ ಕೈ; ಸಾಕೂತಭಾವ=ಅರ್ಥವತ್ತಾದ ಭಾವ (ಪ್ರಣಯಪೂರ್ಣವಾದ ಭಾವ); ವಲ್ಗನ=ನೆಗೆತ, ಕುಣಿತ; ಲೋಕಪ್ರಜೋದ್ದೀಪಕ=ಲೋಕದ ಜನಗಳನ್ನು ಪ್ರಚೋದಿಸುವ; ಸಾಕೇತರಾಜ=ರಾಮಚಂದ್ರ.

ಪಲ್ಲವಿ—ಅಭಿನವ=ಹೊಸದಾದ; ಅರಸು=ಹುಡುಕು.

ಅನುಪಲ್ಲವಿ—ಯಮಿತೆ=ಸಂಯಮ, ತಪಸ್ವಿತನ; ಶ್ರಮಣಿತೆ=ಸಂನ್ಯಾಸಿತನ.

ಪ. ೧—ಪಲ್ಲವ=ಚಿಗುರು; ಮಿಸುನಿ=ಚಿನ್ನ; ರಸಾಲಫಲ=ಮಾವಿನ ಹಣ್ಣು.

## ೨೦. ವೀರಯೋಷಿತೆ

ಪು. ೭೨—ವೀರಯೋಷಿತೆ=ವೀರತರುಣಿ; ಸ್ಮೇರಾನನ=ನಗುಮುಖ; ಮಾರೇಂಗನ=ಮನ್ಮಥನ ಇಂಗಿತ.

## ೨೧. ಪುಂ ವಿಡಂಬಿನಿ

ಪು. ೭೪—ಪುಂ ವಿಡಂಬಿನಿ=ಪುರುಷನನ್ನು ಪರಿಹಾಸಮಾಡುವವಳು ; ವೆರ್ಥ=ವ್ಯರ್ಥ.

ಪಲ್ಲವಿ—ಕತ=ಕಾರಣ.

ಪ. ೧—ಆಸ್ಫಾಲಕಾರಿ=ಹೊಡೆಯುವವನು ; ಹೇಳನ=ಅಲ್ಲಗಳೆಯುವಿಕೆ ; ಓಲಗ=ಆಸ್ಥಾನ ; ಸಂಶ್ಲೀಲ=ಸಮುಚಿತ.

ಪ. ೨—ಸೀಸಕ=ಟೋಪಿ (ರುಮಾಲು); ಯೋಷೆ=ಯುವತಿ ; ಸಾಜ=ಸಹಜ.

## ೨೨. ನಾಟ್ಯನಿಪುಣೆ

ಪು. ೭೬—ಹರದಗ್ಧಸ್ಮರಭಸ್ಮ=ಈಶ್ವರನಿಂದ ದಹಿಸಲ್ಪಟ್ಟ ಮನ್ಮಥನ ಬೂದಿ; ಮರುತ್=ಗಾಳಿ ; ಕಣ=ಧೂಳಿನ ಕಾಳು.

ಪಲ್ಲವಿ—ನೈಪುಣೀ=ನಿಪುಣತೆಯುಳ್ಳವುಳು; ರಾಗಿಣೀ=ಅನುರಾಗವುಳ್ಳವಳು; ಚಿತ್ತಜ=ಮನ್ಮಥ ; ಆಗಮ=ಶಾಸ್ತ್ರ; ವ್ಯಕ್ತಹಾಸಿನೀ=ನಗುವನ್ನು ಪ್ರಕಟಿಸುವವಳು.

ಅನುಪಲ್ಲವಿ—ಮುರಲಿ=ಕೊಳಲು ; ಮುರಜ=ಮದ್ದಳೆ, ಸ್ವರಮೇಳನ=ಸ್ವರಸಂಗತಿ; ಪ್ರಮೋದ=ಸಂತೋಷ.

ಪ. ೧—ಒರೆ=ಹೇಳು ; ಸರಸಿಜಾಸ್ಯೆ=ಕಮಲಮುಖಿ ; ಅರಸು=ಹುಡುಕು.

## ೨೩. ರಾಗಯೋಗಿ

ಪು. ೭೮—ರಾಗಯೋಗಿ=ರಾಗಸಾಧಕಿ. ಕೇಶವಭಜನಾರಕ್ತಿ=ಕೇಶವನ ಭಜನೆಯಲ್ಲಿ ಪ್ರೀತಿ ; ಲೋಗರು=ಜನಗಳು.

ಪ. ೧—ಹದ=ಪಕ್ವತೆ ; ಅರಿ=ತಿಳಿ ; ಬಡಿತ=ಏಟು.

ಪ. ೨—ಈ=ಕೊಡು.

ಪ. ೩—ಮೋಹಪಟ=ಮೋಹದತೆರೆ; ಐಹಿಕ=ಭೂಲೋಕಕ್ಕೆ ಸಂಬಂಧಿಸಿದ್ದು ; ಏಣಿ=ನಿಚ್ಚಣಿಗೆ.

## ೨೪. ಸ್ವರ್ಗಹಸ್ತೆ

ಪು. ೮೦—ಸ್ವರ್ಗಹಸ್ತೆ=ಸ್ವರ್ಗದತ್ತ ಕೈತೋರುವವಳು ; ಭಾರ್ಗವೀರೂಪೆ=ಲಕ್ಷ್ಮಿ; ಮಾರ್ಗಣಶ್ರಮ=ಹುಡುಕುವ ಆಯಾಸ.

ಅನುಪಲ್ಲವಿ—ದಿವಿಜರು=ದೇವತೆಗಳು ; ಆಮೋದ=ಸಂತೋಷ ; ಭುವಿ=ಭೂಲೋಕ.

ಪ. ೧—ಮೇಳವಿಸು=ಕೂಡು.

ಪ. ೨—ಬಂಧುರೆ=ಮನೋಹರೆ ; ಬಂಧಮೋಕ್ಷ=ಬಂಧನದಿಂದ ಬಿಡುಗಡೆ ; ಆನಂದವಾಹಿನಿ=ಸಂತೋಷದ ನದಿ

## ೨೫. ಕೃತಕಶೂಲಿ

ಪು. ೮೨—ಕೃತಕಶೂಲಿ=ವೇಷಧರಿಸಿದ ರುದ್ರ; ಉದ್ಘೋಷಿಸು=ಸಾರಿ ಹೇಳು; ಕಪಾಲಿ=ಕಪಾಲವನ್ನು ಹಿಡಿದಿರುವ ಈಶ್ವರ; ರೌದ್ರಿ=ರುದ್ರನನ್ನು ಹೋಲುವವಳು.

ಪಲ್ಲವಿ—ಭಾಮಿನಿ=ಕಾಂತಿವಂತಳಾದ ಹೆಂಗಸು; ನಟನಪತಿ=ನಟರಾಜನಾದ ಈಶ್ವರ; ವಿಗಡ=ವಿಕಟರೂಪ.

ಪ. ೧—ಮಾರ=ಮನ್ಮಥ; ಸಹೃದಯ=ಸಮಾನಹೃದಯ; ಭವವೈರ=ಜನ್ಮದ್ವೇಷ; ಅಹಿತ=ಅಪ್ರಿಯ (ಶತ್ರುವಾದ ಈಶ್ವರ); ಅವಹಸಿಸು=ಅಣಕಿಸು; ಸುಹೃದ=ಒಳ್ಳೆಯ ಹೃದಯವುಳ್ಳವನು; ಪೊರೆ=ಕಾಪಾಡು; ತುಹಿನಕರನಿಭಾನನೆ=ಚಂದ್ರಮುಖಿ.

## ೨೬. ಜಯ ನಿಷಾದಿ

ಪು. ೮೪—ಜಯ ನಿಷಾದಿ=ಜಯಶೀಲಳಾದ ಬೇಡಿತಿ; ವನಗುಲ್ಮ=ಕಾಡಿನ ಪೊದೆ; ಬಿರುಬು=ಬಿರುಸು; ಅನುಚರಿ=ಜೊತೆಗಾತಿ; ರಾಮಣೀಯಕ=ಸೌಂದರ್ಯ; ಕುಂದು=ಕಾಂತಿಹೀನವಾಗು.

ಪಲ್ಲವಿ—ಕರಾಳ=ಭಯಂಕರ; ಸಾಹಸಿಕ=ಅಸಾರಶಕ್ತಿ; ಪೋಲ್=ಹೋಲು.

ಪ. ೧—ಈಡಾಡು=ಚೆದರಿಸು.

ಪ. ೨—ಕುಡಿನೋಟ=ಕಡೆಗಣ್ಣಿನ ನೋಟ; ಕಡುಗಲಿ=ಪರಾಕ್ರಮಿ; ಸೆಡೆ=ಬೀಗಿ.

ಪ. ೩—ಹುಲ್ಲೆ=ಜಿಂಕೆ; ಭಿಲ್ಲತಿ=ಬೇಡರವಳು.

ಪ. ೪—ಹೂಟ=ಉಪಾಯ; ಪೋಟಿ=ಸ್ಪರ್ಧೆ; ಬೇಟ=ಪ್ರಣಯ.

## ೨೭. ನಾಟ್ಯಸುಂದರಿ

ಪು. ೮೬—ಝಲ್ಲರೀ=ಕಂಚಿನ ಕೈತಾಳ; ಆಮೋದ=ಸಂತೋಷ; ಆನನ=ಮುಖ; ಉರಃಸ್ಥಲ=ಎದೆ; ವಲ್ಲರಾಗಾರ=ಲತಾಗೃಹ, ಬಳ್ಳಿಮಾಡ; ಚೇಟಿಕೆ=ದಾಸಿ; ಸಂವೀಕ್ಷಣ ನೋಟ.

ಪಲ್ಲವಿ—ಕಂದರ್ಪ=ಮನ್ಮಥ; ಧುರಂಧರಿ=ಭಾರ ಹೊತ್ತಿರುವವಳು.

ಅನುಪಲ್ಲವಿ—ವಿನ್ಯಾಸ=ಅಭಿನಯ; ಅಧರ=ತುಟಿ; ಹಾಸ=ನಗು; ನಯನ=ಕಣ್ಣು.

ಪ. ೧—ಮಾನಸ=ಮನಸ್ಸು; ಜಾನಿಸು=ಧ್ಯಾನಿಸು; ವಾಹಿನಿ=ನದಿ; ವೇಲ್ಲಿತ=ಅಲುಗಾಡುವ; ತನು=ಶರೀರ; ವಿದ್ಯೋತ=ಪ್ರಕಾಶ; ಕೌಸುಮ ಋತು=ವಸಂತಋತು.

## ೨೮. ಭಸ್ಮಮೋಹಿನಿ

ಪು. ೮೮—ಸಸ್ಮಿತಾನನ=ನಗುಮುಖ; ಭಸ್ಮಧೂಳಿ=ಬೂದಿಯ ಪುಡಿ; ಆಕುಲ=ಕಲಕಿ ಹೋಗಿರುವ, ತಳಮಳ; ಭಸ್ಮದೈತ್ಯ=ಭಸ್ಮಾಸುರ; ಮತ್ತ ನೃತ್ಯ=ಮೈಮರೆತ

ಕುಣಿತ; ವಿಸ್ಮೃತ=ಮರೆತು ಹೋದ; ಸ್ವಶೀರ್ಷ=ತನ್ನ ತಲೆ; ಸೋಂಕು=ಮುಟ್ಟು; ಸ್ವಕರಾಗ್ನಿ=ತನ್ನ ಕೈಯಲ್ಲಿಯ ಬೆಂಕಿ; ಭಸ್ಮ=ಬೂದಿ.

ಪಲ್ಲವಿ—ಸನ್ನಾಹ=ಏರ್ಪಾಡು.

ಅನುಪಲ್ಲವಿ—ಭಸ್ಮದಾನವ=ಭಸ್ಮಾಸುರ; ದಾಹಿಸಿ=ಸುಟ್ಟು.

ಪ. ೧—ಕಂಕಣ=ಕೈಬಳೆ; ಕಿಂಕಿಣಿ=ಕಾಲಂದುಗೆ; ರಣಿತ=ಶಬ್ದ; ಎರೆ=ನೀಡು, ನೀರು ಸುರಿ.

ಪ. ೨—ನಿರುಕಿಸು=ನೋಡು; ಚಾಟು=ಒಲಿಸಿಕೊಳ್ಳುವ ವಚನ.

ಪ. ೩—ವಾರಿನಿಧಿ=ಸಮುದ್ರ.

ಪ. ೪—ಧೂರ್ತ=ಮೋಸಗಾರ; ಚೇಷ್ಟಿತ=ಅಂಗಸಂಜ್ಞೆ; ಪಾರು=ಹಾರಿಹೋಗು; ಅಸು=ಪ್ರಾಣ; ಪೋರ=ತುಂಟ.

ಪ. ೫—ಸರಿ=ಸಮಾನ; ಸುಖಲೋಲೆ=ಸುಖದಲ್ಲಿ ಅಭಿಲಾಷೆಯುಳ್ಳವಳು; ಗಳಿಸು=ಸಂಪಾದಿಸು; ಅರಿ=ಶತ್ರು, ಸೋಂಕು=ಮುಟ್ಟು.

ಪ. ೬—ಉಲ್ಲಾಸ=ಸಂತೋಷ; ದಳ್ಳುರಿ=ದೊಡ್ಡ ಉರಿ.

ಪ. ೭—ರಾಮೇ=ಮನೋಹರೆ; ವಿಧಿ=ಬ್ರಹ್ಮ; ಶರ್ವ=ಈಶ್ವರ; ಧಾವಿಸು=ಓಡು; ಸುಖಸೀಮೆ=ಸುಖದ ಪರಮಾವಧಿ, ಸುಖದ ಅತ್ಯಂತ.

ಪ. ೮—ವಿಹಾರ=ವಿಲಾಸ, ವಿನೋದ; ನೀರೆ=ಹೆಂಗಸು; ಸಾರು=ಹೋಗು.

ಪ. ೯—ಪ್ರೀತೇ=ಪ್ರಿಯಳಾದವಳೆ; ಒಲವು=ಪ್ರೇಮ; ದಾತೆ=ನೀಡುವವಳು; ವಿದ್ಯೋತೆ=ಪ್ರಕಾಶಮಾನಳಾದವಳು; ಸುಧೆ=ಅಮೃತ; ಅಧರ=ತುಟಿ; ಸವಿ=ರುಚಿ ನೋಡು.

ಪ. ೧೦—ಮಾಣ್=ನಿಲ್ಲಿಸು, ಬಿಡು; ವ್ರತಚಾರಿಣಿ=ವ್ರತವನ್ನು ನಡೆಸುತ್ತಿರುವವಳು.

ಪ. ೧೧—ನೋಂಪಿ=ವ್ರತ; ಇಂಗಿತ=ಇಷ್ಟ.

ಪ. ೧೨—ಸುತೆ=ಮಗಳು; ಸ್ವಾಯತ್ತೆ=ಮತ್ತೊಬ್ಬರ ಅಧೀನದಲ್ಲಿಲ್ಲದವಳು (ಸ್ವತಂತ್ರಳು); ಪಶುಚೇಷ್ಟಿತ=ಪಶುಕ್ರಿಯೆ, ಹೀನವರ್ತನೆ; ವಿರಕ್ತೇ=ಅನಾಸಕ್ತೆ; ಈಡು=ಸಮಾನ.

ಪ. ೧೩—ಸುಶ್ರೋಣಿ=ಹೆಂಗಸು (ಪುಷ್ಟವಾದ ತೊಡೆಗಳುಳ್ಳವಳು); ಶುಕವಾಣಿ=ಗಿಳಿಯ ಧ್ವನಿಯುಳ್ಳವಳು; ಚಿತ್ತೇಶ್ವರಿ=ಮನಃಪ್ರಿಯೆ.

ಪ. ೧೪—ಪರಿಕಿಸು=ವಿಚಾರಿಸು.

ಪ. ೧೫—ಲಾಸ=ಕುಣಿತ; ಭಾಮೆ=ಹೆಂಗಸು; ಅರಿ=ತಿಳಿ; ಹಸಾದ=ಪ್ರಸಾದ.

ಪ. ೧೬—ವಂಕ=ಕೊಂಕು; ಬಲುಹುಗಾರ=ಗಟ್ಟಿಗ; ಗತಿ=ನಡಿಗೆ.

ಪ. ೧೭—ಎವೆ=ಕಣ್ಣರೆಪ್ಪೆ; ಸನ್ನೆ=ಸಂಜ್ಞೆ.

ಪ. ೧೮—ಬೀಡು=ನೆಲೆ; ಮುದ=ಸಂತೋಷ.

ಪ. ೧೯—ಲಘು=ಹಗುರ ; ಅಸ್=ತಾಳು ; ತ್ವರಿತ=ಬೇಗ.

ಪ. ೨೦—ಕಟಿ=ನಡುವು ; ಮಸ್ತಕ=ತಲೆ ; ಮುಕುಟ=ಕಿರೀಟ.

ಪ. ೨೨—ಕರಶಿಖಿ=ಕೈಬೆಂಕಿ ; ಊಷ್ಮ=ಶಾಖ ; ವಿಕೃತಾತ್ಮ=ವಿಕಾರಮನಸ್ಸಿನವನು ; ಕಾಪಟ್ಯ=ಮೋಸ.

ಪ. ೨೩—ವನಜಾಸನ=ಬ್ರಹ್ಮ ; ತನಿವಣ್=ರುಚಿಯಾದಹಣ್ಣು ; ಅರಸು=ಹುಡುಕು; ತೊರೆ=ಬಿಡು ; ಅನಲ=ಬೆಂಕಿ ; ಉಲ್ಮುಕ=ಕೊಳ್ಳಿ ; ವಿಧಿ=ಬ್ರಹ್ಮ ; ವಿಗಡ=ವಿಕಟ.

ಪ. ೨೪—ಚಯ=ಸಮೂಹ.

## ೨೯. ನೀಲಾಂಬರೆ

ಪು. ೯೬—ವೃಶ್ಚಿಕ=ಚೇಳು ; ವೇಷ್ಟಿಕ=ಬಟ್ಟೆ ; ಹೃಷ್ಟ=ಸಂತೋಷಪಟ್ಟ, ಜನವನ್ನು ಸಂತೋಷಪಡಿಸಿದ.

ಅನುಪಲ್ಲವಿ—ನೀಲಾಂಬರ=ಕಪ್ಪುಬಟ್ಟೆ; ಆಲಯ=ನೆಲೆ; ಅರುಹು=ಹೇಳು.

ಪ. ೧—ಹೇಮಾಂಗ=ಚಿನ್ನದಬಣ್ಣವುಳ್ಳ ಶರೀರ ; ಶ್ಯಾಮಾಂಬರ=ಕಪ್ಪುಬಟ್ಟೆ; ಛವಿ=ಕಾಂತಿ ; ಕ್ಷೌಮ=ರೇಷ್ಮೆಯ ವಸ್ತ್ರ ; ಭೀಮ=ಭಯಂಕರ ; ಉತ್ಪಾತ=ಆಕಸ್ಮಿಕ, ಅನಾಹುತ.

ಪ. ೨—ನಿಶ್ಚೇಲ=ಬಟ್ಟೆಯಿಲ್ಲದಂತೆ ; ಅಕ್ಷಿ=ಕಣ್ಣು ; ಸಿಂಗಾರ=ಶೃಂಗಾರ.

## ೩೦. ಹಾವ ಸುಂದರಿ

ಪು. ೯೮—ಹಾವ=ಅಭಿನಯ ; ಚಟುಲ=ಸುಂದರ ; ಭಂಗಿ=ನಿಲುವು ; ಜಾನು=ಮೊಣಕಾಲು ; ನಭ=ಆಕಾಶ; ನಿಭ=ಸದೃಶ, ಹೋಲುವ ; ತನುಮಧ್ಯಾ=ಬಡನಡುವಿನ; ಹೃದ್ಯ=ಹೃದಯಪ್ರಿಯವಾದ ; ಪರಿತೋಷ=ಸಂತೋಷ.

ಪ. ೧—ಭಾವಜ=ಮನ್ಮಥ ; ತೀವು=ತುಂಬು ; ಪರಿಯಿಸು=ಹರಿಸು.

ಪ. ೨—ಮೊಗ=ಮುಖ ; ಸಾಸಿರ=ಸಹಸ್ರ ; ಸೊಗ=ಸೊಗಸು ; ಸುಖ.

## ೩೧. ಶಕುನ ಶಾರದೆ

ಪು. ೧೦೦—ಅಜರಾಣಿ=ಬ್ರಹ್ಮನ ರಾಣಿಯಾದ ಸರಸ್ವತಿ; ಪಣೆಲಿಕ್ಕ=ಹಣೆಬರೆಹ.

ಪಲ್ಲವಿ—ಕೋವಿದೆ=ಪಂಡಿತೆ.

ಅನುಪಲ್ಲವಿ—ಮಸ್ತಕ ಲೇಖ್ಯ=ತಲೆಯಲ್ಲಿ ಬರೆದಿರುವುದು.

ಪ. ೧—ವಿಭ್ರಮ=ಅಲುಗಾಟ; ಮರ್ಮ=ಗುಟ್ಟು ; ಭೌಮ=ಪಂಚಭೂತಸಂಬಂಧವಾದ; ಕೂರ್ಮೆ=ಪ್ರೇಮ; ದೈವಜ್ಞಮೌಳಿಕೆ=ಜಾತಕ ಹೇಳುವುದರಲ್ಲಿ ಕಿರೀಟ ಪ್ರಾಯಳು.

## ೩೨. ವೀಟೀಧರೆ

ಪು. ೧೦೨—ವೀಟಿ=ವೀಳೆಯ ; ಶಶಿಸ್ಮಿತಳ್=ಚಂದ್ರನಂತೆ ನಗೆಯುಳ್ಳವಳು; ವೀಜನ=ಬೀಸಣಿಗೆ ; ಕುಶೀಲವ=ಗಾಯಕ-ನರ್ತಕರು ; ರಸಜ್ಞ=ರಸವನ್ನು ಬಲ್ಲವನು.

ಪಲ್ಲವಿ—ಚಾಟು=ಪ್ರಿಯೋಕ್ತಿ; ಪಾಟೀರ=ಗಂಧ; ಸಂಸಿಕ್ತ=ಬಳಿದ; ಚಮರೀ=ಚಾಮರವುಳ್ಳವಳು.

ಪ. ೧—ಊಳಿಗ=ಸೇವೆ; ಆಲವರ್ತ=ಬೀಸಣಿಗೆ; ಲೋಲದೃಶಾ=ಚಂಚಲವಾದ ನೋಟ; ತಂತು=ನೂಲು; ಜಾಲ=ಬಲೆ; ಲೋಗರ್=ಸಾಮಾನ್ಯಜನ.

ಪ. ೨—ಪರ್ಣ=ಎಲೆ; ಚೂರ್ಣ=ಸುಣ್ಣ; ಪೂಗ=ಅಡಕೆ; ಚೆಂಗೈ=ಕೆಂಪುಗೈ; ಪೂಸು=ಬಳಿ.

## ೩೩. ನಾಗವೈಣಿಕೆ

ಪು. ೧೦೪—ಚಿರಂತನ=ಶಾಶ್ವತ; ಆಲೋಲ=ತೂಗಾಡು; ಘೂರ್ಣನ=ಸುರುಳಿ ಸುರುಳಿಯಾಗಿ ತಿರುಗು, ತಿಕ್ಕಾಟ, ನುಗ್ಗಾಟ; ಪರಿಪಾಟಿ=ಕ್ರಮ.

ಪಲ್ಲವಿ—ಧೃತ=ಹಿಡಿದ; ಸ್ಮಿತ=ನಗು; ವಿದ್ಯುತ್=ಕಾಂತಿ; ಉನ್ಮೇಷಣ=ಕಣ್ತೆರೆದು ತೋರುವುದು; ಅತಿಮರ್ತ್ಯ=ಮನುಷ್ಯಪ್ರಾಣಿಯನ್ನು ಮೀರಿ, ಮರ್ತ್ಯಲೋಕಕ್ಕೆ ಅತಿಶಯವಾದ, ಮರ್ತ್ಯವನ್ನು ಮೀರಿದ; ಆಹ್ಲಾದಿನೀ=ಸಂತೋಷದಾಯಕಳು.

ಪ. ೧—ಮಂಜುಲ=ಮನೋಹರ; ಶಿಂಜಿತ=ಗೆಜ್ಜೆಯ ನಾದ; ಭಣಿತ=ಮಾತು.

ಪ. ೨—ಪೃಥ್ವೀಮನ್ಮಥಿನೀ=ಮನುಷ್ಯರಿಗೆ ಸಾಕ್ಷಾತ್ತಾಗಿ ಬಂದ ರತಿದೇವಿ; ನಿತ್ಯ ಸಂಸರಿಣೀ=ನಿತ್ಯ ಚಲನವುಳ್ಳವಳು, ನಿತ್ಯ ಸಂಸಾರಕ್ಕೆ ಕಾರಣಳಾದವಳು; ಧೂರ್ತ=ಪ್ರಣಯಪಟು.

## ೩೪. ಭೂಷಣಪ್ರಿಯೆ

ಪು. ೧೦೬—ತರಣಿ=ಸೂರ್ಯ; ಅಂಗರುಚಿ=ಶರೀರಕಾಂತಿ; ಕರವಲಯ=ಕೈಬಳೆ.

ಪ. ೨—ಪಂಚರೆ=ಸೇವಕಿ; ಕುರುವಿಂದ=ಮಾಣಿಕ್ಯ.

## ೩೫. ಕೇಳೀನಿರತೆ

ಪು. ೧೦೮—ಕೇಳೀನಿರತೆ=ಆಟದಲ್ಲಿ ಮಗ್ನಳಾಗಿರುವವಳು; ವೇಣು=ಕೊಳಲು; ಬಾಜಿಸು=ಬಾರಿಸು; ಬಾನ್=ಆಕಾಶ; ವಾಣಿನಿ=ನರ್ತಕಿ; ಎಸಗು=ಮಾಡು.

ಪಲ್ಲವಿ—ಸೂಸು=ಚೆಲ್ಲು; ಸನ್ನುತಮತಿ=ಶ್ಲಾಘ್ಯವಾದ ಬುದ್ಧಿಯುಳ್ಳವಳು.

ಅನುಪಲ್ಲವಿ—ಚಲ=ಹಟ.

ಪ. ೧—ಸುಪ್ತಿ=ನಿದ್ರೆ; ವ್ಯತ್ಯಾಸ=ಬದಲಾವಣೆ.

ಪ. ೨—ಸಾಂತ್ವನ=ಮನಸ್ಸಿಗೆ ಸಮಾಧಾನ; ವಂಶೀ=ಕೊಳಲು, ಕೊಳಲು ಹಿಡಿದವನು; ಕಂಸನಿಸೂದಿ=ಕಂಸಮರ್ದನ; ಪ್ರಾಂಶು=ಉನ್ನತ; ಉಪಾಂಶು=ಪಿಸುಮಾತು, ಪಿಸುದನಿಯ ಜಪ.

## ೩೬. ಕೊರವಂಜಿ

ಪ. ೧೧೦—ಶರದೈಂದವಹಾಸ=ಶರತ್ಕಾಲದ ಚಂದ್ರನ ನಗೆ; ಕರಣ=ಸಾಧನ.

ಪಲ್ಲವಿ—ಪಟು=ಸಮರ್ಥ.

ಅನುಪಲ್ಲವಿ—ಸ್ಮರ=ಮನ್ಮಥ.

ಪ. ೨=ಈಶ ತಾಂಡವ=ಈಶ್ವರನ ತಾಂಡವ ನೃತ್ಯ; ರಾಸ=ಒಂದು ತೆರನಾದ ನೃತ್ಯ, ಕೂಗಿಕೊಂಡು ಹಾಡುವ ನೃತ್ಯ.

## ೩೭. ಕೀಶರುಷ್ಟೆ

ಪು. ೧೧೨—ಕೀಶರುಷ್ಟೆ=ಕಪಿಯಿಂದ ಕೋಪಗೊಂಡವಳು; ಪೀನಾಂಗ=ಬಲಿತ ಶರೀರ; ವ್ಯಾಧೂನ=ಒದರಾಟ.

ಪಲ್ಲವಿ—ಸ್ಮರಪಂಜರ ಶುಕಿ=ಮನ್ಮಥನ ಪಂಜರದಲ್ಲಿನ ಗಿಳಿ.

ಅನುಪಲ್ಲವಿ—ಕೀಶಲೀಲೆ=ಕಪಿಲೀಲೆ; ಪರಿಹಾಸ=ವಿನೋದ.

ಪ. ೧—ದ್ರುಯಷ್ಟಿ=ಮರದ ಕೋಲು.

## ೩೮. ಪಾದಾಂಗುಳೀಯೆ

ಪು. ೧೧೪—ಪಾದಾಂಗುಳೀಯೆ=ಕಾಲುಂಗುರದವಳು; ಸುರುಚಿ=ಒಳ್ಳೆಯ ಕಾಂತಿ; ಸಂಸ್ಫುರಿಸು=ಕಂಪಿಸು; ಮಾಧವೀವಲ್ಲಿ=ಮಾಧವೀಲತೆ.

ಅನುಪಲ್ಲವಿ—ಲೋಲಾಂಗ=ಅಲುಗಾಡುವ ಅವಯವ; ವಲ್ಲಿ=ಬಳ್ಳಿ: ಗುಚ್ಛ=ಗೊಂಚಲು.

ಪ. ೧—ಚಾರು=ಮನೋಹರ; ವಾಮಾಂಘ್ರಿ=ಎಡಪಾದ; ಚಾರೆ=ಸೇವಕಿ; ಧಾರಯೆನ್ಲ=ತೊಡಿಸಲು; ಓರಡಿ=ಒಂಟಿ ಹೆಜ್ಜೆ.

ಪ. ೨—ರಾಕೇಂದುಮುಖಿ=ಪೂರ್ಣಚಂದ್ರನಂತೆ ಮುಖವುಳ್ಳವಳು; ನಾಕವಾಸಿಗಳು=ಸ್ವರ್ಗದಲ್ಲಿ ವಾಸಿಸುವ ದೇವತೆಗಳು; ಸಾಧಿಪುದು=ಪಡೆಯುವುದು.

## ೩೯. ವಿಕಟ ನರ್ತಿನಿ

ಪು. ೧೧೬—ಕೇಶ=ಕೂದಲು; ಸಾಜತೆ=ಸಹಜತೆ.

ಪ. ೧೧೭—ಕೊಪ್ಪು=ಮುಡಿ; ಕಾಲಾಳಿ=ಸೈನಿಕ (ಪದಾತಿ, Soldier)

## ೪೦. ಗಾಂಧರ್ವದೇವಿ

ಪು. ೧೧೮—ಮೋಹನಾಂಬುಧಿ=ರಮಣೀಯತೆಯ ಸಮುದ್ರ; ಉತ್ತರಂಗ=ಮೇಲಕ್ಕೆದ್ದ ಅಲೆ; ರೋಹಿಣೀಪ್ರಿಯ=ಚಂದ್ರ; ವಕ್ತ್ರ=ಮುಖ; ಈಹಿತಳ್=ಪ್ರಿಯಳು; ನಾಕನರ್ತಕಿ=ಸ್ವರ್ಗಲೋಕದ ನರ್ತಕಿ.

ಪಲ್ಲವಿ—ಸನ್ನಿಧಾನ=ಸಾಮೀಪ್ಯ; ನಿದಾನ=ಮೂಲಕಾರಣ.

ಪ. ೧—ಶಂಪಾ=ಮಿಂಚು; ಲಸತ್=ಪ್ರಕಾಶ; ಚಾಂಪೇಯಗಾತ್ರೀ=ಸುವರ್ಣ ಕಾಂತಿಯುಳ್ಳ ಶರೀರವುಳ್ಳವಳು; ಚಂಪಕ=ಸಂಪಿಗೆ; ಬಂಭರ=ದುಂಬಿ; ಕೈಶಿಕ= ಕೂದಲು; ಅಂಭೋಜಭವ=ಬ್ರಹ್ಮ.

ಪ. ೨—ಸಾರಸಿ ಸರ=ಕಮಲದ ಕೊಳ; ಅಲಂಪು=ಸಂತೋಷ; ಶಾರಿ=ಗಿಳಿ; ರಸಾಲ=ಮಾವು; ಎರಗಿ=ಕುಳಿತು; ಪಾರು=ಹಾರು.

ಪ. ೩—ಅಜ=ಬ್ರಹ್ಮ.

ಪ. ೪—ಅಳಿ=ನಾಶ.

ಪ. ೫—ನಿಸ್ವಾನ=ಶಬ್ದ; ಹೃದ್ಯ=ಪ್ರಿಯ; ಮಾದ್ಯ=ಮೈಮರೆಯುವುದು.

## ೪೧. ಲಾಸೋತ್ಸವೆ

ಪು. ೧೨೦—ಧ್ವಜಿನಿ=ಪತಾಕೆ (ಬಾವುಟ) ಯಂತಿರುವವಳು; ವಿಜಿತ=ಗೆದ್ದ; ವಲ್ಲಭ=ಪ್ರಿಯ.

ಪಲ್ಲವಿ—ಏಸುಕಾಲ=ಎಷ್ಟುಕಾಲ.

ಪ. ೧—ಪ್ರತೀಕ್ಷಣೆ=ಎದುರುನೋಡುತ್ತಿರುವವಳು; ತಾಳುವೆ=ಸಹನೆ.

ಪ. ೨—ಕೇಳಿ=ಆಟ; ಲೋಲಾಂಬಕೆ=ಚಂಚಲವಾದ ಕಣ್ಣುಳ್ಳವಳು.

## ೪೨. ಶುಕಸಖಿ

ಪು. ೧೨೨—ಶುಕಿ=ಹೆಣ್ಣುಗಿಳಿ; ಮನುಕುಲ=ಮನುಷ್ಯರು; ಅಕಲಂಕಿತೆ= ನಿರ್ದೋಷಿ.

ಪಲ್ಲವಿ—ಕೆಳೆಯ=ಗೆಳೆಯ, ಒಡನಾಡಿ; ಅರಸು=ಹುಡುಕು; ಮರುಳುಗೊಳ್= ಮನಸೋಲು.

ಪ. ೧—ರೋಸಿಪೋಗು=ಜುಗುಪ್ಸೆಪಡು; ಉಲಿ=ಮಾತು.

ಪ. ೨—ಶುಕಭಣಿತ=ಗಿಳಿಯಮಾತು; ಪಿಕ=ಕೋಗಿಲೆ; ರುಚಿ=ಕಾಂತಿ.

## ೪೩. ಉಲ್ಲಾಸಿನಿ

ಪು. ೧೨೪—ಉಲ್ಲಾಸಿನಿ=ಸಂತೋಷವುಳ್ಳವಳು; ಆಯತ=ವಿಸ್ತಾರ, ಉದ್ದ; ಅನನ್ಯ=ಇತರರಿಗಿಲ್ಲದ; ಪ್ರತೀಕ=ವಿಗ್ರಹ; ಘನಿಷ್ಠ=ಗಟ್ಟಿಯಾಗು.

ಪಲ್ಲವಿ—ಜಾಲ=ಬಲೆ.

ಪ. ೧—ಕುಂಚಿತ=ಬಾಗಿದ; ಅಂಚಿತ=ಪ್ರಕಾಶಮಾನ; ಪ್ರಪಂಚಿತ ಹಸನ=ವ್ಯಕ್ತ ಪಟ್ಟ ನಗು; ಕಾಂಚೀಸ್ವನನ=ಡಾಬಿನ ಶಬ್ದ; ಪಂಚಶರ=ಮನ್ಮಥನ ಐದು ಬಾಣಗಳು.

## ೪೪. ಭಾವದೇವಿ

ಪು. ೧೨೬—ಜೀವಮಾತೃಕೆ=ಜೀವಾಧಾರಳು; ಸಖ್ಯಸೇತು=ಸ್ನೇಹವೆಂಬ ಸೇತುವೆ; ವಿಧಾಯಿನೀ=ನಿಯಾಮಕಳು; ಸೀಮೆ=ಮೇರೆ.

ಅನುಪಲ್ಲವಿ—ತಾವು=ಸ್ಥಳ, ಎಡೆ.

ಪ. ೧—ನೇಹ=ಸ್ನೇಹ; ಈಹಾ=ಆಸೆ; ದಾಹಿಸೆ=ಸುಡಲು.

## ೪೫. ವೇಣೀಸಂಹಾರೆ

ಪು. ೧೨೮—ವೇಣೀಸಂಹಾರೆ=ಮುಡಿ ಕಟ್ಟುತ್ತಿರುವವಳು; ಮಡಿ=ಸಾವು; ಕುರುಳು=ತಲೆಗೂದಲು; ಪೆಣಿಲ್=ಮುಡಿ, ಜಡೆ; ಅರಿ=ತಿಳಿ; ವಿಹಾರಿಯರ್=ವಿಲಾಸಿನಿಯರು.

ಪಲ್ಲವಿ—ಸಂಹಾರ=ಒಟ್ಟುಗೂಡಿಸಿ ಕಟ್ಟು; ಏಣಾಂಕ=ಚಂದ್ರ; ಗೌರ=ಬಿಳುಪು.

ಅನುಪಲ್ಲವಿ—ಶೋಣಬಿಂಬಾಧರೆ=ಕೆಂಪುದುಟಿಯುಳ್ಳವಳು, ಚೆಂದುಟಿಯುಳ್ಳವಳು; ಕಾಲೀಯ=ಕಪ್ಪಾದ; ಚಿಕುರ=ಮುಂಗುರುಳು.

ಪ. ೧—ದ್ರುಪದಾತ್ಮಜೆ=ದ್ರೌಪದಿ; ಶಪಥ=ಪ್ರತಿಜ್ಞೆ; ಗೈದು=ಮಾಡಿ; ಕಬರಿ=ಮುಡಿ; ಕೃಪಣ=ಜಿಪುಣ; ತಪನ=ಕುದಿ, ತಾಪ; ಅಣಗಿಸು=ಹೋಗಲಾಡಿಸು, ನಿವಾರಿಸು; ಹೃದ್ವನ=ಹೃದಯವೆಂಬ ವನ; ತಣಿವು=ತೃಪ್ತಿ, ತಂಪು; ಎರೆ=ನೀಡು, ಸುರಿ; ಅನುರಾಗ ವರ್ಷ=ಪ್ರೇಮದ ಮಳೆ; ಒಲವು=ಪ್ರೇಮ; ಗಳಿಸು=ಪಡೆ.

## ೪೬. ನೃತ್ಯ ಸರಸ್ವತಿ

ಪು. ೧೩೦—ಹೃದಯ ಭಾಷಿಕೆ=ಹೃದಯದ ಮಾತು; ಕರ್ಣದೃಶೆಗಳ=ಕಿವಿ ಮತ್ತು ಕಣ್ಣುಗಳ; ಕುತುಕ=ಕುತೂಹಲ; ತೂರ್ಣ=ತ್ವರೆ; ಅವಿರಳ=ಅವಿಚ್ಛಿನ್ನ, ಅಡ್ಡಿಯಿರದ; ಅರ್ಣವಜೆ=ಲಕ್ಷ್ಮಿ; ಚಿದ್ದ್ಯುತಿ=ಜ್ಞಾನಪ್ರಭೆ; ಜೀವರಸಜೆ=ಜೀವರಸದಲ್ಲಿ ಹುಟ್ಟಿದವಳು.

ಪಲ್ಲವಿ—ವಿಭೂತಿ=ಮಹಿಮೆ; ಕಲಾದ್ಯುತಿ=ಕಲೆಯ ಕಾಂತಿ; ಆಮೋದಿನಿ=ಸಂತೋಷದಾಯಿನಿ.

ಪ. ೨—ಹೃದ್ಭಾಷ್ಯಮೂರ್ತಿ=ಹೃದಯದ ಭಾಷ್ಯಕ್ಕೆ ಸಾಕಾರ ಸ್ವರೂಪಳು; ರಕ್ತಿ=ಪ್ರಿಯಕರ.

## ೪೭. ನೃತ್ಯೋನ್ಮತ್ತೆ

ಪು. ೧೩೨—ಅಭೀಪ್ಸನಾರೆ=ಪ್ರಿಯನಾದವನು ಯಾರೆ? ಲಾಸನೇ=ಲಾಸ್ಯವಾಡುವಳೆ.

ಪಲ್ಲವಿ, ಅನುಪಲ್ಲವಿ—ಚಿತ್ತಜ=ಮನ್ಮಥ; ಪುತ್ತಳಿ=ಗೊಂಬೆ, ಬೊಂಬೆ.

ಪ. ೨—ಕಜ್ಜಲ=ಕಾಡಿಗೆ; ಪೊಗರು=ಕಾಂತಿ.

## ೪೮. ವಿರಹಾರ್ತೆ

ಪಲ್ಲವಿ–ತೊರೆ=ಬಿಡು.

ಪ. ೧–ಇಂಗಿತಾರ್ಥ=ಅಂತರಂಗದ ಅಪೇಕ್ಷೆ; ಗಣಿಸು=ಲೆಕ್ಕಿಸು; ಕಾಂಕ್ಷೆ=ಆಸೆ.

## ೪೯. ಚಾರುಹಾಸಿನಿ

ಅನುಪಲ್ಲವಿ—ಕೇಳಿ=ಆಟ; ಕೆಳೆ=ಜೊತೆ.

ಪ. ೧—ಚಾರುಹಾಸಿನಿ=ಮನೋಹರವಾದ ನಗೆಯುಳ್ಳವಳು; ಸಾರಜ್ಞ=ಸಾರವತ್ತಾದುದನ್ನು ಬಲ್ಲವನು; ಗಾರುಡಿ=ಮಂತ್ರ.

ಪ. ೨—ವಾಸವ=ದೇವೇಂದ್ರ.

## ೫೦. ಪ್ರಣಯವಂಚಿತೆ

ಅನುಪಲ್ಲವಿ—ಸಾವಾಸ=ಸಹವಾಸ.

ಪ. ೧—ಕುಡಿನೋಟ=ಕೊಂಕುನೋಟ.

ಪ. ೨—ಮಲರ್=ಹೂವು; ಚೆಲುವು ಬಿಕಾಶಿ=ಸೌಂದರ್ಯ ಭಿಕ್ಷೆಯನ್ನು ಬೇಡುವವನು.

## ೫೧. ಕಲಹಾಂತರಿತೆ

ಕಲಹಾಂತರಿತೆ=ಜಗಳವಾಡಿ ದೂರವಾದವಳು.

ಪಲ್ಲವಿ—ಮುಳಿ=ಕೋಪ.

ಪ. ೨—ಬಿನದ=ವಿನೋದ; ಇನಿಮದ್ದು=ಪ್ರಿಯವಾದ ಔಷಧ.

ಪ. ೩—ಮಲರಂಬು=ಪುಷ್ಪಬಾಣ; ಕೆಳೆ=ಸ್ನೇಹ.

## ೫೨. ವಿಲಾಸಿಕೆ

ಪಲ್ಲವಿ—ವಿಲಾಸಿಕೆ=ವಿಲಾಸವುಳ್ಳವಳು; ಶಾರಿಕೆ=ಗಿಳಿ, ಲಾಸಿಕೆ=ನರ್ತಕಿ.

ಅನುಪಲ್ಲವಿ—ಚಿರಕಾಲ=ನಿರಂತರವಾಗಿ.

ಪ. ೧—ವೃಷ್ಟಿ=ಮಳೆ.

## ೫೩. ನೃತ್ತಹಾಸಿನಿ

ಪಲ್ಲವಿ—ಮತ್ತಕಾಶಿನೀ=ಪ್ರಮದೆ; ನೃತ್ತಹಾಸಿನಿ=ಕುಣಿತದ ನಗೆಯುಳ್ಳವಳು; ಚಿತ್ತಜೋತ್ಸವ=ಕಾಮನ ಉತ್ಸವ; ಪ್ರತ್ಯವೇಕ್ಷಿಣೀ=ಎದುರುನೋಡುವವಳು.

ಪ. ೧—ಇಂಬು=ಇಂಪು; ಹೊನ್ನು=ಚಿನ್ನ; ಎಸಕ=ಕಾಂತಿ.

ಪ. ೨—ಸ್ವರ್ಣಕಿಂಕಿಣೀ=ಚಿನ್ನದ ಗೆಜ್ಜೆಯುಳ್ಳವಳು; ಶಿಂಜಿತಸ್ವನೀ=ಕಿಣಿಕಿಣಿನಾದವುಳ್ಳವಳು; ತೂರ್ಣ=ಬೇಗ.

## ೫೪. ಚಕ್ರವಾಕಿ

ಅನುಪಲ್ಲವಿ—ಗಳಹು=ಹರಟು, ಕೊಚ್ಚು.

ಪ. ೨—ವಿಕ್ಲಬ=ದುಃಖ.

ಪ. ೩—ಸಾಕೂತಲೋಚನಂ=ಅರ್ಥವತ್ತಾದ ಕಣ್ಣುಳ್ಳವನು, ಪ್ರಿಯವಾದ ಕಣ್ಣುಳ್ಳವನು ; ಲೋಕಪ್ರಮೋಹನಂ=ಲೋಕಕ್ಕೆ ಮೋಹವುಂಟುಮಾಡುವವನು.

## ೫೫. ಪ್ರಣಯಕುಪಿತೆ

ಪ. ೨—ಕಪಟಿ=ಮೋಸಗಾರ ; ಕೃಪಣ=ಜಿಪುಣ ; ಕುಪಿಸು=ಕೋಪಗೊಳ್ಳು ; ತಪಿಸು=ಸಂತಾಪಪಡು.

## ೫೬. ಲತಾಂಗಿ

ಅನುಪಲ್ಲವಿ—ಲಾಲಿಸು=ಮುದ್ದಿಸು.

ಪ. ೧—ಹೃದಯವಾರಿಧಿ=ಹೃದಯ ಸಮುದ್ರ ; ಭುವನ=ಪ್ರಪಂಚ.

ಪ. ೨—ಕಟ್ಟಡವಿ=ದಟ್ಟವಾದ ಅರಣ್ಯ ; ಭವ=ಜನ್ಮ, ಸಂಸಾರ ; ಸೊಗ=ಸಂತೋಷ, ಸುಖ ; ದೀವಿಗೆ=ದೀಪ ; ತೀವು=ತುಂಬು.

## ೫೭. ಸುಮಬಾಣ

ಪ. ೧—ಕೌಸುಮಬಾಣ=ಮನ್ಮಥ ; ಕಂಟಕ=ಮುಳ್ಳು.

ಪ. ೨—ವಾಮನೇತ್ರ=ಎಡಗಣ್ಣು.

ಪ. ೪—ಕಿಸಲಯ=ಚಿಗುರು

ಪ. ೫—ಹರಣ=ಪ್ರಾಣ ; ಶಿಖಿ=ಬೆಂಕಿ.

## ೫೮. ರತಿಮನ್ಮಥ

ಪು. ೧೪೪—ವಿಕೃತಿ=ವಿಕಾರ ; ಸಂತಸವಡಿಸು=ಸಂತೋಷಪಡಿಸು ; ವೈವಸತ=ಯಮಧರ್ಮರಾಯ.

ಪಲ್ಲವಿ—ಮಾರ=ಮನ್ಮಥ.

ಪ. ೧—ಚಾಪ=ಬಿಲ್ಲು ; ಮಂಜು=ಮನೋಹರ ; ಹಾಸ=ನಗು ; ಪಾರಾವಾರ=ಸಮುದ್ರ ; ತೃಣಲಘು=ಹುಲ್ಲಿನಂತೆ ಹಗುರ ; ಭವಭಾರ=ಜಗತ್ತಿನ ಭಾರ ; ವಿತತ=ವಿಶಾಲ, ಹರಡಿದ ; ವಿಧಾತ=ಬ್ರಹ್ಮ.

ಪ. ೨—ನೇತ್ರಶಿಖಿ=ಕಣ್ಣಿನ ಬೆಂಕಿ ; ಸ್ಮರ=ಮನ್ಮಥ ; ಪುರವೈರಿ=ಈಶ್ವರ ; ಮಾದನ=ಮೈಮರೆಸುವುದು ; ನಿಸರ್ಗ=ಪ್ರಕೃತಿ.

## ೫೯. ಜಯವಿಶ್ವಮೋಹನ

ಪಲ್ಲವಿ—ಪಾವನ=ಪವಿತ್ರ.

ಪ. ೧—ರಹಸ್ಯ=ಗುಟ್ಟು; ಮಂಜುಹಸಿತಾಸ್ಯ=ಮನೋಹರವಾದ ನಗೆಮುಖ.

ಪ. ೨—ಕವಿತಾಗ್ರವರ್ತಿ=ಕವಿತೆಯಲ್ಲಿ ಮೂಲಪುರುಷ; ಭವತಾಪ=ಸಂಸಾರದ ಬೇಗೆ.

## ಮನ್ಮಥ

ಪು. ೧೪೭—ಸುಮಸಾಯಕ=ಪುಷ್ಪಬಾಣ; ಕಮನೀಯ=ಪ್ರಿಯವಾದ; ರುಚಿ=ಕಾಂತಿ; ಪರಿಖೇಲ=ಆಟ; ಉಲ್ಲಸಿತ=ಸಂತೋಷ.

## ೬೦. ಮಂಗಳಂ

ಪಲ್ಲವಿ—ಶಿವ=ಮಂಗಳ.

ಅನುಪಲ್ಲವಿ—ವಿಧಾಯಿಕೆ=ವಿಧಿಸುವವಳು.

ಪ. ೧—ದ್ಯುತಿ=ಕಾಂತಿ; ಕಾಯ=ಶರೀರ; ಜಾಯೆ=ಹೆಂಡತಿ.

ಪ. ೨—ಅಂಕುರ=ಮೊಳಕೆ

## ಸೌಂದರ್ಯವಿಜಯಂ

ಪ. ೧—ದಯಿತೆ=ಪ್ರಿಯೆ; ಆಕೂತ=ಅಭೀಷ್ಟ.

ಪ. ೨—ಎಳಸು=ಬಯಸು.

ಪ. ೩—ನ್ಯೂನ=ಕೊರತೆ; ಉನ್ಮೀಲಿತ=ಕಣ್ತೆರೆದಿರುವುದು; ಹೃನ್ಮಾಧುರೀಸಾರ=ಹೃದಯದ ಸವಿಯ ತಿರುಳು; ಈಂಟು=ಕುಡಿ.

ಪ. ೪—ಅಚ್ಛ=ಸ್ವಚ್ಛ, ಶುದ್ಧ; ನೇತ್ರದೀಪ್ತಿ=ಕಣ್ಣಿನ ಕಾಂತಿ; ಆರ್ದ್ರ=ತೇವವಾಗು; ಹಾರ್ದಿಕ=ಪ್ರಿಯವಾದ; ನಾಡೋಜ=ನಾಡಿನ ಒಡೆಯ.

ಪ. ೫—ಸಾಂದ್ರ=ದಟ್ಟವಾದ; ಆಮೋದ=ಸಂತೋಷ; ವಾಂಛಾಬಂಧ=ಅಪೇಕ್ಷೆಯ ಕಟ್ಟು, (ಆಶಾಪಾಶ); ವಾಂಛಾಕರ=ಅಪೇಕ್ಷೆ ಉಂಟುಮಾಡುವ; ವಾಂಛಕ=ಅಪೇಕ್ಷಕ; ಆಮ್ನಾಯರಾಗ=(ಕೇಶವ ವಿಷಯಕವಾದ) ವೇದದ ಕಾಂತಿ, ವೇದದ ಪ್ರಭೆ, ವೇದದ ಸ್ವಾರಸ್ಯ; ಆಮ್ನಾಯ=ವೇದ.

"ವಾಂಛಾಬಂಧಂ, ವಾಂಛಾಕರಂ, ವಾಂಛಕಂ" ಎಂದರೆ ಅಪೇಕ್ಷೆ, ಅಪೇಕ್ಷಿತಳು (ಅಥವಾ ಅಪೇಕ್ಷಿತನು), ಅಪೇಕ್ಷಕನು ಅಥವಾ (ಅಪೇಕ್ಷಕಳು)—ಈ ಮೂರೂ ಒಂದೇ ವ್ಯಾಪಾರದ ಮೂರು ಬೇರೆಬೇರೆ ಅಂಶಗಳು. ಅಪೇಕ್ಷಕನೂ, ಅಪೇಕ್ಷಿತಳೂ ಒಬ್ಬರಲ್ಲೊಬ್ಬರು ಮನಸ್ಸಿನಿಂದ ಒಂದುಗೂಡಿದಾಗ ತಾವಿಬ್ಬರೂ ಬೇರೆ ಬೇರೆ ಎಂಬುದು ಮರೆತುಹೋಗುತ್ತದೆ. ಆಗ ಅಪೇಕ್ಷೆಯ ಕಳವಳವೂ ಮುಗಿದು ಮನಸ್ಸು ನೆಮ್ಮದಿಯಾಗುತ್ತದೆ. ಹೀಗೆ ಮೂರೂ ಒಂದಾಗುತ್ತದೆ. ಹಾಗೆಯೇ ಭಕ್ತನು ದೇವರಲ್ಲಿ ತಲ್ಲೀನನಾದಾಗ ಅವನ ಬೇರೆತನ ಇಲ್ಲವಾಗುತ್ತದೆ. ಇದೇ ಅದ್ವೈತಯೋಗ. ಇದೇ ಕೇಶವ ವೇದದ ಸಾರಾಂಶ.

# ಪದ್ಯಗೀತಗಳ ಮೊದಲ ಚರಣಗಳ ಅಕಾರಾದಿ


| | ಪುಟ |
|---|---|
| ಅದಿತಿಯ ಸುತರಿಂಗಮೃತವ ... | ೩೩ |
| ಅನಂತಕಾಲಾಯತ ತೇಜ ... | ೧೨೪ |
| ಅಭಿನಯ ಚಟುಲಾಂಗೀ ... | ೯೮ |
| ಅಭಿನವಾವತಾರಿಯಾದ ... | ೭೧ |
| ಅಂಗಾಂಗ ತಾರಂಗವೆ ... | ೩೪ |
| ಆನಂದರಸ ಸನ್ನಿಧಾನೇ-ದೇವಿ ... | ೧೧೯ |
| ಆಭರಣ ನಿನಗೇತಕೇ-ಸಖಿಯೇ ... | ೧೦೭ |
| ಆರ ನಗಿಸುವೇ ... | ೭೫ |
| ಆವ ಜೀವಕೆ ಶೂಲ ... | ೧೨೫ |
| ಆವ ದೇವಿಯೆ ನೀನು ... | ೧೨೭ |
| ಆವ ರಾಗವ ಪಾಡುವೇ ... | ೬೩ |
| ಆಹಾ !—ಮೋಹಾಭಿನಯದ ... | ೮೯ |
| ಇನಿಯನ ನೆನೆದಾರಿವಳ್ ... | ೬೮ |
| ಇನ್ನು ಮೇಕೆ ಬಾರನೇ ... | ೧೪೦ |
| ಇವಳಾರ್ ತಾಂಡವ ರಭಸಕೆ ... | ೫೮ |
| ಎದೆಗುದಿ ಲೋಕದ ಮಧ್ಯ ... | ೩೩ |
| ಏನಿದು ರೋಷಾ ... | ೭೩ |
| ಏನೀ ಭಯಭ್ರಾಂತಿಯೇ ... | ೯೭ |
| ಏನೀ ಮನೋನ್ಮಾದನ ... | ೩೧ |
| ಏನೀ ಮಹಾನಂದವೇ ... | ೫೫ |
| ಏನೇ ಶುಕಭಾಷಿಣೀ—ಇದು ... | ೪೩ |
| ಏಸು ಕಾಲ ನೀಂ ಕಾಯುವೇ ... | ೧೨೧ |
| ಓ ಮುಗ್ಧ ಕೋಪನೇ ... | ೪೯ |
| ಕಣಿ ಪೇಳುವೆಯೇನಜರಾಣಿಯೆ ... | ೧೦೦ |
| ಕದಲದ ನೀರಿನ ಮೇಗಡೆ ... | ೩೩ |
| ಕಬರೀಭರಮುಂ ... | ೫೨ |
| ಕರೆದವರಾರೇ ಓ ... | ೧೩೫ |
| ಕಲ್ಪನ ಪ್ರತಿಭಾ ಸಮುದ್ರದಿ ... | ೩೨ |
| ಕಾಪಿಕ ವ್ಯಾಜದಿಂದಂತ— ... | ೪೮ |
| ಕಾಲನ ನಾಂ ಜಯಿಸಿಹೆನಾ ... | ೮೨ |

| | ಪುಟ |
|---|---|
| ಕೌಸುಮ ಬಾಣನ ... | ೧೪೩ |
| ಕಾಲುಂಗುರ ನೆವವೇ ... | ೧೧೫ |
| ಕಾಂತಾ ಸ್ವತಂತ್ರೋಚ್ಛ್ರಯ ... | ೩೧ |
| ಕೀರೋಕ್ತಿಯೊಳಾವುದನೋ ... | ೪೬ |
| ಕುಟಿಲಕುಂತಲೆ—ಕುಮುದ ... | ೬೯ |
| ಕೃತಕ ಶೂಲಧಾರಿಣೀ ... | ೮೩ |
| ಕೇಶದ ಭರವೇಂ ನಿನ್ನೀ ... | ೧೧೬ |
| ಕೇಶವಾಮೋದ ರಾಸಿಕ್ಯಂ ... | ೧೨೮ |
| ಕೇಶವೇಶನ ರಾಣಿಯರ್ ... | ೩೨ |
| ಕೇಶವೇಶಲಸದ್ರೂಪಂ ... | ೫೨ |
| ಕೊರಗದಿರೆಲೆ ಬಾಲಿಕೇ ... | ೧೩೮ |
| ಕೊರವಂಜಿಯ ವೇಷದಿ ... | ೧೧೦ |
| ಕೊಳಲನೂದುವರಾರೆ ... | ೧೦೯ |
| ಕೋಪವಿದೇನೆಲೆ ... | ೫೧ |
| ಕ್ಷಣಿಕವನಕ್ಷಯಪದಕಂ ... | ೩೪ |
| ಗಡ್ಡವಿಾಸೆಗಳೇನೆ ... | ೭೪ |
| ಗೆಲಿದೌ ಲಲಿತಾಂಗೀ ... | ೧೪೨ |
| ಗೋಪಿಯರೊಲಿದರ್ಚಿಸಿದಾ ... | ೬೦ |
| ಚದುರೆಯರೊಲವಿನ ... | ೩೩ |
| ಜಯತಿ ಧರಣಿ ಲೋಕೋ ... | ೨೭ |
| ಜಯ ವಿಜಯ ಚೆನ್ನಕೇಶವ ... | ೧೪೯ |
| ಜಯ ವಿಶ್ವಮೋಹನನೆ ... | ೧೪೬ |
| ಜೀವ ಜೀವದ ಹೃದಯ ... | ೧೪೪ |
| ಜೀವಾಂತಃಕರಣಾಂಬು ... | ೩೧ |
| ಝುಣಜ್ಝುಣತ್ಕ ಕಿಂಕಿಣೀ ... | ೫೪ |
| ಝುಲ್ಲರೀ ಝುಂಕೃತಾಮೋದ ... | ೮೬ |
| ಡಂಗುರ ಪೊಯ್ಸುವದದೇನೆ ಜನ ... | ೫೯ |
| ತರಣಿಗೆ ದೀಪೋತ್ಸವಮೇಂ ... | ೧೦೬ |
| ತರಂಗಿತಂ ಭೂತಲಮದ್ರಿ ... | ೩೪ |
| ತಾನೆಲ್ಲ ವಿಶ್ವದ್ಯುತಿಶಕ್ತಿ ... | ೩೧ |

| | ಪುಟ |
|---|---|
| ದುರುಳಂ ಮಡಿಯದೆ ನಾಸೀ ... | ೧೨೮ |
| ದೂರನದೇಂ ತಂದಿಹಳೀ ... | ೪೭ |
| ದೃಷ್ಟ ವೃಶ್ಚಿಕಾ ... | ೯೬ |
| ದೈತೇಯರ ಮೋಹಿನಿ ಕಣ್ಸೆಡಿದಾ | ೬೪ |
| ಧನ್ಯ ಮೂರ್ಧನ್ಯ-ದೇವಶರಣ್ಯ ... | ೩೯ |
| ಧನುವಂ ಪಿಡಿದಿರ್ದೊಡದೇಂ ... | ೮೪ |
| ಧರಿಸಲ್ ಪಾದಾಂಗುಳ್ಯಾ ... | ೧೧೪ |
| ಧೃತನಾಗವೀಣೇ ... | ೧೦೫ |
| ನಟನವಾಡಿದಳ್-ತರುಣಿ ... | ೧೧೧ |
| ನಮಃ ಕೇಶವನಾಥಾಯ ... | ೨೮ |
| ನರನಾರೀ ಹೃದಯಂಗಳ ... | ೧೦೪ |
| ನರಾಂಗನಾ ಭಾವಸುಖ ... | ೩೫ |
| ನಾಥನೇಂ ಮುನಿದನೆ ... | ೧೩೪ |
| ನಾರೀ ತನುವೋ ... | ೭೨ |
| ನೀಡೀ ಜನರ್ಗಚ್ಛದ ನೇತ್ರ ... | ೧೪೯ |
| ನೃತ್ತದ ರಭಸವಿದೇನೇ-ಎಲೆ ... | ೧೩೩ |
| ನೃತ್ತಹಾಸಿನೀ ಮತ್ತಕಾಶಿನೀ ... | ೧೩೯ |
| ನೃತ್ಯನೈಪುಣೀ ನಿತ್ಯರಾಗಿಣೀ ... | ೭೭ |
| ನೃತ್ಯ ಸರಸ್ವತಿ-ಸತ್ಯಲೋಕ ವಿಭೂತಿ | ೧೩೧ |
| ನ್ಯೂನಾಂಶದಿಂ ಲೋಕದಿ ... | ೧೪೯ |
| ಪರವಸ್ತು ವಜ್ರದೊಂದು ... | ೩೪ |
| ಪಾರಾವಾರದಿ ಮಾರುತಾಹತಿ ... | ೩೧ |
| ಪೂರ್ಣಮೆನಿಪುದು ಹೃದಯ ... | ೧೩೦ |
| ಬಿರೆಯಿಸಿ ಚಿತ್ತವ ರುಚಿಯೊಳ್ ... | ೧೪೯ |
| ಬೇಲೂರ ಶಿಲಾಬಾಲಾಮಣಿಯರ್ | ೩೨ |
| ಭಕ್ತಿಯಿವಳ್ ನಾದಸುಖಾ ... | ೭೮ |
| ಭಜಾಮ್ಯಹಂ ಶ್ರೀ ವಸುಧಾ ... | ೨೮ |
| ಭಜಿಸುವಳೇಂ ಕೇಶವನಂ ... | ೧೨೦ |
| ಭಾವದೇವತೆ ಕಾವ್ಯಗಾಯನ ... | ೧೨೬ |
| ಭಾವವಿದೇನೇ ಸಖೀ ... | ೮೧ |
| ಭುವನಜೀವ ವಿಲಾಸಂ ... | ೩೮ |
| ಭೈರವ ವೇಷದಿಂ ... | ೫೭ |
| ಭೈರವ ಶೂಲ ಕಪಾಲಗಳಿಂದೇಂ ... | ೫೬ |
| ಮಧುರಕಲಾಮಂಥಾನಂ ... | ೩೩ |
| ಮರುಳನೇನವಂ ... | ೧೪೧ |
| ಮಂದಸ್ಮಿತಪ್ರಹಿತ ... | ೪೦ |
| ಮಾಕಂದ ಸಂಧಾನಿತ ಪಾಣಿ ... | ೭೦ |
| ಮಾಣಿಕ್ಯರಾಗಾಂಚಿತ ... | ೬೬ |
| ಮಾನವೊ ಪೀನಾಂಗ ... | ೧೧೨ |
| ಮಾನುಷ್ಯ ಹೃನ್ಮಧ್ಯದಿ ... | ೬೨ |
| ಮುಗುದೆಯಾದೆಯ ಕನ್ನೇ ... | ೪೧ |
| ಮುದ್ದಿನ ವಿಕಟೆಯ ನೋಡೇ-ಎಲೆ | ೧೧೭ |
| ಮುಳಿದನೇ- ಸಖೀ ... | ೧೩೭ |
| ಮೂಕಭಾಷೆಯೊ ನಾಕಭಾಷೆಯೊ | ೩೫ |
| ಮೋಸ ಗೆಯ್ದನೇ ಕೆಳದೀ ... | ೧೩೬ |
| ಮೋಹನಾಂಬುಧಿಯುತ್ತರಂಗ ... | ೧೧೮ |
| ಯದುವಂಶತಿಲಕನ ... | ೬೧ |
| ಯಂ ಶೈವಾಸ್ಸಮುಪಾಸತೇ ... | ೨೮ |
| ರಾಕೇಂದುಮುಖಿಯ ವಿರಹ ... | ೪೪ |
| ರಾಮಣೀಯಕ ಸತ್ತ್ವಸಾಗರ ... | ೩೫ |
| ರೂಪಂ ಧ್ವನಿ ದನಿ ರಾಗಾ ... | ೩೪ |
| ರೋಷವಿದೇನೇ ಸಖೀ ... | ೧೧೩ |
| ಲಕ್ಷಣ ನಿರ್ದೇಶಗಳಿಂ ... | ೩೪ |
| ಲಾವಣ್ಯಂ ಸುಳಿದಂದು ... | ೩೨ |
| ಲೀಲಾನಿಷಾದಿಯೆ ಏನೇನ ... | ೮೫ |
| ವಾಸಂತಕೇಳೀರತೇ- ... | ೪೫ |
| ವಿಜಯಕೇಶವ ನಿನ್ನ-ಭಜಿಸೆ ... | ೭೯ |
| ವಿಷ್ಣುರ್ಜಿಷ್ಣುರ್ಮಹೀಪಾಲಃ ... | ೨೭ |
| ವೀಟೀಧರೇ-ಚಾಟುಚತುರೇ ... | ೧೦೩ |
| ವೀಣಾಪಾಣೀ-ವಿಶ್ವಕಲ್ಯಾಣೀ ... | ೬೭ |
| ವೇಣೀಸಂಹಾರೇ-ಏಣಾಂಕ ... | ೧೨೯ |
| ವೇಣುವ ತಾಂ ಬಾಜಿಸಲುಂ ... | ೧೦೮ |
| ಶಶಿಸ್ಮಿತಳ್ ವೀಜನವೀಟಿಕಾ ... | ೧೦೨ |
| ಶಾರದೆ ತತ್ತ್ವಾರ್ಥ ನೃತ್ಯ ... | ೧೦೧ |
| ಶಾರಿಯುಗ್ಮಂ ... | ೫೦ |
| ಶಾನ್ತಿಕೃತ್ ಸರ್ವಭೂತಾನಾಂ | ೨೭ |
| ಶುಕಸಂಭಾಷಿಣಿ ಹಾಸಿನಿ ... | ೪೨ |
| ಶುಕಿಯೇಂ ಸಖಿಯಿಂದಾಪ್ತಳೆ ... | ೧೨೨ |

| | ಪುಟ | | ಪುಟ |
|---|---|---|---|
| ಶುಭಾಂಗಿ ಲೋಲಲೋಚನೇ ... | ೧೩೨ | ಸುಮಸಾಯಕ ... | ೧೪೭ |
| ಶ್ರೀ-ಚೆನ್ನಕೇಶವಾ-ಶೃಂಗಾರ ... | ೩೭ | ಸುಂದರಿ ನೀನೇ-ಸುಂದರಿ ನೀನೇ ... | ೮೭ |
| ಶ್ರೀಮತ್ತ್ರೈಲೋಕ್ಯ ಪೂಜ್ಯಾಯ ... | ೨೭ | ಸೊಗಸಾಯಿತೆ ಕಬರೀ ... | ೫೩ |
| ಶ್ರೀವಿಷ್ಣು ಸಮ್-ರಾಜ್ಞೀ ಮಂಗಲಂ | ೧೪೮ | ಸೋಲಿಸಿದೆಯೆ ಶಿವನ ... | ೬೫ |
| ಶ್ರೀ ವಿಷ್ಣು ಸುಕುಮಾರಾ ... | ೧೪೫ | ಸೌಂದರ್ಯಂ ಪರವಸ್ತುಸಾಗರ ... | ೩೨ |
| ಸರಸವನಾಡೆ ನೀಂ ... | ೯೯ | ಸ್ವರ್ಗಹಸ್ತವನೇಂ ತೋರ್ಪ್ಪಳ್ ... | ೮೦ |
| ಸರಸವಾಡೆ ಕೆಳೆಯನೆತ್ತ ... | ೧೨೩ | ಹರದಗ್ಧಸ್ಮರ ಭಸ್ಮವ ... | ೭೬ |
| ಸಸ್ಮಿತಾನನದಿಂದೆ ಮೋಹನ ... | ೮೮ | ಹೃದಯದ ಭಾಸಿಕೆ ಸಂಪೂರ್ಣಂ | ೩೨ |
| ಸಾಂದ್ರಾಮೋದ ಪ್ರಭಾಕರ್ಷಣ | ೧೪೯ | | |

# ರಾಗಗಳ ಅಕಾರಾದಿ


| | ಗೀತ |
|---|---|
| ಅಠಾಣ ... | ೧೧ |
| ಅಸಾವೇರಿ ... | ೪೯ |
| ಆನಂದ ಭೈರವಿ ... | ೩೧ |
| ಆರಭಿ ... | ೧ |
| ಉದಯ ರವಿಚಂದ್ರಿಕೆ ... | ೫೫ |
| ಕಮಾಸು ... | ೩೦ |
| ಕಲ್ಯಾಣಿ ... | ೧೭ |
| ಕಾನಡಾ ... | ೨೪ |
| ಕಾಪಿ ... | ೮ |
| ಕಾಂಭೋಜಿ | ೧೮, ೩೭, ೫೮ |
| ಕೀರವಾಣಿ ... | ೭ |
| ಕುರಂಜಿ ... | ೫೯ |
| ಕೇದಾರ ... | ೪ |
| ಕೇದಾರಗೌಳ ... | ೯, ೨೩ |
| ಖರಹರ ಪ್ರಿಯ ... | ೪೮ |
| ಗೌಳಿಪಂತು ... | ೩ |
| ಚಕ್ರವಾಕ ... | ೫೪ |
| ಜಗನ್ಮೋಹಿನಿ ... | ೧೬ |
| ಜಂಜೂಟಿ ... | ೫೭ |
| ತೋಡಿ ... | ೨೮ |
| ದರ್ಬಾರು ... | ೪೬ |
| ನಾದನಾಮಕ್ರಿಯೆ ... | ೫೦ |
| ನಾಟ ... | ೨೨ |
| ನಾಟಕುರಂಜಿ ... | ೧೦ |
| ನೀಲಾಂಬರಿ ... | ೨೯ |
| ಪುನ್ನಾಗವರಾಳಿ ... | ೪೭ |
| ಪೂರ್ವೀಕಲ್ಯಾಣಿ ... | ೪೫ |
| ಫರಜು ... | ೩೨ |
| ಬಿಲಹರಿ ... | ೩೪ |
| ಬೇಗಡೆ ... | ೨೭ |
| ಬೇಹಾಗ್ ... | ೫ |
| ಭೈರವಿ ... | ೧೨ |
| ಮಣಿರಂಗು ... | ೪೦ |
| ಮಧ್ಯಮಾವತಿ | ೧೩, ೩೯, ೬೦ |
| ಮಾಯಾಮಾಳವಗೌಳ ... | ೨೦ |
| ಮುಖಾರಿ ... | ೫೨ |
| ಮೋಹನ ... | ೨೮ |
| ಯದುಕುಲಕಾಂಭೋಜಿ ... | ೧೪ |
| ರಾಗಮಾಲಿಕೆ ... | ೨೮ |
| ರೀತಿಗೌಳ ... | ೧೫ |
| ಲತಾಂಗಿ ... | ೫೬ |
| ಲಾವಣಿ ... | ೨೬ |
| ವಸಂತ ... | ೬ |
| ಶಂಕರಾಭರಣ | ೨, ೨೧, ೨೫, ೩೩ |
| ಶಾಹನ ... | ೪೧ |
| ಶುದ್ಧಸಾವೇರಿ ... | ೧೯ |
| ಶ್ರೀರಂಜಿನಿ ... | ೫೩ |
| ಸಾರಂಗ ... | ೪೩ |
| ಸಾವೇರಿ ... | ೪೪ |
| ಸಾಂಗತ್ಯ ... | ೨೬ |
| ಸಿಂಹೇಂದ್ರ ಮಧ್ಯಮ ... | ೩೫ |
| ಹಂಸಧ್ವನಿ ... | ೪೨ |
| ಹಿಂದೋಳ ... | ೩೮ |
| ಹುಸೇನಿ | ೩೬, ೫೧ |



WESLEY PRESS, MYSORE

VIJAYA EVENING COLLEGE,
LIBRARY
BANGALORE-4.
ACCN. NO. 1934
SECTION
COST Rs. 8/=
Date 19.2.1970 Librarian.

Call No :

Author : ಗುಂಡಪ್ಪ. ಡಿ.ವಿ

Title : ಅನ್ತಃಪುರಗೀತೆ.

| Signature | Borrowing Date |
| --- | --- |
| [illegible] | 8-9-82 |
| | |
| | |
| | |
| | |
| | |
| | |
| | |

Vijay

Accn. N

1934